ಜನಪದ ವಿಚಾರ

ಬೆಲೆ ೧೦-೦೦

ಚಿಂತನ *. ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೧೧ ಜನವರಿ-೨೦೧೧ ಸಂಚಿಕೆ-೬



ಶಾಂತಿಯಾ ಸಿಪಾಯಿ ನಡೆ!
ಕ್ರಾಂತಿಯಾ ಸಿಪಾಯಿ ನಡೆ!

ಜನಪದ ವಿಚಾರದಲ್ಲಿ

ಜನೆವರಿ - ೨೦೧೧

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜೆಸ್ಟ್

ಜನೆವರಿ – ೨೦೧೧
ಸಂಪುಟ – ೧೧
ಸಂಚಿಕೆ – ೬

ಸಂಪಾದಕ
ಸುರೇಂದ್ರ ಕೌಲಗಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ–೫೭೧೪೩೧
ಜಿಲ್ಲಾ ಮಂಡ್ಯ

✆08236 316344

e-mail : janapada@yahoo.com
web: janapada.net

‘ಇನ್ನಿನಿಸು ನೀ ಮಹಾತ್ಮಾ, ಬದುಕಬೇಕಿತ್ತು!’

ಇನ್ನಿನಿಸು ನೀ ಮಹಾತ್ಮಾ, ಬದುಕ ಬೇಕಿತ್ತು!
ಈಗ ಭಾರತಕತ್ಯಗತ್ಯವಿದೆ ನಿನ್ನ,
ಬಿರುಗಾಳಿಗೊಲೆವ ಹಡಗಂತಿಹುದದಾಸತ್ತು,
ನಿನ್ನ ಹೊರತಾರೊಯ್ಯೆ ರೇವಿನೊಳದನ್ನ?

ಹಿಮನಗವೊ ನಿನ್ನ ಚಲ ವಿಮಲ ಭಗವದ್ಭಕ್ತಿ,
ಜಗವನಪ್ಪುವ ವಾರ್ಧಿಯೆನೆ ಜಗತ್ಪ್ರೀತಿ,
ನಿನ್ನ ಸೂರ್ಯಾತಪಕಭಿನ್ನ ಮಾಸದಶಕ್ತಿ–
ಕಾದುವೈ ನಮ್ಮನೀವರಮೇಕರೀತಿ!

ಸ್ವಾರ್ಥಪರರಾಗಿಹೆವು ದೇವರಿಲ್ಲೆಮಗಿಂದು,
ಸೋದರತೆ ಇಲ್ಲ, ಮುಂದಿನದಿಲ್ಲ ಗೊಡವೆ!
ಧರ್ಮಬಾಹಿರರೆಮ್ಮನೆತ್ತಲಿನ್ನಾರೆಂದು
ತೋಚದೆ, ಮಹಾತ್ಮ,
ನಿನಗಿಂತು ಮೊರೆಯಿಡುವೆ

ಗಾಳಿ ಕಾಣದೆ ಬೀಸಿ ಉಸುರುಗೊಳಿಪಂತೆ,
ತಾರ ನವಜೀವನವ ನಮ್ಮನುಳಿಪಂತೆ!

– *ಗೋವಿಂದ ಪೈ*

(ಮಹಾತ್ಮಾ ಗಾಂಧೀಯವರ ೬೩ನೇ ಪುಣ್ಯತಿಥಿಯ ನೆನಪಿನಲ್ಲಿ ಓದುಗರಿಗೆ ಈ ಕವನ ಅರ್ಪಿಸಲಾಗುತ್ತಿದೆ. - ಸಂ)

ವಿಚಾರ ದೀಪ್ತಿ

ಆತ್ಮಶ್ರೀ ವಿದೂರವಾದ ರಾಜಕೀಯ ನನ್ನ ಪಾಲಿಗೆ ಸರ್ವಥಾ ತ್ಯಾಜ್ಯವಾದ ಕಲಂಕ. ರಾಜಕೀಯ ರಾಷ್ಟ್ರಗಳನ್ನು ಕುರಿತದ್ದು. ಯಾವುದು ರಾಷ್ಟ್ರಗಳ ಹಿತವನ್ನು ಕುರಿತದ್ದೋ ಅದು ಆಧ್ಯಾತ್ಮಪ್ರವೃತ್ತಿಯುಳ್ಳ ವ್ಯಕ್ತಿಯ, ಎಂದರೆ ಸತ್ಯದ ಮತ್ತು ಭಗವಂತನ ಅನ್ವೇಷಕ ಸಾಧನೆಯ ಅಂಗಗಳಲ್ಲಿ ಒಂದಾಗಿರುವುದು ಅನಿವಾರ್ಯ. ನನಗಾದರೊ ಭಗವಂತನೆಂದರು ಒಂದೇ, ಸತ್ಯವೆಂದರೂ ಒಂದೇ. ಭಗವಂತ ಅಸತ್ಯದ ಮೂರ್ತಿಯೆಂದೂ ಹಿಂಸೆಯ ಮೂರ್ತಿಯೆಂದೂ ಯಾರಾದರೂ ಸ್ಥಿರಪಡಿಸಿದರೆ ಅಂತಹ ಭಗವಂತನನ್ನು ಪೂಜಿಸಲು ನಾನು ನಿರಾಕರಿಸುತ್ತೇನೆ. ರಾಜಕೀಯದಲ್ಲಿಯೂ ಭಗವಂತನ ರಾಜ್ಯ ಸ್ಥಾಪಿತವಾಗಬೇಕಿದೆ. ನನ್ನ ಬದುಕಿನ ಅತ್ಯಂತ ಅತ್ಮೀಯ ವಸ್ತುಗಳಿಂದ ರಾಜಕೀಯ ಕಲುಷಿತವಲ್ಲ. ಈ ಎಲ್ಲವೂ ಸತ್ಯ-ಅಹಿಂಸೆಗಳೊಂದಿಗೆ ಜಟಿಲವಾಗಿ ಹೆಣೆದುಕೊಂಡಿವೆ. ಸತ್ಯವನ್ನು ಬಲಿಗೊಟ್ಟು ಸ್ವಾತಂತ್ರ್ಯವನ್ನು ಪಡೆಯುವುದಕ್ಕಿಂತ ಭಾರತ ವಿನಾಶಹೊಂದುವುದೇ ಹೆಚ್ಚು ಲೇಸೆಂಬುದು ನನ್ನ ಮತ. ರಾಜಕೀಯ ಸಂಪರ್ಕವಿಲ್ಲದೆ ಸಮಾಜಸೇವೆಯಂಥ ಕೆಲಸವನ್ನು ಕೂಡ ನಡೆಸುವುದು ಅಸಾಧ್ಯವೆಂದು ನನ್ನ ಅನುಭವಕ್ಕೆ ಬಂದುದರಿಂದ ರಾಜಕೀಯ ಕ್ಷೇತ್ರವನ್ನು ನಾನು ಪ್ರವೇಶಿಸುವುದು ಅನಿವಾರ್ಯವಾಯಿತು. ಸಾಮಾಜಿಕ ಮತ್ತು ನೈತಿಕ ದೃಷ್ಟಿಯಿಂದ ರಾಜಕೀಯ ಕಾರ್ಯವು ಪರಿಗಣಿತವಾಗಲೇ ಬೇಕು.

ಮಾನವನ ಮನಸ್ಸಾಗಲಿ ಸಮಾಜವಾಗಲಿ ರಾಜಕೀಯ, ಸಾಮಾಜಿಕ ಧಾರ್ಮಿಕ ಎಂಬ ಪ್ರತ್ಯೇಕ ವಿಭಾಗಗಳಾಗಿ ವಿಂಗಡಣೆಯಾಗಿಲ್ಲ ಎಂಬುದು ನನ್ನ ವಿಶ್ವಾಸ. ಅವುಗಳ ನಡುವೆ ಪ್ರತಿಕ್ರಿಯೆ ಇದ್ದೇ ಇರುತ್ತದೆ.

ಆತ್ಮಶ್ರೀ ನಿಯಮಕ್ಕೆ ತನ್ನದೇ ಆದ ಜೀವನದ ಸಾಮಾನ್ಯ ವ್ಯಾಪಾರಗಳ ಮೂಲಕವಾಗಿ ಮಾತ್ರವೇ ವ್ಯಕ್ತಗೊಳ್ಳುತ್ತದೆ. ಹೀಗೆ ಅದು ಆರ್ಥಿಕ ಸಾಮಾಜಿಕ ಮತ್ತು ರಾಜಕೀಯ ವಲಯಗಳ ಮೇಲೂ ಪರಿಣಾಮವನ್ನು ಉಂಟುಮಾಡುತ್ತದೆ.

– ಮೋ.ಕ. ಗಾಂಧೀ

ಶಾಂತಿಯಾ ಸಿಪಾಯಿ ನಡೆ!
ಕ್ರಾಂತಿಯಾ ಸಿಪಾಯಿ ನಡೆ!

– ಸುರೇಂದ್ರ ಕೌಲಗಿ

ಆಗಸ್ಟ್ ೧೯೪೭ ದೇಶಕ್ಕೆ ಸ್ವಾತಂತ್ರ್ಯ ಬಂತು. ದುರ್ದೈವವೆಂದರೆ ಅಂದಿನಿಂದಲೇ ದೇಶ ನಾಯಕತ್ವ ರಹಿತವಾಯಿತು. ಇಂದು ೧೫೦ ಕೋಟಿ ಜನಸಂಖ್ಯೆಯ ದೇಶಕ್ಕೆ ಓರ್ವ ಸಮರ್ಥ ನಾಯಕನಿಲ್ಲವಾಗಿದೆ. ಭಾರತದ ಇಂದಿನ ಸ್ಥಿತಿ ದುರಂತಕ್ಕೀಡಾದ ಆ ಐತಿಹಾಸಿಕ ದುರಾದೃಷ್ಟ ಟೈಟಾನಿಕ್ ನೌಕೆಯಂತಾಗಿದೆ. ಕಳೆದ ಡಿಸೆಂಬರ್ ೨೦೧೦ರಂದು ಜಿ.ಎಸ್.ಎಲ್.ವಿ ರಾಕೆಟ್ ವಾಹಕ ಶ್ರೀಹರಿಕೋಟಾದಲ್ಲಿ ಹಾರಿದ ೫೫ ಕ್ಷಣಗಳಲ್ಲಿ ಚಿಂದಿಯಾಗಿ ಅದರ ಬಿಡಿಭಾಗಗಳು ಬೆಂಕಿಗೆ ತುತ್ತಾಗಿ ಸಮುದ್ರದಲ್ಲಿ ಬಿದ್ದವು. ಬಡ ಭಾರತ ದೇಶದ ೩೨೫ ಕೋಟಿ ಹಣ ಸಾಗರದ ಪಾಲಾಯಿತು. ಭಾರತದ ಈ ವೈಜ್ಞಾನಿಕ ದುರ್ಘಟನೆ ದೇಶದ ಕರಾಳ ಭವಿಷ್ಯದ ಸಂಕೇತವಾಗಿದೆಯೇನೋ ಎಂದು ಅನಿಸದಿರಲಾರದು. ದೇವರ ಕೃಪೆಯಿಂದ ಅಂಥ ದುರ್ಘಟನೆ ಭಾರತಕ್ಕೊದಗದಿರಲಿ. ಆದರೆ ಗಾಂಧೀಜಿಯವರಿಗೆ ಅನಿಸಿದ್ದಂತೆ ಭಾರತ ತನ್ನ ಆತ್ಮವನ್ನು ಕಳೆದುಕೊಳ್ಳುತ್ತಿದೆ. ಬಂದೊದಗಿರುವ ಈ ದುರ್ದಶೆಗೆ ಯಾರು ಹೊಣೆ? ಈ ಪ್ರಶ್ನೆಗೆ ಮಾತ್ರ ಸಮಾಧಾನಕರ ಉತ್ತರ ದೊರೆಯುತ್ತಿಲ್ಲ. ಏಕೆಂದರೆ ಪ್ರತಿಯೊಬ್ಬ ಭಾರತೀಯನೂ ಆಷಾಢಭೂತಿಯಾಗಿದ್ದಾನೆ. ಯಾವ ತಪ್ಪಿಗೂ, ಯಾವ ದೋಷಕ್ಕೂ ತಾನು ಹೊಣೆಯಲ್ಲ. ಅದಕ್ಕೆಲ್ಲ ಬೇರೆಯವರು ಹೊಣೆಯಾಗಿದ್ದಾರೆಂಬುದು ಅವನ ಖಚಿತ ಅಭಿಪ್ರಾಯ. ಪರಿಸ್ಥಿತಿ ಇಷ್ಟು ಹದಗೆಟ್ಟಿರುವಾಗ ಮಾಡುವುದೇನು? ಅಮೇರಿಕಾಕ್ಕೆ ಶರಣಾಗುವುದೇ, ರಶಿಯಾಕ್ಕೆ ಶರಣಾಗುವುದೇ ಅಥವಾ ಚೀಣಾಕ್ಕೆ ಶರಣಾಗುವುದೇ? ಅಥವಾ ಪುನಃ ಎರಡನೆಯ ಸ್ವಾತಂತ್ರ್ಯ ಹೋರಾಟ ನಡೆಸಿ ಇಂದಿನ ಎಲ್ಲ ಪ್ರಕಾರದ ಸಂಕಷ್ಟಗಳ ಸಂಕೋಲೆಯಿಂದ ಬಿಡುಗಡೆ ಹೊಂದುವುದೆ? ಈ ಪ್ರಕಾರದ ಎಲ್ಲ ಪ್ರಶ್ನೆಗಳಿಗೆ ಉತ್ತರ ಎರಡನೆಯ ಸ್ವಾತಂತ್ರ್ಯ ಹೋರಾಟ ನಡೆಸುವುದೇ ಆಗಿದೆ. ಆದರೆ ಆ ಸ್ವಾತಂತ್ರ್ಯದ ಹೋರಾಟ ಕೇವಲ ರಾಜಕೀಯೋದ್ದೇಶತವಾಗಿರದೆ ನೈತಿಕೋದ್ಧಾರದ ಹೋರಾಟವಾಗಿರುತ್ತದೆ, ಆತ್ಮಾವಲೋಕನದ ಹೋರಾಟವಾಗಿರುತ್ತದೆ, ಆತ್ಮವಿಮರ್ಶೆಯ ಹೋರಾಟವಾಗಿರುತ್ತದೆ, ಆರ್ಥಿಕ ಸಮಾನತೆಯ ಹೋರಾಟವಾಗಿರುತ್ತದೆ, ಪಾಶ್ಚಿಮಾತ್ಯ ರೀತಿಯ ಅರ್ಥವ್ಯವಸ್ಥೆ, ಪಾಶ್ಚಿಮಾತ್ಯ ರೀತಿಯ ಕೈಗಾರಿಕಾ ವ್ಯವಸ್ಥೆ, ಪಾಶ್ಚಿಮಾತ್ಯ ರೀತಿಯ ಶಿಕ್ಷಣ ವ್ಯವಸ್ಥೆ, ಪಾಶ್ಚಿಮಾತ್ಯ ಸಂಸ್ಕೃತಿಯ ಅಂಧಾನುಕರಣೆ ಇತ್ಯಾದಿಗಳ ವಿರುದ್ಧವಾಗಿರುತ್ತದೆ. ಇಂದಿನ ಎಲ್ಲ ಅನಾಹುತಗಳಿಗೆ ಪಶ್ಚಿಮ ದೇಶಗಳ ರೀತಿ–ನೀತಿಗಳ ಅಂಧಾನುಕರಣೆಯೇ ಕಾರಣವಾಗಿದೆ. ಇದು ಅಂಗೈ ಮೇಲಿನ ಹುಣ್ಣಿನಷ್ಟು ಸ್ಪಷ್ಟವಾಗಿದೆ. ಆದರೆ ಏಷಿಯನ್ನರಿಗೆ ಪಾಶ್ಚಿಮಾತ್ಯ ದೇಶಗಳೇ

ಅನುಕರಣೀಯವಾಗಿವೆ. ಭಾರತಕ್ಕಿಂತಲೂ ಪುರಾತನ ಸಾಂಸ್ಕೃತಿಕ ದೇಶವಾಗಿದ್ದ ಚೀನಾ ಕೂಡ ಪಶ್ಚಿಮದ ಡೌಲನ್ನು ಮೆಚ್ಚಿದೆ. ಅಂತೆ-ಯೇ ಜಪಾನ್, ಕೊರಿಯಾ ಮುಂತಾದ ದೇಶಗಳು.

ಪಾಶ್ಚಿಮಾತ್ಯ ದೇಶಗಳ ಅನುಕರಣೆಗೆ ಮೂಲಭೂತವಾಗಿ ಕಾರಣವಾದದ್ದು ಅವುಗಳ ತಾಂತ್ರಿಕ, ಕೈಗಾರಿಕ, ವೈಜ್ಞಾನಿಕ ಮುನ್ನಡೆ; ಅವುಗಳ ಶ್ರೀಮಂತಿಕೆ; ಅವುಗಳ ಸಮರ ವೀರತ್ವ, ಇವೆಲ್ಲಕ್ಕಿಂತ ಹೆಚ್ಚಾಗಿ ಪಾಶ್ಚಿಮಾತ್ಯ ದೇಶಗಳ ಈ ಎಲ್ಲ ಸಾಧನೆಗೆ ಕಾರಣವಾದ ಇಂಗ್ಲಿಷ್ ಭಾಷೆ. ಹಾಗೆ ನೋಡಿದರೆ ಮೂಲತಃ ವಿಜ್ಞಾನ, ತಂತ್ರಜ್ಞಾನ, ಕೈಗಾರಿಕೆ, ಭಾಷೆ ಇವು ಸಮಾಜೋಪಯೋಗಿಯೇ ಹೊರತು ಸಮಾಜ ದ್ರೋಹಿಗಳಲ್ಲ. ಆದರೆ ಇಲ್ಲಿ ತಪ್ಪಾಗಿರುವುದು ಮನುಷ್ಯನ ಚಿಂತನೆಯಲ್ಲಿ. ಇಪ್ಪತ್ತು ಸಾವಿರ ವರ್ಷಗಳಿಗಿಂತಲೂ ಪೂರ್ವದಲ್ಲಿ ರಚಿತವಾದ ಋಗ್ವೇದದಲ್ಲಿಯ ಶ್ರೇಷ್ಠ ಚಿಂತನೆಗಳನ್ನೇ ಆಧಾರವಾಗಿಟ್ಟುಕೊಂಡು ಇಂದಿನ ತಂತ್ರಜ್ಞಾನ, ವಿಜ್ಞಾನ ಮತ್ತು ಕೈಗಾರಿಕೆಗಳನ್ನು ಭಾರತೀಯರು ನಡೆಸಿಕೊಂಡು ಬಂದಿದ್ದದ್ದೇ ಆಗಿದ್ದರೆ ಅವು ಶಾಪವಾಗುವ ಬದಲು ವರವಾಗುತ್ತಿದ್ದವು. ಅಯ್ಯೋ, ಆದರೆ ಹಾಗಾಗಲಿಲ್ಲವಲ್ಲ, ಇಲ್ಲ ಸಂತ ವಿನೋಬಾರ ನೀತಿಕತೆಯನ್ನು ತಿಳಿಯುವುದು ಅಗತ್ಯವೆನಿಸುತ್ತದೆ. ಆ ಕತೆ ಹೀಗಿದೆ:

ದೇವ, ಮಾನವ, ದಾನವರು ತಮ್ಮ ತಂದೆಯಾದ ಪ್ರಜಾಪತಿಯ ಬಳಿ ಅಧ್ಯಯನ ಮಾಡುತ್ತಿದ್ದರು. ಅಧ್ಯಯನ ಮುಗಿದ ಬಳಿಕ ಮೂವರೂ "ಗುರುದೇವ, ನಮಗೆ ದೀಕ್ಷೆಕೊಡಿ" ಎಂದರು. ಪ್ರಜಾಪತಿ ಎಲ್ಲರಿಗೂ 'ದ' ಎಂಬ ಒಂದೇ ಅಕ್ಷರವನ್ನು ಹೇಳಿ ತಿಳಿಯಿತೇ ಎಂದು ಕೇಳಿದ. ದೇವತೆಗಳು ತಿಳಿಯಿತು, "ನಾವು ಕಾಮಿಗಳು, ಭೋಗದ ಚಾಳಿಯುಳ್ಳವರು, ಇಂದ್ರಿಯ ಲೋಲರು, ದಮನ ಮಾಡಿರಿ ಎಂದು ಹೇಳಿದಿರಿ" ಎಂದರು. ದಾನವರು ತಿಳಿಯಿತು, "ನಾವು ಕ್ರೋಧಿಗಳು, ದಯೆಯೇ ಇಲ್ಲದವರು, ದಯೆ ತೋರಿಸಿ ಎಂದು ಹೇಳಿದಿರಿ" ಎಂದರು. ಮಾನವರು ತಿಳಿಯಿತು, "ನಾವು ಲೋಭಿಗಳು, ಸಂಗ್ರಹದ ಬೆನ್ನುಹತ್ತಿ ಹುಚ್ಚರಾದವರು, ದಾನಮಾಡಿರಿ ಎಂದು ಹೇಳಿದಿರಿ" ಎಂದರು. ಪ್ರಜಾಪತಿ ಎಲ್ಲರ ಅರ್ಥ ಸರಿ ಎಂದು ಹೇಳಿದ. ಮೂವರೂ ತಮ್ಮ ತಮ್ಮ ಅನುಭವಗಳಿಂದ ಅರ್ಥ ಪಡೆದಿದ್ದರು. ಈಗ ದೇವ, ಮನುಷ್ಯ ಮತ್ತು ಅಸುರರು ನಾವೇ ಆಗಿದ್ದೇವೆ.

ಈ ಕತೆಯ ನೀತಿ ಏನೆಂದರೆ ಇಂದಿನ ಮನುಷ್ಯ ಕಾಮಿಯಾಗಿದ್ದಾನೆ, ಕ್ರೋಧಿಯಾಗಿದ್ದಾನೆ ಮತ್ತೆ ಲೋಭಿಯೂ ಆಗಿದ್ದಾನೆ. ಮನುಷ್ಯನ ಇಂದಿನ ಬುದ್ಧಿ ಅವನ ಕೈಯಲ್ಲಿರದೆ ಕಾಮ, ಕ್ರೋಧ ಮತ್ತು ಲೋಭದ ಕೈಯಲ್ಲಿದೆ. ಅಂದ ಮೇಲೆ ಇದರಿಂದಾಗುವ ಅನಾಹುತಗಳ ಪರಂಪರೆಯನ್ನು ಊಹಿಸಬಹುದು.

ಈಗ ಮುಗಿಯುತ್ತಿರುವ ೨೦೧೦ನೇ ವರ್ಷವನ್ನು ಭ್ರಷ್ಟಾಚಾರದ ವರ್ಷವೆಂದೂ, ಹಿಂಸಾಚಾರದ ವರ್ಷವೆಂದೂ ಕಪಟ ರಾಜಕಾರಣದ ವರ್ಷವೆಂದೂ, ನೂರು ರುಪಾಯಿಗೆ ಒಂದು ಕೆ.ಜಿ. ಈರುಳ್ಳಿ ಮಾರಾಟವಾದ ವರ್ಷವೆಂದೂ ಕರೆಯಬಹುದಾಗಿದೆ.

ಇನ್ನು ಮೇಲೆ ಈ ದೇಶದ ಒಡೆಯನಾದ ಮತದಾರ ಸುಧಾರಣೆಯ

ಹರಿಕಾರನಾಗಬೇಕು, ಸ್ವಾತಂತ್ರ್ಯ ಬಂದಾಗಿನಿಂದಲೂ ಅವನನ್ನು ಪುರುಷಾರ್ಥ ಹೀನನ್ನಾಗಿ ಮಾಡಲಾಗಿದೆ, ಪರಾವಲಂಬಿಯನ್ನಾಗಿ ಮಾಡಲಾಗಿದೆ, ವೈಚಾರಿಕ ದಾಸ್ಯತೆಗೆ ತಳ್ಳಲಾಗಿದೆ. ಆದ್ದರಿಂದ ಯಾವ ಮತದಾರ ರಾಜ್ಯಶಕ್ತಿಯ ಮೇಲೂ, ದಂಡಶಕ್ತಿಯ ಮೇಲೂ ಅಂಕುಶ ಇಡಬೇಕಿತ್ತೋ ಆತನೇ ಆ ಎರಡು ಶಕ್ತಿಗಳ ದಾಸನಾಗಿದ್ದಾನೆ. ಹೀಗಾಗಿ ತನ್ನ ಸುತ್ತಲಿನ ಪರಿಸ್ಥಿತಿ ಅವನಿಗೆ ಎಷ್ಟೇ ಪ್ರತಿಕೂಲವಾಗಿದ್ದರೂ ಅವನು ಬಂಡಾಯವೇಳುವ ಸ್ಥಿತಿಯಲ್ಲಿಲ್ಲ. ಅಲ್ಲದೆ, ಪ್ರಜಾತಂತ್ರ ವ್ಯವಸ್ಥೆಯಲ್ಲಿ ನ್ಯಾಯಾಂಗವೆಂಬ ವ್ಯವಸ್ಥೆಯಿದೆ. ಆ ವ್ಯವಸ್ಥೆಯ ಮೂಲಕ ತನ್ನ ಕಷ್ಟಗಳನ್ನೂ, ಅನ್ಯಾಯಗಳನ್ನೂ ಪರಿಹರಿಸಕೊಳ್ಳಬೇಕೆಂದು ಅವನಿಗೆ ತಿಳುವಳಿಕೆ ಕೊಡಲಾಗಿದೆ. ಆದರೆ ಆ ನ್ಯಾಯಾಂಗ ವ್ಯವಸ್ಥೆಯೂ ಭ್ರಷ್ಟವಾಗಿದೆ. ನ್ಯಾಯ ಕೊಡಬೇಕಾದ ನ್ಯಾಯಾಧೀಶರೇ ನ್ಯಾಯಾಂಗದ ಕಟೆಕಟೆಯಲ್ಲಿ ಕೈಕಟ್ಟಿ ನಿಲ್ಲಬೇಕಾದ ದುಃಸ್ಥಿತಿ ಬಂದಿದೆ.

ಇಂದು ನ್ಯಾಯಸಮ್ಮತವಾಗಿ ಕೆಲಸಮಾಡಬೇಕಾದ ಅಧಿಕಾರಶಾಹಿ ಕರ್ತವ್ಯಶೂನ್ಯಪ್ರಜ್ಞೆಯನ್ನು ಬೆಳೆಸಿಕೊಂಡಿದೆ. ದೇಶದ ಎಲ್ಲ ಕ್ಷೇತ್ರಗಳ ಭಾರತದ ಪ್ರಜೆಗಳೆಲ್ಲರ ಸುತ್ತಲೂ ಅಜ್ಞಾನದ ತಿಮಿರ ಸುತ್ತಿಕೊಂಡಿದೆ. ಈ ಮಹಾ ತಿಮಿರವನ್ನೋಡಿಸುವ ರವಿ ಭಾರತದ ದಿಗಂತದಲ್ಲಿ ಇನ್ನೂ ಉದಯಿಸಬೇಕಾಗಿದೆ.

ಭಾರತ ಪ್ರಜಾರಾಜ್ಯ ವ್ಯವಸ್ಥೆಯನ್ನು ಇಟ್ಟುಕೊಂಡದ್ದು ತಪ್ಪಾಯಿತೇ? ಗಣರಾಜ್ಯ ವ್ಯವಸ್ಥೆಯನ್ನಿಟ್ಟುಕೊಂಡದ್ದು ತಪ್ಪಾಯಿತೇ? ಇಂದಿನ ದೇಶದ ಪರಿಸ್ಥಿತಿಯ ಹಿನ್ನೆಲೆಯಲ್ಲಿ ತಪ್ಪಾಯಿತೆಂದೇ ಅನಿಸುತ್ತದೆ. ಈ ಅನಿಸಿಕೆ ಮೇಲ್ಪದರದ್ದು. ಈ ವಿಷಯ ಕುರಿತು ಆಳದಲ್ಲಿ ವಿಚಾರ ಮಾಡಿದಾಗ ನಾವು ಭಾರತೀಯರು ಮಾಡಿದ ನಿಜವಾದ ತಪ್ಪೇನು ಎಂಬುದು ಗೊತ್ತಾಗುತ್ತದೆ. ಸ್ವಾತಂತ್ರ್ಯ ಪ್ರಾಪ್ತಿಯ ನಂತರ, ಗಣರಾಜ್ಯದ ಸ್ಥಾಪನೆಯ ನಂತರ ಯಾವ ಮೌಲ್ಯಗಳು ಸಮಾಜ ಜೀವನದಲ್ಲಿ ಸ್ಥಾಪಿತಗೊಳ್ಳಬೇಕೆಂದು ಬಯಸಿದ್ದೆವೋ, ಆ ಮೌಲ್ಯಗಳು ನಮ್ಮ ಪ್ರಜಾರಾಜ್ಯ, ಗಣರಾಜ್ಯಗಳಲ್ಲಿ ಸ್ಥಾಪಿತಗೊಳ್ಳದಿರುವುದೇ ಪ್ರಜಾರಾಜ್ಯ ಮತ್ತು ಗಣರಾಜ್ಯಗಳ ಬಗ್ಗೆ ಭಾರತೀಯರಲ್ಲಿ ನಿರಾಶೆ ಉಂಟಾಗಿರುವುದು. ಒಂದು ವೇಳೆ ಸ್ವರಾಜ್ಯ ಪ್ರಾಪ್ತಿಯ ನಂತರ, ಗಣರಾಜ್ಯದ ಸ್ಥಾಪನೆಯ ನಂತರ ಆ ಮೌಲ್ಯಗಳ ಸ್ಥಾಪನೆಗಾಗಿಯೇ ಜನತಾ ಆಂದೋಲನ ನಡೆಯಬೇಕಿತ್ತು. ಆದರೆ ಆದದ್ದೇನು? ಸ್ವರಾಜ್ಯ ಬಂದು, ಕೈಗೆ ಅಧಿಕಾರ ಸಿಕ್ಕಕೂಡಲೆ ನಮ್ಮ ಮಂತ್ರಿಗಳು ಇಂಗ್ಲಿಷರ ವೈಸ್‌ರಾಯ್‌ಗಿರಿ ಜೀವನ ನಡೆಸಲಾರಂಭಿಸಿದರು, ಅಧಿಕಾರಿಗಳು ಡಾಯರ್‌ಗಿರಿಯ ಮನೋದೃಷ್ಟಿ ಬೆಳೆಸಿಕೊಂಡರು. ದಿನೇದಿನೇ ಭ್ರಷ್ಟರಾಗುತ್ತಾ ನಡೆದರು. ೧೯೬೭ರಲ್ಲಿ ಪ್ರಾರಂಭವಾದ ನೈತಿಕ ಅಧಃಪತನ ೨೦೧೦ರ ವೇಳೆಗೆ ಅದು ತನ್ನ ತಳವನ್ನು ತಲುಪಿತು. ಇನ್ನೂ ಮುಂದಕ್ಕೂ ಅದರ ಅಧಃಪತನ ಪ್ರಕ್ರಿಯೆ ನಡೆದರೆ ಮುಂದೇನು ಗತಿ? ಮುಂದಿರುವ ದಾರೀ ಒಂದೇ. ಅದು ಇಂದಿನ ಹದಗೆಟ್ಟ ಪರಿಸ್ಥಿತಿಯನ್ನು ಹಾಳುಮಾಡುವುದು ಮತ್ತು ಹೊಸ ಹಾಗೂ ಉತ್ತಮ ವ್ಯವಸ್ಥೆಯನ್ನು ನಿರ್ಮಿಸುವುದು. ಇಂಥ ಪ್ರಕ್ರಿಯೆಗೆ ಆಸ್ಟ್ರಿಯಾ ದೇಶದ ದಂತಕಥೆಯ ಅರ್ಥಶಾಸ್ತ್ರಜ್ಞನಾದ ಜೋಸೆಫ್ ಶುಂಪ್ಟರ್ 'ರಚನಾತ್ಮಕಾರ್ಥದ ವಿನಾಶ' Toward creative destruction ಎಂದು ಕರೆದಿದ್ದಾನೆ. ಅಂದರೆ ಹೆಚ್ಚು

ಉತ್ತಮವಾದ ಪರಿಸ್ಥಿತಿಯ ಮೂಲಕ ಹಳೆಯದನ್ನು ನಷ್ಟಮಾಡಿಬಿಡುವುದೇ ಆಗಿದೆ. ಇದನ್ನೇ ಗಾಂಧೀಜಿಯವರು ಕೂಡ ತಮ್ಮ ಸರ್ವೋದಯ ಆಂದೋಲನ ವಿಚಾರದ ಮೂಲಕ ಸಾರಿ ಹೇಳಿದ್ದಾರೆ. ಅವರೇ ಸ್ವತಃ ಬರೆದಿರುವ 'ಸೇವಕನ ಪ್ರಾರ್ಥನೆ' ಎಂಬ ಕವನದಲ್ಲಿ ಹೀಗೆ ಪ್ರಾರ್ಥಿಸಿಕೊಂಡಿದ್ದಾರೆ:-

ಹೇ ನಮ್ರತೆಯ ಸಾಗರನೆ
ದೀನ ಭಂಗಿಗಳ ಕುಟೀರದ ನಿವಾಸಿಯೆ
ಗಂಗಾ, ಯಮುನಾ ಮತ್ತು ಬ್ರಹ್ಮಪುತ್ರದ ಜಲದಿಂದ ಸಿಂಚಿತ
ಈ ಸುಂದರ ದೇಶದಲ್ಲಿ
ನಿನ್ನನ್ನು ಎಲ್ಲ ಸ್ಥಳದಲ್ಲಿ ಹುಡುಕಲು ಸಹಾಯ ಮಾಡು,
ನಮಗೆ ಗ್ರಹಣಶೀಲತೆ ಮತ್ತು ಮುಕ್ತ ಮನಸ್ಸು ಕೊಡು,
ನೀನು ನಿನ್ನ ನಮ್ರತೆಯನ್ನು ಕೊಡು,
ಹಿಂದೂಸ್ತಾನದ ಜನತೆಯಲ್ಲಿ
ಏಕರೂಪನಾಗುವ ಶಕ್ತಿ ಮತ್ತು ಉತ್ಕಂಠತೆ ಕೊಡು,
ಹೇ ದೇವರೇ! ನೀನು ಆಗಲೇ ನೆರವಿಗೆ ಬರುತ್ತೀ
ಯಾವಾಗ ಮನುಷ್ಯ ಶೂನ್ಯನಾಗಿ ಶರಣಾಗುತ್ತಾನೆ.
ಆಗ ನೀನು ನಮಗೆ ಸೇವಕ ಮತ್ತು ಮಿತ್ರನೆಂದು ಭಾವಿಸಿ
ಯಾವ ಜನತೆಯ ಸೇವೆ ಮಾಡಬಯಸುತ್ತೇವೆಯೋ
ಈ ದೇಶವನ್ನು ನಾವು ಹೆಚ್ಚು ತಿಳಿಯುವಂತಾಗಲು
ಮತ್ತು ಹೆಚ್ಚು ಬಯಸುವಂತಾಗಲು
ತ್ಯಾಗ, ಭಕ್ತಿ, ನಮ್ರತೆಯ ಮೂರ್ತಿಯನ್ನಾಗಿ ಮಾಡು.

– ಮೋ.ಕ.ಗಾಂಧೀ

ದೇಶದಲ್ಲಿ ಸಕಾರಾತ್ಮಕಾರ್ಥದ ವಿಧ್ವಂಸಕತೆ ನಡೆಯಬೇಕಾದರೆ ಭಾರತೀಯರೆಲ್ಲರೂ ಯಾವುದೇ ಜಾತಿ-ಧರ್ಮ-ಸಿದ್ಧಾಂತಗಳ ಭೇದವಿಲ್ಲದೆ ಸರ್ವೋದಯ ಮಾರ್ಗದಲ್ಲಿ ಕ್ರಮಿಸೋಣ. ಗಾಂಧೀಜಿಯವರ ಹಿಂದೆ ನಾವು ಕೂಡ ಶಾಂತಿಯಾ ಸಿಪಾಯಿಯಾಗಿ, ಕ್ರಾಂತಿಯ ಸಿಪಾಯಿಯಾಗಿ ನಡೆಯೋಣ.

* * *

(1)

ಯೌವನ ಮತ್ತು ಕ್ರಾಂತಿ

- ದಾದಾ ಧರ್ಮಾಧಿಕಾರಿ

ತಾರುಣ್ಯ! ತಾರುಣ್ಯತೆ! ತಾರುಣ್ಯತೆಗೆ ಸಮಾನವಾದ ಪವಿತ್ರ ವಸ್ತು ಸಂಸಾರದಲ್ಲಿ ಬೇರೊಂದಿಲ್ಲ. ತಾರುಣ್ಯತ್ವವನ್ನು ನಮ್ಮಲ್ಲಿ ಭಗವಂತನ ಗುಣವೆಂದು ತಿಳಿಯಲಾಗುತ್ತದೆ. ಯಾವೆಲ್ಲಾ ದೇವರ ಚಿತ್ರಗಳು ನಮ್ಮಲ್ಲಿಯಿವೆಯೋ ಅವರಲ್ಲಿ ಮಹಾದೇವನನ್ನು ಬಿಟ್ಟು ಬೇರೆಯಾರಿಗೂ ಮೀಸೆ ಇಲ್ಲ. ಭಗವಂತನು ಸದಾ ತರುಣ. ವೃದ್ಧನಾಗುವುದೇಯಿಲ್ಲ. ಸಾಯುವುದೂ ಇಲ್ಲ. ತರುಣರೇ, ನಿಮ್ಮ ಶರೀರ ಜೀರ್ಣವಾಗಲಿ ಆದರೆ ಮನಸ್ಸು ಜೀರ್ಣವಾಗುವುದಕ್ಕೆ ಅವಕಾಶ ಕೊಡ ಬೇಡಿ. ಯಾರ ವಿಚಾರವನ್ನೂ ಒಪ್ಪಬೇಡಿ. ಯಾವುದೇ ವಿಭೂತಿಯ ಅಥವಾ ಮಹಾಡಪುರುಷನ ವಿಚಾರವನ್ನು ಸ್ವೀಕರಿಸಬೇಡಿ. ಯಾವುದೇ ಸಂಘಟನೆಯ ವಿಚಾರವನ್ನು ಮಾನ್ಯಮಾಡಬೇಡಿ. ಆ ವಿಚಾರಗಳು ಗಾಂಧೀಜಿಯವರದ್ದಾಗಿರಬಹುದು, ವಿನೋಬಾಜಿಯವರದ್ದಾಗಿರಬಹುದು, ಸರ್ವೋದಯದ್ದಾಗಿರಬಹುದು ಅಥವಾ ಬೇರೆ ಇನ್ನಾರದೋ ಆಗಿರಬಹುದು. ಅದನ್ನು ಅಂಗೀಕರಿಸ ಬೇಡಿ. ವಿಚಾರ ನಿನ್ನ ಸ್ವಂತದ್ದಾಗಿರಲಿ. ನಿನ್ನ ಅಂತಃಕರಣದಿಂದ ವೈಚಾರಿಕ ಪ್ರೇರಣೆ ಬರಬೇಕು ಮತ್ತು ನಿನ್ನ ಬುದ್ಧಿ ಸದಾ ವಿಚಾರ ಮಾಡುವುದಕ್ಕಾಗಿ ಮುಕ್ತವಾಗಿರಬೇಕು. ತಟಸ್ಥ, ವಿನಮ್ರ ಬುದ್ಧಿ. ಯಾವುದೇ ಪ್ರಕಾರದ ಆಗ್ರಹವಿಲ್ಲದ ಬುದ್ಧಿ. ಇಲ್ಲಿ ಯಾರಾದರೂ ನಿನಗೆ ಅಹಿಂಸೆಯ ಪಾಠ ಕಲಿಸಿರಬಹುದು. ಅನೇಕ ಉಪದೇಶಗಳನ್ನು ಮಾಡಿರಬಹುದು. ಈಗ ಅದನ್ನು ಮರೆತುಬಿಡು. ನಮಗೆ ಯಾವುದೇ ತತ್ವಜ್ಞಾನದ ಜತೆಗೆ ಸಂಬಂಧವಿಲ್ಲ. ಯಾವುದೇ ಸಿದ್ಧಾಂತದೊಂದಿಗೆ ನಾವು ಬಂಧಿಸಲ್ಪಟ್ಟಿಲ್ಲ. ಅಹಿಂಸೆಯಿಂದ ಕೂಡ ಇಲ್ಲ.

ನಾವು ಒಂದೇ ಮಾತನ್ನು ತಿಳಿದಿದ್ದೇವೆ- ಜೀವಂತವಾಗಿರಬೇಕು, ಜೀವಿಸಬೇಕು. ಇದೇ ಏಕ ಮಾತ್ರ ಉದ್ದೇಶ. ಇದೇ ಒಂದು ಆದರ್ಶ. ಇದೇ ಒಂದು ಧ್ಯೇಯ; ಇನ್ನು ಬೇರೆ ಯಾವ ಉದ್ದೇಶವಿಲ್ಲ, ಯಾವ ಗುರಿ ಇಲ್ಲ. ಯಾರಿಗಾಗಿ ಜೀವಿಸಬೇಕು? ಜೀವಿಸುವುದಕ್ಕಾಗಿ ಜೀವಿಸುತ್ತೇವೆ. ನಿನ್ನ ಜನ್ಮದ ಪ್ರಯೋಜನವೇನು? ಅದು ನನಗೆ ಗೊತ್ತಿಲ್ಲ. ನನಗೆ ಜನ್ಮ ಕೊಡು ಎಂದು ನಾನೇನಾದರೂ ಭಗವಂತನ ಬಳಿ ಪ್ರಾರ್ಥಿಸುವುದಕ್ಕೆ ಹೋಗಿದ್ದೆನೇ? ನನ್ನ ಜನ್ಮವಾಗಿರುವುದರಿಂದ ಜೀವಿಸುವುದು ನನ್ನ ಅಧಿಕಾರ. ಹೇಗೆ ಜೀವಿಸುವುದು, ಜೀವನ ಹೇಗೆ ಚರಿತ್ರಾರ್ಹವಾಗುತ್ತದೆ ಎಂಬ ಬಗ್ಗೆಯೇ ಹುಚ್ಚು.

ಇಂದು ನಾವು ಜೀವಿಸುತ್ತಿರುವ ಸಂಸಾರ ಮನುಷ್ಯರು ಜೀವಿಸುವುದಕ್ಕೆ ಯೋಗ್ಯವಾಗಿಲ್ಲ. ಮನುಷ್ಯ ಜೀವಿಸಬೇಕು ಎನ್ನುವುದಕ್ಕೆ ಬಯಸುವಂಥದ್ದಾಗಿಲ್ಲ. ಹಳೆ ತಲೆಮಾರಿನವರಾದ ನಾವು ಜೀವಿಸಿದೆವು. ಏಕೆಂದರೆ ನಮ್ಮಲ್ಲಿ ಜೀವನವಿರಲಿಲ್ಲ, ಜೀವಂತಿಕೆ ಇರಲಿಲ್ಲ, ಪುರುಷಾರ್ಥದ ಕೊರತೆಯಿತ್ತು. ಯಾವ ಸಂಸಾರದಲ್ಲಿ ನಾನು ಸತ್ತು ಹೋಗುತ್ತೇನೋ ಆ ಸಂಸಾರದಲ್ಲಿ ನೀನು ಜೀವಿಸಬೇಕಾಗಿಲ್ಲ, ನೀನು ಜೀವಿಸಲೂ ಕೂಡದೆಂಬುದೊಂದೇ ಈಗಿರುವ ಆಕಾಂಕ್ಷೆ. ಆದ್ದರಿಂದ ಈಗ ನೀನು ಇಂಥ ಸಂಸಾರದಲ್ಲಿ ನಾನು ಜೀವಿಸುವುದಿಲ್ಲ ಎಂದು ನಿರ್ಣಯ ಮಾಡು. ಪ್ರತಿಜ್ಞೆ ಮಾಡು.

ಸಂಸಾರವೆಂದರೇನು? ಒಂದು ನಗರಕ್ಕೆ ಹಳ್ಳಿಯ ಒಬ್ಬ ಮನುಷ್ಯ ಹೋದ.

ತನಗಾಗಿ ಮತ್ತು ತನ್ನ ಮಗನಿಗಾಗಿ ಟಿಕೆಟ್ ಖರೀದಿಸುವಷ್ಟು ಹಣ ಮಾತ್ರ ಅವನ ಬಳಿ ಇತ್ತು. ಹಿಂದಿರುಗಿ ಬರಲು ಸಾಕಾಗುವಷ್ಟು ಹಣವಿತ್ತೆಂದು ಭಾವಿಸು. ನಗರವನ್ನು ತಲುಪುತ್ತಲೇ ಅವನ ಮಗ ಕಾಯಿಲೆ ಬಿದ್ದ.

ಅವನು ಡಾಕ್ಟರ್ ಬಳಿ ಹೋದ ಮತ್ತು ಅಂದ, "ಡಾಕ್ಟರ್ ಸಾಹೇಬರೇ ನನ್ನ ಮಗ ಅನಿರೀಕ್ಷಿತವಾಗಿ ಕಾಯಿಲೆ ಬಿದ್ದ".

ಡಾಕ್ಟರ್ ಪರೀಕ್ಷಿಸಿದ ಮತ್ತು ಅಂದ, "ಇಂಜಕ್ಷನ್ ಅಗತ್ಯವಿದೆ".

"ಆಗಲಿ" ಅವನೆಂದ "ಇಂಜಕ್ಷನ್ ಕೊಡಿ".

"ಇಪ್ಪತ್ತು ರುಪಾಯಿ ಆಗುವುದು".

"ಹಣವನ್ನಂತೂ ತಂದಿಲ್ಲ. ಇದು ನನಗೆ ಅಪರಿಚಿತ ನಗರ".

"ಒಳ್ಳೆ ಮನುಷ್ಯ, ನಾನು ಇಂಜಕ್ಷನ್ ಕೊಡುತ್ತೇನೆ ಆದರೆ ನಾನೂ ಕೂಡ ಕೊಂಡು ತರಬೇಕು" ಡಾಕ್ಟರ್ ಅಂದ.

"ಹಾಗಾದರೆ ಈ ನಗರದಲ್ಲಿ ಬೇರೆ ಯಾರ ಬಳಿಯೂ ಇಲ್ಲವೆ?"

"ಇದೆ". ಡಾಕ್ಟರ್ ಓರ್ವ ಶ್ರೀಮಂತ ಮನುಷ್ಯನ ಹೆಸರನ್ನು ಹೇಳಿದ. ಓರ್ವ ಅಂಗಡಿಯವನ ವಿಳಾಸವನ್ನೂ ತಿಳಿಸಿದ. ಈ ಮನುಷ್ಯ ಮೊದಲು ಅಂಗಡಿಯವನ ಬಳಿ ಹೋದ.

ಅಂಗಡಿಯವನೆಂದ, "ಇದು ಅಂಗಡಿ. ಅಂಗಡಿಯಲ್ಲಿರುವ ಪದಾರ್ಥಗಳು ಮಾರಾಟಕ್ಕಾಗಿ ಇರುತ್ತವೆಯೇ ಹೊರತು ಹಾಗೆಯೇ ಕೊಡುವುದಕ್ಕಲ್ಲ."

ನಂತರ ಆ ಶ್ರೀಮಂತನ ಬಳಿ ಹೋದ ಹಾಗೂ ಅಂದ, "ನಿಮ್ಮ ಬಳಿ ಈ ಇಂಜಕ್ಷನ್ ಇದೆ ಎಂದು ಗೊತ್ತಾಯಿತು".

"ಇದೆ" ಅವನೆಂದ.

"ನನ್ನ ಮಗನಿಗೆ ಹುಷಾರಿಲ್ಲ, ನನಗೆ ಕೊಡುವೆಯಾ".

"ಇದು ಸಾಧ್ಯವಿಲ್ಲ" ಶ್ರೀಮಂತನೆಂದ, "ನಾನು ಖರೀದಿಸಿ ತಂದಿದ್ದೇನೆ. ಇಂಜಕ್ಷನ್‌ಗಾಗಿ ನಾನು ಹಣ ಖರ್ಚು ಮಾಡಿದ್ದೇನೆ. ನಿನಗೆ ಹೇಗೆ ಕೊಡಲಿ?"

"ನಿಮ್ಮ ಮನೆಯಲ್ಲಿ ಯಾರಿಗಾದರೂ ಹುಷಾರಿಲ್ಲವೆ?"

"ಹಾಗೇನಿಲ್ಲ, ನನ್ನ ಮನೆಯಲ್ಲಿ ಯಾರಿಗೂ ಜ್ವರ ಇಲ್ಲ".

"ಎಂಥ ವಿಚಿತ್ರ ಈ ನಗರ! ಯಾರಿಗೆ ಕಾಯಿಲೆ ಇದೆಯೋ ಅವನಿಗೆ ಔಷಧಿ ಇಲ್ಲ ಮತ್ತು ಎಲ್ಲಿ ಔಷಧಿ ಇದೆಯೋ ಅಲ್ಲಿ ಕಾಯಿಲೆ ಇಲ್ಲ".

ಇಂಥ ವಿಚಿತ್ರ ಇಂದಿನ ಸಂಸಾರ! ಎಲ್ಲಿ ಹಸಿವೆಯಿದೆಯೋ ಅಲ್ಲಿ ಅನ್ನವಿಲ್ಲ ಮತ್ತು ಎಲ್ಲಿ ಅನ್ನದ ರಾಶಿ ಇದೆಯೋ ಅಲ್ಲಿ ಹಸಿವುಂಟುಮಾಡಲು ಔಷಧಿ ಕೊಡಬೇಕಾಗುತ್ತದೆ. ಯಾರು ಚಳಿಯಿಂದ ನಡುಗುತ್ತಿದ್ದಾರೋ ಅವನ ಬಳಿ ಬಟ್ಟೆಗಳಿಲ್ಲ ಮತ್ತು ಯಾರ ಬಳಿ ಬಟ್ಟೆಯೇ ಬಟ್ಟೆ ಇವೆಯೋ ಅವನಿಗೆ ಯಾವಾಗ ಯಾವುದನ್ನು ಧರಿಸಬೇಕು ಎಂಬುದಕ್ಕಾಗಿ ಅವಕಾಶವನ್ನು ಹುಡುಕಬೇಕಾಗುತ್ತದೆ. ತರುಣರೇ, ನೀವು ಯಾವುದೇ ವಿದ್ಯಾಭ್ಯಾಸವನ್ನು ಮಾಡಿ, ಮಾಡದೇ ಇರಿ, ಯಾವುದೇ ತರಗತಿಗೆ ಹಾಜರಾಗಿ ಅಥವಾ ಇಲ್ಲದೇ ಇರಿ, ಯಾವುದೇ ಪುಸ್ತಕ ಓದಿ ಅಥವಾ ಓದದೇ ಇರಿ, ಪರೀಕ್ಷೆ ಬರೆಯಿರಿ ಅಥವಾ ಬರೆಯದೇ ಇರಿ, ಇಷ್ಟಂತೂ ತಿಳಿದುಕೊಳ್ಳಿ ಯಾವ ಸಂಸಾರದಲ್ಲಿ ಖರೀದಿಸುವುದರಿಂದ ವಸ್ತುಗಳು ಸಿಗುತ್ತವೋ, ಅಗತ್ಯವುಳ್ಳವರಿಗೆ ಸಿಗುವುದಿಲ್ಲವೋ ಅದು ಭಗವಂತನಿಂದ ನಿರ್ಮಿಸಲಾದ

ಸಂಸಾರವಲ್ಲ. ಸೈತಾನ ರಚಿಸಿದ ಸಂಸಾರ. ಈ ಸಂಸಾರವನ್ನು ಬದಲಾಯಿಸುವ ತುಮಲತೆ ನಿನ್ನಲಿರುವುದಾದರ ನೀನು ತರುಣ. ಈ ತುಮಲತೆ ನಿನ್ನಲ್ಲಿ ಇಲ್ಲದೇ ಇದ್ದಲ್ಲಿ ನೀನು ನನಗಿಂತ ಮುದುಕ. ಈ ತುಮಲತೆ ನಿನ್ನಲ್ಲಿ ಇದ್ದಲ್ಲಿ ನೀನು ಓದುವೆ, ಅಧ್ಯಯನ ಮಾಡುವೆ ಮತ್ತು ಇಂದಿನ ಸ್ಥಿತಿಯನ್ನು ಹೇಗೆ ಬದಲಾಯಿಸಬೇಕೆಂಬ ಬಗ್ಗೆ ಉಪಾಯವನ್ನು ಕುರಿತು ಯೋಚಿಸಲಾರಂಭಿಸುವೆ. ಒಂದು ಗಾಳಿಪಟವನ್ನು ಮಾಡಬೇಕಾಗುತ್ತದೆ. ಆಡುವುದಕ್ಕಾಗಿ ಒಂದು ಚೆಂಡನ್ನು ಮಾಡಬೇಕಾಗುತ್ತದೆ. ಅಥವಾ ಒಂದು ಕೋಲು ಅಗತ್ಯವೆನಿಸುತ್ತದೆ. ಆಗ ನೀನು ಅವನ್ನು ಪಡೆಯುವುದಕ್ಕಾಗಿ ಭೂಮಿ-ಆಕಾಶವನ್ನು ಒಂದು ಮಾಡುತ್ತೀಯೆ, ಹಗಲು ರಾತ್ರಿ ಹುಡುಕುತ್ತೀಯೆ. ಪ್ರಯತ್ನದ ಪರಕಾಷ್ಠತೆಗೆ ಮುಟ್ಟುತ್ತೀಯೆ. ಮಾಹಿತಿಯನ್ನು ಸಂಗ್ರಹಿಸುತ್ತೀಯೆ. ಅವುಗಳನ್ನು ಮಾಡುತ್ತೀಯೆ. ದೇಶದಲ್ಲಿ ಯಾರೂ ಹಸಿದಿರಬಾರದು, ಪದಾರ್ಥಗಳು ಅಗತ್ಯವುಳ್ಳವರಿಗೆ ಸಿಗುವಂತೆ ಈಗ ಮಾಡಬೇಕಿದೆ. ಎಲ್ಲಿ ಅಗತ್ಯವಿದೆಯೋ ಅಲ್ಲಿ ವಸ್ತುವಿರಬೇಕು. ಕಾಯಿಲೆಯವರಿಗೆ ಔಷಧಿ ಸಿಗಬೇಕು. ಅನ್ನ ಪಡೆಯುವುದಕ್ಕಾಗಿ ಹಸಿವೆ ಏಕಮಾತ್ರ ಯೋಗ್ಯತೆ ಎಂಬುದು ಸಾಕು. ಇನ್ನು ಬೇರೆ ಯಾವ ಯೋಗ್ಯತೆ ಅಗತ್ಯವಿಲ್ಲ, ಅಗತ್ಯವಿರಲೂ ಬೇಕಾಗಿಲ್ಲ. ಔಷಧಿಗಾಗಿ ಕಾಯಿಲೆ ಇರುವುದೊಂದೇ ಪರ್ಯಾಪ್ತ ಪಾತ್ರತೆ. ಬೇರೆ ಯಾವ ಪಾತ್ರತೆ ಬೇಕು. ಕಾಯಿಲೆ ಇದ್ದವನಿಗೆ ಔಷಧಿ ಸಿಗಬೇಕು. ಹಸಿದವನಿಗೆ ಅನ್ನ ಸಿಗಬೇಕು. ಇದಕ್ಕಾಗಿ ಬೇರಿನ್ಯಾವ ಅಗತ್ಯತೆ ಇಲ್ಲ. ಯಾವ ನಿಯಮವೂ ಇಲ್ಲ. ಇಂಥ ಸಂಸಾರವನ್ನು ನಿರ್ಮಿಸುವ ಉತ್ಕಂಠತೆ ಇರಬೇಕು ಇದೇ ತಾರುಣ್ಯತೆ. ನಾನು ತಾರುಣ್ಯತೆಯ ಮೊದಲ ಲಕ್ಷಣವನ್ನು ನಿನಗೆ ತಿಳಿಸಿದೆ. ಇನ್ನು ಹೆಚ್ಚು ಮಹತ್ವದ ಪ್ರಶ್ನೆ, ಈ ಸಂಸಾರವನ್ನು ಬದಲಾಯಿಸುವುದು ಹೇಗೆ? ಈ ಪ್ರಥ್ವಿ ಮನುಷ್ಯನ ಹಿಡಿತಕ್ಕೊಳಪಟ್ಟದ್ದಾಗಿರಬೇಕು. ಅದು ಮನುಷ್ಯ ವಾಸಿಸುವುದಕ್ಕೆ ಯೋಗ್ಯವಾಗಲು ಯಾವಾಗ ಸಾಧ್ಯ? ವಿಷಯವೇನೆಂದರೆ ಖರೀದಿಸುವವರಿಗೆ ವಸ್ತುಗಳು ಸಿಗಕೂಡದು. ಯಾವ ವ್ಯವಸ್ಥೆಯಲ್ಲಿ ಖರೀದಿಸುವವನಿಗೆ ವಸ್ತುಗಳು ಸಿಗುತ್ತವೋ ಆ ವ್ಯವಸ್ಥೆಯ ಹೆಸರು ಬಂಡವಾಳವಾದ. ವಿದ್ಯೆಯನ್ನು ಖರೀದಿಸಬಹುದಾಗಿದೆ. ಮೋಕ್ಷವನ್ನು ಖರೀದಿಸಬಹುದಾಗಿದೆ. ಭಗವಂತನ ದರ್ಶನ ಕೂಡ ಖರೀದಿದಾರನದ್ದಾಗಿರುತ್ತದೆ. ಭಗವಂತ ಕೂಡ ಖರೀದಿಸುವವನಿಗೆ ಸಿಗುತ್ತಾನೆ. ಮನುಷ್ಯನ ಮಾರಾಟವಾಗುತ್ತದೆ. ಮನುಷ್ಯನ ಗುಣ ಮಾರಾಟವಾಗುತ್ತದೆ. ಮನುಷ್ಯನ ಮಾರಾಟವೆಂದರೆ ರಾಜ್ಯದ ಮಾರಾಟ ಕೂಡ. ಅಲ್ಲಿ ಮತ ಕೂಡ ಮಾರಾಟವಾಗುತ್ತದೆ. ಆದ್ದರಿಂದ ಖರೀದಿಸುವವನಿಗೆ ವಸ್ತು ಸಿಗಕೂಡದು. ಖರೀದಿಸುವವನ ಅಧಿಕಾರ, ಖರೀದಿಸುವವನ ಸತ್ತೆ ಮುಕ್ತಾಯವಾಗಬೇಕು. ಇದು ಮೊದಲನೆಯ ಮಾತು, ಎರಡನೆಯ ವಿಷಯ ಖಜಾನೆಯ ಸ್ಥಳದಲ್ಲಿ ಕತ್ತಿ ಬರಕೂಡದು. ಇಂದು ಹಣವಿರುವವರಿಗೆ ವಸ್ತುಗಳು ಸಿಗುತ್ತವೆ. ಕೋಲು ಇರುವವನಿಗೆ ವಸ್ತುಗಳು ಸಿಗುವಂತೆ ಭವಿಷ್ಯದಲ್ಲಿ ಆಗದಿರಲಿ. ಅಂಥವನಿಗೆ ವಸ್ತುಗಳು ಸಿಗಲಾರಂಭಿಸಿದರೆ ಅವಶ್ಯಕತೆ ಇರುವವರಿಗೆ ಏನೂ ಸಿಗುವುದಿಲ್ಲ. ಕಾಯಿಲೆ ಬಿದ್ದ ಮಗನ ತಂದೆಯನ್ನು ಕಲ್ಪಿಸಿಕೊ. ಆ ತಂದೆ ಪೈಲ್ವಾನ್ ಆಗಿದ್ದು ದಷ್ಟಪುಷ್ಟನಾಗಿದ್ದು ಹಾಗೂ ಗಲಾಟೆ ಮಾಡಲು ಶಕ್ತನಾದಂಥವನು ಆಗಿದ್ದರೆ ಆ ಶ್ರೀಮಂತನಿಗೆ "ಅಯ್ಯಾ ಈ ಇಂಜಕ್ಷನ್ ಮಾತನಾಡದೆ ಕೊಟ್ಟರೆ ಸರಿಯಾಗುವುದು, ಹಾಗಿಲ್ಲವಾದಲ್ಲಿ ಯೋಚನೆ ಮಾಡು, ನನ್ನ ಕೈಯಲ್ಲಿ ಕೋಲಿದೆ". ಇದರ ಪರಿಣಾಮ ಏನಾಗುತ್ತಿತ್ತು? ಯಾರ ಕೈಯಲ್ಲಿ ಕೋಲಿದೆಯೋ ಅವನಿಗೆ ವಸ್ತು ಸಿಗುವುದು. ಯಾರಿಗೆ ಅಗತ್ಯವಿದೆಯೋ ಅವರಿಗೆ ಸಿಗುವುದಿಲ್ಲ. ಖಜಾನೆಯವಾದ ಹೋಗಿ ಅದರ ಸ್ಥಾನದಲ್ಲಿ ಕತ್ತಿಯ, ಕೋಲಿನವಾದ ಬಂದರೆ ಇದೇನು

ಕ್ರಾಂತಿಯಲ್ಲ. ಹಣದ ಚೀಲದ ಸ್ಥಳದಲ್ಲಿ ಲಾಠಿ ಬರಬಾರದೆಂಬುದರ ಕಡೆ ಗಮನವಿರಲಿ. ಇಂದು ಹಣದ ಚೀಲದ ಆಡಳಿತವಿದೆ. ಸಾಹುಕಾರರ ರಾಜ್ಯವಿದೆ. ಇದರ ಬದಲಿಗೆ ಕೋಲು ಬಂದರೆ ರೈತ ಮತ್ತು ಕೂಲಿಕಾರರ ರಾಜ್ಯವಾಗುವುದಿಲ್ಲ. ಆದ್ದರಿಂದ ಕ್ರಾಂತಿಯ ಎರಡನೇ ಸಂಕಲ್ಪ, ಸಂಸಾರದಲ್ಲಿ ಕತ್ತಿಯ ಸತ್ತೆ ನಡೆಯುವುದಿಲ್ಲ ಎಂದಾಗಬೇಕು. ಉಪಕರಣದ ಗೌರವ ಶಾಶ್ವತವಾಗಬೇಕು. ಏಕೆಂದರೆ ಅಂತ್ಯದಲ್ಲಿ ಕ್ರಾಂತಿ ಆಯುಧಗಳಿಂದಾದರೆ ಅದು ಸಿಪಾಯಿಗಳ ಕ್ರಾಂತಿಯಾಗುವುದು. ಆದರೆ ಆಗಬೇಕಾದುದು ನಾಗರಿಕರ ಕ್ರಾಂತಿ.

ನಾಗರಿಕ ಕ್ರಾಂತಿಯ ಅರ್ಥವೇನು. ಸುತ್ತಿಗೆ ಮತ್ತು ಚಿಮ್ಮಟಿಗೆಯ ಕ್ರಾಂತಿ; ಗುದ್ದಲಿ ಮತ್ತು ಕೊಡಲಿಯ ಕ್ರಾಂತಿ; ಚರಖಾ ಮತ್ತು ಮಗ್ಗದ ಕ್ರಾಂತಿ. ಆದರೆ ಇಲ್ಲಿ ಒಂದು ಶರತ್ತು. ಈ ಉಪಕರಣಗಳು ಶಸ್ತ್ರಗಳಿಗೆ ಶರಣಾಗತವಾಗುವ ಪರಿಸ್ಥಿತಿ ಬರಕೂಡದು. ಉಪಕರಣಗಳು ಆಯುಧಗಳಿಗೆ ಶರಣಾಗತವಾದಲ್ಲಿ ಪ್ರತಿಷ್ಠೆ ಆಯುಧಗಳದ್ದಾಗುತ್ತದೆಯೇ ಹೊರತು ಉಪಕರಣಗಳದ್ದಲ್ಲ. ಉಪಕರಣಗಳ ಪ್ರತಿಷ್ಠೆ ಆಗಬೇಕೆಂದರೆ ಉಪಕರಣಗಳ ಕ್ರಾಂತಿ ಆಗಬೇಕು. ಆದ್ದರಿಂದ ನಾವು ಶ್ರಮ ಶಿಬಿರವನ್ನು ನಡೆಸುತ್ತೇವೆ ವಿನಃ ಸೇನಾ ಶಿಬಿರವನ್ನಲ್ಲ. ಇವುಗಳಲ್ಲಿ ಆಯುಧಗಳ ಶಿಕ್ಷಣ ಕೊಡುವ ಬದಲು ಉತ್ಪಾದಕ ಶ್ರಮದ ಶಿಕ್ಷಣವನ್ನು ಕೊಡಲಾಗುತ್ತದೆ. ಏಕೆ? ಏಕೆಂದರೆ ನಾವು ಉತ್ಪಾದಕ ಶ್ರಮದ ಪ್ರತಿಷ್ಠೆ ಬಯಸುತ್ತೇವೆ. ಉತ್ಪಾದಕ ಶ್ರಮದ ಪ್ರತಿಷ್ಠೆ ಎಂದರೆ ರೈತರ–ಕೂಲಿಕಾರರ ಪ್ರತಿಷ್ಠೆಯೇ ಆಗಿದೆ. ಮಾವೋನ ಕ್ರಾಂತಿ ನೋಡಿ ನಮ್ಮೆಲ್ಲರಿಗೆ ಆಶ್ಚರ್ಯವಾಗುತ್ತದೆ. ಸಂಸಾರದ ಇತಿಹಾಸದಲ್ಲಿ ರೈತರ ಮೊದಲನೆಯ ಕ್ರಾಂತಿ ಮಾವೋನಿಂದಾಯಿತು. ಆದರೆ ಮಾವೋ ಕ್ರಾಂತಿಯಿಂದ ಒಂದು ಹೆಜ್ಜೆ ಹಿಂದುಳಿದುಬಿಟ್ಟ ಏಕೆ? ಏಕೆಂದರೆ ಅವನ ರೈತ ಸೈನಿಕನಾದ. ಸೈನಿಕನಾದ ಮೇಲೆ ರೈತ, ರೈತನಾಗಿ ಉಳಿಯುವುದಿಲ್ಲ. ಯಾವ ದಿನ ರೈತಕ್ರಾಂತಿ ಸೈನಿಕಕ್ರಾಂತಿಯಾಯಿತೋ ಆ ದಿನ ಅದು ರೈತರದ್ದಾಗಿ ಉಳಿಯಲಿಲ್ಲ. ಇಲ್ಲಿಂದ ನಾನು ಅಹಿಂಸೆಯ ತತ್ವಜ್ಞಾನ ಹೇಳುತ್ತಿಲ್ಲ. ಇದು ಅಹಿಂಸೆಯ ಸಿದ್ಧಾಂತ ಅಲ್ಲ. ಕ್ರಾಂತಿಯ ನಂತರ ಉಪಕರಣಗಳು ಇರುತ್ತವೆಯೇ ಹೊರತು, ಶಸ್ತ್ರಗಳಲ್ಲ ಎಂಬುದೇ ಸಂಕಲ್ಪದಲ್ಲಿಯ ಮೂಲವಾಗಿದೆ. ಆದ್ದರಿಂದ ಕ್ರಾಂತಿ ಮಾಡುವ ಸಮಯದಲ್ಲಿ ಶಸ್ತ್ರಗಳ ಪ್ರತಿಷ್ಠೆ, ಶಸ್ತ್ರಗಳ ಗೌರವ ಸಮಾಜದಲ್ಲಿ ಹೆಚ್ಚಾಗಕೂಡದೆಂದು ಗಮನವಿರಿಸಿಕೊಳ್ಳಬೇಕು. ಶಸ್ತ್ರಗಳ ಆಜ್ಞಾಪಾಲಕರಾಗಿ ನಾಗರಿಕರು ಇರುವಂತಾಗಬಾರದು.

ಖಜಾನೆಯ ಅಧಿಕಾರವಿರಕೂಡದು ಎಂಬುದನ್ನು ನಾವು ಗಮನಿಸಿದ್ದೇವೆ. ವಸ್ತುಗಳು ಖರೀದಿದಾರರಿಗೆ ಸಿಗಕೂಡದು. ಇಂದು ನಾವು ಯಾರನ್ನು ಕೂಲಿಯಾಳು ಎಂದು ಕರೆಯುತ್ತೇವೆ? ಯಾರು ತಮ್ಮ ಶ್ರಮವನ್ನು ಮಾರುತ್ತಾರೋ ಅವರನ್ನು ಕೂಲಿಗಳು ಎಂದು ಕರೆಯುತ್ತೇವೆ. ಯಾರು ಶ್ರಮವನ್ನು ಖರೀದಿಸುತ್ತಾರೋ ಆವನು ಮಾಲೀಕ. ಕೂಲಿಯಾಳು ಏನು ಅನ್ನುತ್ತಾನೆ? ಆದಷ್ಟು ಕಡಿಮೆ ಕೆಲಸಕ್ಕಾಗಿ ಅತಿ ಹೆಚ್ಚು ಕೂಲಿ ಸಿಗಬೇಕು. ಮಾಲೀಕನೆನ್ನುತ್ತಾನೆ? ಅತಿ ಕಡಿಮೆ ಕೂಲಿಯಲ್ಲಿ ಅತಿ ಹೆಚ್ಚು ಕೆಲಸವಾಗಬೇಕು. ಇಬ್ಬರದೂ ಚಾರಿತ್ರ್ಯಹಾನಿಯಾಗಿದೆ. ಇದರಲ್ಲಿ ಯಾವುದೇ ನೀತಿಯ ಪ್ರಶ್ನೆಯಾಗಲೀ, ಅಧ್ಯಾತ್ಮಿಕ ಪ್ರಶ್ನೆಯಾಗಲೀ ಇಲ್ಲ. ಕೆಲಸವನ್ನು ಮಾರುವವನು ಕೆಲಸಗಳ್ಳನಾಗಿರುತ್ತಾನೆ, ಬೆಲೆಯನ್ನು ಮಾರುವವನು ಬೆಲೆಗಳ್ಳನಾಗಿರುತ್ತಾನೆ. ಇಬ್ಬರ ಮನುಷ್ಯತ್ವವು ಹ್ರಾಸ ಆಗುತ್ತಿದೆ. ಮನುಷ್ಯತ್ವ ಪುನಃ ವಿಕಸಿತವಾಗಬೇಕು, ಬೆಳೆಯ ಬೇಕು ಎಂದೆನಿಸುವುದಾದರೆ ಅವನು ತನ್ನ ಶ್ರಮವನ್ನು ಮಾರಕೂಡದು ಅಂದರೆ ಅವನಿಗೆ ತನ್ನ ಶ್ರಮವನ್ನು ಮಾರುವ ಪರಿಸ್ಥಿತಿಯ ಒತ್ತಡವೇ ಇರಕೂಡದು. ಎರಡನೆಯವರ ಶ್ರಮ ಖರೀದಿಸಕೂಡದು ಅಂದರೆ ಯಾರೇ ಆಗಲಿ ಶ್ರಮ

ಖರೀದಿಸುವ ಪರಿಸ್ಥಿತಿಯೇ ಇರಕೂಡದು. ಎರಡನೆಯ ವಿಷಯವೆಂದರೆ ಉಪಕರಣಗಳು ಆಯುಧಗಳ ಶರಣ್ಯತೆ ಹುಡುಕಕೂಡದು. ಕ್ರಾಂತಿ ರೈತ-ಕೂಲಿಕಾರರದ್ದಾಗಿರಬೇಕು. ಆದರೆ ರೈತ-ಕೂಲಿಯವ ಶಸ್ತ್ರಧಾರಿಯಾದರೆ ಆಗ ಕ್ರಾಂತಿ ದೂಷಿತವಾಗುವುದು. ಕ್ರಾಂತಿ ಕುಂಠಿತಗೊಳ್ಳುವುದು. ಕ್ರಾಂತಿಯ ಉದ್ದೇಶ ನಷ್ಟವಾಗಿಬಿಡುವುದು. ಆದ್ದರಿಂದ ಇದು ಎರಡನೇ ವಿಷಯ. ಮೂರನೇ ವಿಷಯ ನಾಗರಿಕ ಮತ್ತು ನಾಗರಿಕರ ಮಧ್ಯೆ ಆಡಳಿತದ, ಕಾನೂನಿನ ಮಧ್ಯಪ್ರವೇಶ ಆದಷ್ಟೂ ಕಡಿಮೆ ಇರಬೇಕು. ರಾಜ್ಯದ ಗುರುತು ಮೂರು ಸಂಸ್ಥೆಗಳಿಂದಾಗಿರುತ್ತದೆ. ಪೋಲೀಸ್, ಕೋರ್ಟ್ ಮತ್ತು ಜೈಲು. ಈ ಮೂರು ರಾಜ್ಯದ ಪ್ರತಿಕಾತ್ಮಕ ಸಂಸ್ಥೆಗಳಾಗಿವೆ. ಆಡಳಿತದ ಮಧ್ಯ ಪ್ರವೇಶವನ್ನು ಗುರುತಿಸುವುದು ಹೇಗೆ? ಸಮಾಜದಲ್ಲಿ ಆಡಳಿತ ಮನೆಮಾಡುತ್ತಿದೆ ಎಂದು ಹೇಗೆ ಗುರುತಿಸುವುದು? ಈ ಮೂರರಲ್ಲಿ ಯಾವುದಾರೂಂದು ಸಂಸ್ಥೆ ಪಟ್ಟದ ಮೇಲೆ ಕುಳಿತರೆ ಸಮಾಜದೊಳಗೆ ಆಡಳಿತ ನುಗ್ಗಿದೆ ಎಂದು ತಿಳಿಯಿರಿ.

"ಸಂಸಾರದ ತುಂಬ ಯಾವುದೇ ಸಾಮಾನ್ಯ ಮನುಷ್ಯ, ಪ್ರತಿಷ್ಠಿತ ವ್ಯಕ್ತಿ ಈ ಮೂರು ಸಂಸ್ಥೆಗಳನ್ನ ಉಪಯೋಗ ಮಾಡಿಕೊಳ್ಳುವ ಪರಿಸ್ಥಿತಿ ಬರಬೇಕೆಂದು ಬಯಸುವುದಿಲ್ಲ. ನಿಮ್ಮ ಮನೆಯೊಳಗೆ ಪೋಲೀಸ್ ಬರುವುದು ನಿಮಗೆ ಒಪ್ಪಿಗೆಯೇ ಎಂದು ಯಾವುದೇ ಗೌರವಯುತ ಮನುಷ್ಯನನ್ನು ಕೇಳಿರಿ. ಕೋರ್ಟ್‌ಗೆ ಹೋಗುವ ಅವಕಾಶ ಸಿಗಲೆಂದು ನಿಮ್ಮ ಮನಸ್ಸು ಬಯಸುತ್ತದೆಯೇ ಎಂದು ಕೇಳಿರಿ. ಆಗ ಅವನು ಹೇಳುತ್ತಾನೆ, "ದೇವರ ದಯೆಯಿಂದ ಹೀಗೆ ಎಂದೂ ಅಗದಿರಲಿ". ನಾನು ಇಂದೂರ್‌ಗೆ ಹೋಗಿದ್ದೆ. ಅಲ್ಲಿ ಚಮತ್ಕಾರವೇ ಆಯಿತು. ಅಲ್ಲಿಯ ಜನರು ಜೈಲನ್ನು ತೋರಿಸಿ ಅಂದರು, "ಎರಡು ಸಾವಿರ ಖೈದಿಗಳು ಈ ಜೈಲಿನಲ್ಲಿ ಇರಬಹುದಾಗಿದೆ. ಇಷ್ಟು ದೊಡ್ಡ ಜೈಲು ನಮ್ಮ ನಗರದಲ್ಲಿ ಇರುವುದು ನಮಗೆ ಗೌರವ ಸಂಗತಿಯಾಗಿದೆ". ನಾನೆಂದೆ "ಈಗ ಒಂದೇ ಮಾತು ಬಾಕಿ ಇದೆ. ಅದೇನೆಂದರೆ ನೀವು ಅದರೊಳಗಿಲ್ಲ. ನೀವು ಅದರೊಳಗೆ ವಿರಾಜಮನವಾದರೆ ಅದರ ಶೋಭೆ ಹೆಚ್ಚಾಗುತ್ತಿತ್ತು". ನನ್ನ ಓರ್ವ ಸರ್ವೋದಯ ಮಿತ್ರರಿದ್ದಾರೆ. ಒಮ್ಮೆ ನಾನು ಅವರ ಹಳ್ಳಿಗೆ ಹೋಗಿದ್ದೆ. ಆಗ ಅವರೆಂದರು, "ನೀವು ನಮ್ಮ ಊರಿಗೆ ಬಂದೇ ಇರುವುದರಿಂದ ನಮ್ಮ ಹಳ್ಳಿಯ ಆಸ್ಪತ್ರೆಯನ್ನು ಉದ್ಘಾಟಿಸಿರಿ". ನಾನೆಂದೆ, "ನನಗೆ ಕಾಯಿಲೆ ಇಲ್ಲವಲ್ಲ". "ಹಾಗಲ್ಲ, ನೀವು ಆಶೀರ್ವಾದ ಮಾಡಿರಿ". "ಆಗಲಿ, ಆಶೀರ್ವಾದ ಮಾಡುತ್ತೇನೆ" ಎಂದು ಹೇಳಿ, ನಿಮ್ಮ ಈ ಆಸ್ಪತ್ರೆ ಸದಾ ಖಾಲಿ ಇರಲಿ ಎಂದು ಆಶೀರ್ವದಿಸಿದೆ. ಹೀಗಲ್ಲದೆ ಬೇರೆ ಯಾವ ಆಶೀರ್ವಾದ ಕೊಡಲು ಸಾಧ್ಯವಿತ್ತು?

ಊರಿಗೆ ಸ್ಮಶಾನ ಅಗತ್ಯ. ಆದರೆ ಏನೆಂದು ಆಶೀರ್ವದಿಸಬೇಕು? ಅಲ್ಲಿಗೆ ಹೋಗುವ ಪರಿಸ್ಥಿತಿ ಯಾರಿಗೂ ಬರದಿರಲೆಂಬುದೇ ಆಗಿರುತ್ತದಲ್ಲವೇ? ಆಸ್ಪತ್ರೆ ಅವಶ್ಯಕ ಸಂಸ್ಥೆ. ಆದರೆ ಅಲ್ಲಿಗೆ ಯಾರೂ ಹೋಗದಂತಾಗಲಿ ಎಂಬುದೇ ಆಶೀರ್ವಾದವಾಗಿರಲು ಸಾಧ್ಯ. ಜೈಲು, ಕೋರ್ಟು, ಪೋಲೀಸ್ ಸಂಸ್ಥೆಗಳು ಕೂಡ ಸಮಾಜಕ್ಕೆ ಅಗತ್ಯ. ಆದರೆ ಔಷಧಿಯಂತೆ ಅವುಗಳ ಉಪಯೋಗವನ್ನು ಮಾಡುವ ಪರಿಸ್ಥಿತಿ ಯಾರಿಗೂ ಬರದೇ ಇರಲಿ. ಆದ್ದರಿಂದ ರಾಜ್ಯ ಸಂಸ್ಥೆಗಳು ಕ್ಷೀಣವಾಗಬೇಕು. ರಾಜನೀತಿ ಕ್ಷೀಣವಾಗಬೇಕು ಮತ್ತು ಲೋಕನೀತಿ ಬೆಳೆಯಬೇಕು.

ಲೋಕನೀತಿ ಎಂದರೆ ಜನರ ರಾಜನೀತಿ. ರಾಜನೀತಿಯ ಅರ್ಥ ಲೋಕಜೀವನದಲ್ಲಿ ಆಡಳಿತದ ಪ್ರವೇಶ. ಲೋಕನೀತಿಯ ಅರ್ಥ ರಾಜ್ಯದೊಳಕ್ಕೆ ಲೋಕ

ಜೀವನದ ಪ್ರವೇಶ. ರಾಜ್ಯ ಸತ್ತೆಯಲ್ಲಿ ಲೋಕಮತದ ಪ್ರವೇಶದ ಹೆಸರೇ ಲೋಕನೀತಿ. ವಿದ್ಯಾರ್ಥಿಗಳು ಕೇಳುತ್ತಾರೆ 'ನಾವು ರಾಜನೀತಿಯನ್ನು ಓದಬೇಕೆ ಅಥವಾ ಬೇಡವೆ?' 'ಅವಶ್ಯ ಓದಿರಿ, ಮನತೆರದು ಓದಿರಿ'. ರಾಜನೀತಿಯಲ್ಲಿ ಉಸಿರಾಡುತ್ತಿರುವಾಗ ಅವಶ್ಯ ಓದು, ರಾಜನೀತಿಯಲ್ಲಿ ಭಾಗವಹಿಸು. ಆದರೆ ರಾಜನೈತಿಕ ಜನರಿಂದ ದೂರವಿರು. ದೇವಸ್ಥಾನದ ಒಳಗೆ ಪುರೋಹಿತ ನುಗ್ಗಿದಾಗ ಭಗವಂತ ಕಿಟಕಿಯಿಂದ ಓಡಿ ಹೋಗುತ್ತಾನೆ. ಈಗ ಮಧ್ಯವರ್ತಿ ಬಂದ ತಕ್ಷಣ ಭಗವಂತನಿಂದ ಭಕ್ತರು ದೂರವಾಗುತ್ತಾರೆ. ಇದನ್ನು ಎಲ್ಲರೂ ತಿಳಿದಿದ್ದಾರೆ. ಮಾರ್ಟಿನ್ ಲೂಥರ್‌ನಿಂದ ಜ್ಯೋತಿ ಬಾ ಪುಲೆವರೆಗೆ ಎಲ್ಲರೂ ಭಗವಂತ ಮತ್ತು ಭಕ್ತನ ಮಧ್ಯೆ ಯಾರೇ ಮಧ್ಯಸ್ಥರಿರಕೂಡದು ಎಂದು ತಿಳಿದಿದ್ದಾರೆ. 'ಮಿಡಲ್‌ಮನ್' ಇರಕೂಡದು. ಈ ಕಾರಣಕ್ಕಾಗಿಯೇ ಬ್ರಾಹ್ಮಣವಾದದ ವಿರುದ್ಧ, ಪುರೋಹಿತಶಾಹಿಯ ವಿರುದ್ಧ ಬಂಡಾಯವಾಯಿತು. ಅದು ಅಗತ್ಯವೂ ಇತ್ತು.

ಉತ್ಪಾದಕ ಮತ್ತು ಉಪಭೋಕ್ತನ ನಡುವೆ 'ಮಿಡಲ್‌ಮನ್' ಬೇಡ. ದಳ್ಳಾಳಿ ಬೇಡ. ಮಧ್ಯಸ್ಥ ಬೇಡ. ಎಂಬುದಾಗಿ ಕ್ರಾಂತಿಕಾರಿಗಳು ಒಪ್ಪಿದ್ದಾರೆ. ಪೇಟೆ ಎಂದರೆ ಅದೊಂದು ದಳ್ಳಾಳಿಗಳ ಸಂಸ್ಥೆ.

ಅಂಗಡಿ, ದಳ್ಳಾಳಿಗಳ ಸಂಸ್ಥೆ. ಚಪ್ಪಲಿಗಳನ್ನು ಸಿದ್ಧಪಡಿಸುವವನಿಗೂ ಚಪ್ಪಲಿ ಧರಿಸುವವನಿಗೂ ಮಧ್ಯೆ ಇಂದು ಯಾವ ಸಂಬಂಧವೂ ಉಳಿದಿಲ್ಲ. ಇಬ್ಬರೂ ಇಂದು ಅನಾಮಿಕರಾಗಿದ್ದಾರೆ. ರೊಟ್ಟಿ ತಯಾರಿಸುವ ತಾಯಿ ಮತ್ತು ರೊಟ್ಟಿ ತಿನ್ನುವ ಮಗ ಇವರಿಬ್ಬರ ಪ್ರತ್ಯಕ್ಷ ಸಂಬಂಧವಿದೆ. ಆದರೆ ಹೋಟೆಲ್‌ನಲ್ಲಿ ರೊಟ್ಟಿ ತಯಾರಿಸುವ ಮತ್ತು ಅಲ್ಲಿ ತಿನ್ನುವ ವ್ಯಕ್ತಿಗಳ ಮಧ್ಯೆ ಯಾವ ಸಂಬಂಧವೂ ಇಲ್ಲ. ಆದ್ದರಿಂದ ಮನುಷ್ಯರ ಪ್ರತ್ಯಕ್ಷ ಸಂಬಂಧ ಇರುವ ರೀತಿಯಲ್ಲಿ ಉತ್ಪಾದನೆ ಮತ್ತು ವಿತರಣೆ ಇರಬೇಕು. ಇದೇ ಗ್ರಾಮ ಸ್ವರಾಜ್ಯ. ವಸ್ತು ತಯಾರಿಸುವವ ಒಬ್ಬ ಮತ್ತು ವಸ್ತು ಉಪಯೋಗಿಸುವವ ಒಬ್ಬ. ಇಬ್ಬರೂ ಪರಸ್ಪರ ತಿಳಿದುಕೊಂಡಿರುತ್ತಾರೆ. ಪರಸ್ಪರ ಪರಿಚಿತರಾಗಿರುತ್ತಾರೆ. ಪರಸ್ಪರ ವ್ಯವಹಾರದಲ್ಲಿ ಪರಸ್ಪರರಿಗೂ ಆಸಕ್ತಿ ಇರುವಂಥ ವಿರತರಣೆಯೇ ಗ್ರಾಮಸ್ವಾರಾಜ್ಯದ ವ್ಯವಸ್ಥೆಯಾಗಿದೆ.

ಒಂದು ನಗರ ಮತ್ತು ಒಂದು ಹಳ್ಳಿ. ಒಂದರಲ್ಲಿ ಗ್ರಾಮೀಣ ಸಂಸ್ಕೃತಿ ಇನ್ನೊಂದರಲ್ಲಿ ನಗರ ಸಂಸ್ಕೃತಿ. ಮನುಷ್ಯ ಮನುಷ್ಯರ ಪ್ರತ್ಯೇಕ ಸಂಬಂಧದ ಸಂಸ್ಕೃತಿ ಗ್ರಾಮೀಣ ಸಂಸ್ಕೃತಿಯ ಅರ್ಥ. ಇಂದು ಹಳ್ಳಿ ಹಳ್ಳಿಯಾಗಿಲ್ಲ. ಈ ಬಗ್ಗೆ ಡಾ.ಅಂಬೇಡ್ಕರ್ ಅಂದಿದ್ದರು. "ಮಿಕ್ಸ್ ಆಫ್ ಲೋಕಲಿಸಂ" ಇದು ಕ್ಷುದ್ರಕ್ಷೇತ್ರವಾದ ಗುಂಪು. ಈ ಗುಂಪು ಹಳ್ಳಿಯಲ್ಲ. ಅಲ್ಲಿ ಹಳ್ಳಿಯ ಕಲೆ ಕೂಡ ಇಲ್ಲ. ಜಾತಿಸ್ಥಾನದ ಕೋಕದಿಂದ ಪಾಕಿಸ್ತಾನದ ಜನ್ಮವಾಯಿತು. ಆದ್ದರಿಂದ ಹಳ್ಳಿಯ ಸ್ವರೂಪ ಬದಲಾಯಿಸಬೇಕು. ಒಬ್ಬರ ಜತೆಗೆ ಒಬ್ಬರ ಹಾರ್ದಿಕಪೂರ್ಣವಾದ ಪ್ರತ್ಯಕ್ಷ ಸಂಬಂಧ ಗ್ರಾಮೀಣ ಸಂಸ್ಕೃತಿ. ಇಲ್ಲಿ ಅಧಿಕಾರದ ಪ್ರವೇಶಕ್ಕೆ ಯಾವ ಕಾರಣವೂ ಇಲ್ಲ. ಅಧಿಕಾರದ ಪ್ರವೇಶವಾದ ದಿನದಿಂದ ಕ್ರಾಂತಿ ಅಲೆಮಾರಿಯಾಗದಿರುವುದಿಲ್ಲ. ಆದ್ದರಿಂದ ಈ ಮೂರೂ ಸಂಸ್ಥೆಗಳು ಮನುಷ್ಯನನ್ನು ಖರೀದಿಸುವ ಖಜಾನೆಯ ಅಧಿಕಾರ, ಮನುಷ್ಯನ ಮೇಲೆ ಹಕ್ಕು ನಡೆಸುವ ಶಸ್ತ್ರಗಳ ಅಧಿಕಾರ ಮತ್ತು ಮೂರನೆಯದು ಮನುಷ್ಯನ ಮೇಲೆ ಅಧಿಕಾರ ನಡೆಸುವ ಕುರ್ಚಿಯ, ಪಟ್ಟದ, ರಾಜಸತ್ತೆಯ ಅಧಿಕಾರ ಇವೆಲ್ಲವೂ ಅಂತ್ಯಗೊಳ್ಳಬೇಕು ಮತ್ತು ಮನುಷ್ಯತೆಯ ವಿಕಾಸವಾಗಬೇಕು. ಇದು ಕ್ರಾಂತಿ. ಈ ದೃಷ್ಟಿಯಿಂದಿ ತರುಣರು ವಿಚಾರ ಮಾಡಬೇಕು. ಈ ವಿಚಾರವೇ ತಾರುಣ್ಯ, ತಾರುಣ್ಯತ್ವ *-ಅನು : ಸುರೇಂದ್ರ ಕೌಲಗಿ*

* * *

ಬಹುಗುಣರ ಮೇಲೆ ಪ್ರಭಾವ ಬೀರಿದ ಕ್ರೊಪೊಟ್‌ಕಿನ್ ಪುಸ್ತಕ

– ಜಾರ್ಜ್ ಆಲ್ಫ್ರೆಡ್ ಜೇಮ್ಸ್– ಕನ್ನಡಕ್ಕೆ : ಸುರೇಂದ್ರ ಕೌಲಗಿ

ಕ್ರೊಪೋಟ್‌ಕಿನ್ ರಷ್ಯಾ ದೇಶದ ಕ್ರಾಂತಿಕಾರಿ ಲೇಖಕರಲ್ಲಿ ಒಬ್ಬರು. ಅವರ ಚಿಂತನೆ ಮತ್ತು ಕ್ರಾಂತಿ ರಚನಾತ್ಮಕವಾಗಿದ್ದವು. ಅವರು ಯುವಕರಿಗೆ ಕರೆ ಕೊಡುತ್ತಾ ಈ ರೀತಿ ಹೇಳಿದರು, "ಬನ್ನಿ, ನಿಮ್ಮ ಸಹೋದರರೊಂದಿಗೆ ಒಂದು ಗೂಡಿ ಒಂದು ಮಹಾನ್ ಕ್ರಾಂತಿಗಾಗಿ ಪ್ರಯತ್ನ ಶೀಲರಾಗಿರಿ. ಆ ಕ್ರಾಂತಿ ಗುಲಾಮಗಿರಿಯನ್ನು ಹೇಳ ಹೆಸರಿಲ್ಲದೆ ಅಳಿಸಿ ಬಿಡುವುದು. ಬೇಡಿಗಳನ್ನು ಚೂರು ಚೂರು ಮಾಡಿ ಕಿತ್ತೆಸೆಯುವುದು. ಸಮಸ್ತ ಮಾನವ ಜಾತಿಗಾಗಿ ಒಂದು ಹೊಸ ಹಾಗೂ ವಿಸ್ತೃತವಾದ ಸುಖೀ ಮಾರ್ಗವನ್ನು ತೆರೆಯುವುದು. ಅಂತ್ಯದಲ್ಲಿ ಇಡೀ ಮಾನವ ಸಮಾಜದ ಮಧ್ಯೆ ನಿಜವಾದ ಸ್ವಾಧೀನತೆ ವಾಸ್ತವಿಕ ಸಮಾನತೆ ಮತ್ತು ದ್ವೇಷರಹಿತ ಭ್ರಾತೃಭಾವದ ಸ್ಥಾಪನೆ ಮಾಡುತ್ತ ಎಲ್ಲರೂ ಕೆಲಸ ಮಾಡುವಂತೆ ಮಾಡುವುದು. ಎಲ್ಲರಿಗೂ ಕೆಲಸ ಮಾಡುವ ಅವಕಾಶವನ್ನು ಕೊಡುವುದು. ತನ್ಮೂಲಕ ಮನುಷ್ಯ ತನ್ನ ಪರಿಶ್ರಮದ ಫಲವನ್ನು ಪೂರ್ಣ ಆನಂದದಿಂದ ಉಪಭೋಗಿಸುವನು. ಅವನ ಶಕ್ತಿ ಪೂರ್ಣರೂಪವಾಗಿ ವಿಕಾಸ ಹೊಂದಿ ಎಲ್ಲರ ಜೀವನ ವಿವೇಕಯುಕ್ತ ಮನುಷ್ಯತ್ವದ ಅನುಕೂಲದಾಯಕ ಸುಖವುಳ್ಳದ್ದಾಗುವುದು".

ಕ್ರೊಪೋಟ್‌ಕಿನ್ ತನ್ನ ಉದ್ದೇಶಿತ ಕ್ರಾಂತಿಗಾಗಿ ಯುವಕರನ್ನೇ ಗುರಿಯನ್ನಾಗಿ ಇಟ್ಟುಕೊಂಡಿದ್ದ. ಅ ಸಂಬಂಧವಾಗಿ ಅವನು ಹೇಳುವ ಮಾತುಗಳು ತುಂಬ ರೋಚಕವಾಗಿವೆ. ಕ್ರೊಪೋಟ್‌ಕಿನ್ ಯುವಕರನ್ನು ಕುರಿತು ಈ ರೀತಿ ಹೇಳಿದ್ದಾರೆ, "ಇಂದು ನಾನು ಯುವಕರಿಗೆ ಕೆಲ ಮಾತು ಹೇಳಬಯಸುತ್ತೇನೆ. ವೃದ್ಧರು ಎಂಬ ಪದದ ಅರ್ಥ ನನ್ನ ದೃಷ್ಟಿಯಲ್ಲಿ ಯಾರು ಮಾನಸಿಕವಾಗಿ ಮತ್ತು ವೈಚಾರಿಕವಾಗಿ ವೃದ್ಧರೊ ಅವರೆಂಬುದಾಗಿದೆ. ನನ್ನ ಈ ಪುಸ್ತಕವನ್ನು ಅವರು ಓದುವ ಕಷ್ಟ ತೆಗೆದುಕೊಳ್ಳದಿರಲಿ. ಏಕೆಂದರೆ ಅದನ್ನೋದುವುದರಿಂದ ಅವರ ಕಣ್ಣುಗಳು ದಣಿಯುವ ಹೊರತಾಗಿ ಬೇರೇನೂ ಲಾಭವಾಗುವುದಿಲ್ಲ. ನನ್ನ ಪುಸ್ತಕವನ್ನು ಓದುವ ನಿನ್ನ ವಯಸ್ಸು ಹದಿನೆಂಟರಿಂದ ಇಪ್ಪತ್ತು ಎಂದು ಭಾವಿಸುತ್ತೇನೆ. ನೀನು ನಿನ್ನ ವಿದ್ಯಾರ್ಥಿ ಜೀವನವನ್ನು ಮುಗಿಸಿರಬಹುದು, ಸಾಂಸಾರಿಕ ಜೀವನ ಪ್ರವೇಶ ಮಾಡುತ್ತಿರಬಹುದು. ನಿನ್ನ ಶಿಕ್ಷಕರು ನಿನ್ನ ತಲೆಯೊಳಗೆ ಯಾವ ಅಂಧ ವಿಶ್ವಾಸಗಳನ್ನು ತುಂಬಿದ್ದಾರೋ ಆ ಅಂಧ ವಿಶ್ವಾಸಗಳಿಂದ ನಿನ್ನ ತಲೆ ಮುಕ್ತವಾಗಿದೆ ಎಂದೂ ನಂಬಿದ್ದೇನೆ. ಅಲ್ಲದೆ ನರಕ–ಸ್ವರ್ಗದ ಮಾತುಗಳಿಂದ ಭೀತಿಗೊಳ್ಳುವುದಿಲ್ಲವೆಂದೂ, ಮುಲ್ಲಾ ಮತ್ತು ಪೂಜಾರಿಗಳ ಪೊಳ್ಳು ಮಾತುಗಳನ್ನು ಕೇಳಲು ಹೋಗುವುದಿಲ್ಲವೆಂದೂ, ಪತನಶೀಲ ಜಾತಿಯಲ್ಲಿ ಹುಟ್ಟಿದ್ದರೂ ತಮ್ಮ ಬೆರಗಿನ ಬಟ್ಟೆಗಳನ್ನು ಧರಿಸಿ ಜಾತ್ರೆಗಳಲ್ಲಿ ಕೋತಿಯ

ಮುಖವಾಡ ಧರಿಸಿ ಮೆರೆಯುವಂಥ ಜನರ ಸಂಗವನ್ನು ನೀನು ಮಾಡುತ್ತಿಲ್ಲವೆಂದೂ ನಂಬಿದ್ದೇನೆ. ಚಿಕ್ಕ ವಯಸ್ಸಿನಿಂದಲೇ ಸುಖ ಭೋಗಿಸಬೇಕೆಂಬ ಅತಿಯಾದ ಆಸೆಯನ್ನು ಇಟ್ಟುಕೊಂಡಿಲ್ಲವೆಂದು ತಿಳಿಯುತ್ತೇನೆ. ನೀನು ಓರ್ವ ಸಹೃದಯಿ ವ್ಯಕ್ತಿಯೆಂಬ ಕಾರಣಕ್ಕಾಗಿ ನಿನ್ನೊಂದಿಗೆ ಮಾತನಾಡುತ್ತಿದ್ದೇನೆ.

ಸಾಮಾನ್ಯವಾಗಿ ನಿನ್ನ ಮುಂದೆ ಒಂದು ಪ್ರಶ್ನೆ ಆಗಾಗ್ಗೆ ಬರುತ್ತದೆ ಎಂದು ನಾನು ತಿಳಿದಿದ್ದೇನೆ. ಆ ಪ್ರಶ್ನೆ "ಮುಂದೆ ನಾನೇನು ಆಗಬೇಕಿದೆ" ಎಂಬುದಾಗಿದೆ. ವಾಸ್ತವದಲ್ಲಿ ಪ್ರತಿಯೊಬ್ಬ ಮನುಷ್ಯ ತನ್ನ ಯೌವನದಲ್ಲಿ ಬಹಳ ವರ್ಷಗಳ ಕಾಲ ಸಮಾಜದ ಸಹಾಯದಿಂದ ಯಾವ ವಿದ್ಯೆ ಅಥವಾ ಕಲೆಯನ್ನು ಅಧ್ಯಯನ ಮಾಡಿದ್ದನೋ ಅದರ ಉದ್ದೇಶ್ಯ ತನ್ನ ಜ್ಞಾನವನ್ನು ಬೇರೆಯವರು ಲೂಟಿ ಮಾಡುವುದಕ್ಕಾಗಲೀ ಅಥವಾ ತನ್ನ ಸ್ವಾರ್ಥ ಸಾಧನೆಗಾಗಿಯಾಗಲೀ ಎಂದು ಭಾವಿಸುವವವರು ಅವಶ್ಯವಾಗಿ ಮಹಾಭ್ರಷ್ಟರಾಗಿರುತ್ತಾರೆ ಮತ್ತು ದುರ್ಗುಣಗಳಿಂದ ಕೂಡಿದವರಾಗಿರುತ್ತಾರೆ. ಅವರ ಮನಸ್ಸಿನಲ್ಲಿ ತನ್ನಲ್ಲಿಯ ಬುದ್ಧಿಮತ್ತೆ, ತನ್ನ ಯೋಗ್ಯತೆ ಮತ್ತು ಜ್ಞಾನದ ಉಪಯೋಗ ಯಾರು ಇಂದು ದುರ್ದೆಶೆ ಮತ್ತು ಅಜ್ಞಾನದಲ್ಲಿದ್ದಾರೋ ಅಂಥವರಿಗೆ ಮೀಸಲೆಂಬ ವಿಚಾರ ಬರುವುದಿಲ್ಲವೋ ಅವರು ಕೀಳು ಮನಸ್ಸಿನವರಾಗಿದ್ದಾರೆ. ನೀನು ಯಾವ ಪ್ರಕಾರದ ಮನೆತನದಲ್ಲಿ ಹುಟ್ಟಿರುವಿ ಎಂಬುದು ನನಗೆ ಗೊತ್ತಿಲ್ಲ. ನೀನು ಯಾವುದೋ ಶ್ರೀಮಂತರ ಮನೆಯವನಾಗಿರಬಹುದು ಮತ್ತು ವಿಜ್ಞಾನದ ಅಧ್ಯಯನ ಮಾಡಬೇಕೆಂದು ಆಲೋಚಿಸರಬಹುದು. ಡಾಕ್ಟರ್ ಆಗಬೇಕೆಂದು ಬಯಸಿರಬಹುದು. ನಿನ್ನೆದರು ಒಂದು ವಿಶಾಲ ಕರ್ಮಕ್ಷೇತ್ರವಿದೆ. ನೀನು ವಿಶಾಲ ಜ್ಞಾನ ಮತ್ತು ಸುಶಿಕ್ಷಿತ ಬುದ್ಧಿಯೊಂದಿಗೆ ಕರ್ಮಕ್ಷೇತ್ರವನ್ನು ಪ್ರವೇಶಿಸುತ್ತಿರಬಹುದು. ಇಲ್ಲವೇ ಇದಕ್ಕೆ ವಿರುದ್ಧವಾಗಿ ನೀನು ಒಂದು ಕಷ್ಟ ಜೀವಿಯಾದ ಕೆಲಸಗಾರನಾಗಿರಬಹುದು. ನಿನ್ನ ಶಿಕ್ಷಣ ಶಾಲೆಯ ಸಾಮಾನ್ಯ ತರಗತಿವರೆಗೆ ಸೀಮಿತವಾಗಿದ್ದಿರಬಹುದು. ಜೊತೆಗೆ ವರ್ತಮಾನ ಕಾಲದಲ್ಲಿಯ ಶ್ರಮಜೀವಿಗಳ ಕೂಲಿಕಾರರಂಥ ಕಠಿಣ ಶ್ರಮ ಮಾಡಿ ಜೀವನ ನಡೆಸುವಂಥ ಪರಿಸ್ಥಿತಿ ಇರಬಹುದು".

ಕ್ರೊಪೋಟ್‌ಕಿನ್‌ರ ಈ ಮಾತುಗಳಿಂದ ಪ್ರಭಾವಿತರಾಗದೇ ಇರಲು ಸಾಧ್ಯವಿಲ್ಲ ಎಂದು ಬಹುಗುಣರು ಹೇಳುತ್ತಾರೆ.

* * *

ಸರ್ವೋದಯದ ಕ್ರಿಯಾಶೀಲ ವ್ಯಕ್ತಿಯನ್ನಾಗಿ ಗುರುತಿಸಿಕೊಳ್ಳಬೇಕೆಂಬುದು ನನ್ನ ಮುಖ್ಯ ಸಮಸ್ಯೆ. ಇದು ಕೇವಲ ನನ್ನ ವ್ಯಕ್ತಿಗತ ಸಮಸ್ಯೆಯಲ್ಲ. ಇಡೀ ಸರ್ವೋದಯ ಸಮಾಜದ ಮುಂದಿರುವ ಸಮಸ್ಯೆ. ಸರ್ವೋದಯ ಸಿದ್ಧಾಂತದ ದೃಷ್ಟಾರ ಮಹಾತ್ಮ ಗಾಂಧೀಯವರು ತಮ್ಮ ಅಂತಿಮ ಉಯಿಲು ಮೂಲಕ, ಭೂದಾನ-ಗ್ರಾಮದಾನ ಮತ್ತು ಗ್ರಾಮಸ್ವರಾಜ್ಯದ ದೀರ್ಘಯಾತ್ರೆಯ ಮೂಲಕ ಆಚಾರ್ಯ ವಿನೋಬಾ ಭಾವೆಯವರು, ಸಂಪೂರ್ಣ ಕ್ರಾಂತಿಯ ಕರೆಯ ಮೂಲಕ ಲೋಕನಾಯಕ ಜಯಪ್ರಕಾಶ ನಾರಾಯಣರು ಸ್ಪಷ್ಟ ರೂಪರೇಷೆಯನ್ನು ಕೊಟ್ಟಿದ್ದರೂ ಸಹ ಕಳೆದ ೫೦ವರ್ಷಗಳ ನಂತರವೂ ನಮ್ಮನ್ನು ನಾವು ಗುರುತಿಸಿಕೊಳ್ಳಲು ಸಾಧ್ಯವಾಗಿಲ್ಲ. ಇದಕ್ಕೆ ಕಾರಣವೇನು?

– ಸುಂದರಲಾಲ್ ಬಹುಗುಣ

* * *

ವಿಧಾನಸಭೆ ತುರ್ತಾಗಿ ವಿಸರ್ಜಿತಗೊಳ್ಳಬೇಕು

– ಸುರೇಂದ್ರ ಕೌಲಗಿ

ಉಪ್ಪು ತನ್ನ ರುಚಿ ಕಳೆದುಕೊಂಡರೆ ಅದಕ್ಕೆ ರುಚಿ ಕೊಡುವವರು ಯಾರು? ಜನಪ್ರತಿನಿಧಿಗಳೆಂದೂ, ಜನನಾಯಕರೆಂದೂ ತಮ್ಮನ್ನು ಕರೆದುಕೊಳ್ಳುವ ಇನ್ನೂರ ಇಪ್ಪತ್ತೈದು ವಿಧಾನಸಭಾ ಸದಸ್ಯರೂ, ಮತಿ ಭ್ರಷ್ಟರೂ, ನೀತಿ ವಿಹೀನರೂ, ಅಪಮೌಲ್ಯವಂತರೂ ಆದರೆ ಅವರನ್ನು ಸರಿದಾರಿಗೆ ತರುವವರು ಯಾರು? ಕರ್ನಾಟಕದ ಮತದಾರರು ಗಂಭಿರವಾಗಿ ಯೋಚಿಸಬೇಕಿದೆ. ರೋಗಕ್ಕೆ ತಕ್ಕಂಥ ಚಿಕಿತ್ಸೆ ಮಾಡಬೇಕಿದೆ. 'ಮಾಡು ಇಲ್ಲವೆ ಮಡಿ' ಎಂಬ ತೀವ್ರ ಮನೋಭಾವನೆಯುಳ್ಳ ಆಂದೋಲನ ಹೂಡಬೇಕಿದೆ; ಇಂದಿರಾಗಾಂಧಿಯವರ ಸರ್ವಾಧಿಕಾರತ್ವವನ್ನು ಮಣಿಸಿ ಪ್ರಜಾತಂತ್ರವನ್ನು ಪುನರ್‌ಸ್ಥಾಪಿಸಿದ ಜಯುಪ್ರಕಾಶ್ ನಾರಾಯಣರು ಹೂಡಿದ್ದ ಸಂಪೂರ್ಣಕ್ರಾಂತಿಯಂಥ ತೀವ್ರ ಮನೋಭಾವನೆಯ ಆಂದೋಲನ ಹೂಡಬೇಕಾಗಿದೆ. ಈಗಿನ ಎಲ್ಲ ವಿಧಾನಸಭಾ ಸದಸ್ಯರು ತಮ್ಮ ಸ್ಥಾನದಲ್ಲಿ ಮುಂದುವರಿಯುವ ನೈತಿಕ ಹಕ್ಕನ್ನು ಕಳೆದುಕೊಂಡಿದ್ದಾರೆ. ಇವರನ್ನೇ ಅದಲು-ಬದಲು ಮಾಡುವುದರಿಂದ ರಾಜಕೀಯ ಪರಿಸ್ಥಿತಿಯಲ್ಲಾಗಲೀ, ಆಡಳಿತ ವ್ಯವಸ್ಥೆಯಲ್ಲಾಗಲೀ ಸುಧಾರಣೆ ತರಲು ಸಾಧ್ಯವಿಲ್ಲ. ಕರ್ನಾಟಕದ ಪ್ರಚಲಿತ ಅಧೋಗತಿಯ ಮತ್ತು ಅತಂತ್ರ ರಾಜಕಾರಣದ ತಡೆಗೆ ಏಕೈಕ ಪರಿಹಾರ ಈಗಿರುವ ವಿಧಾನಸಭೆಯನ್ನು ತುರ್ತಾಗಿ ವಿಸರ್ಜಿಸುವುದೇ ಆಗಿದೆ. ಇಂದಿನ ಆಡಳಿತಾರೂಢ ಪಕ್ಷ ಕೇವಲ ಆರು ಸಂಖ್ಯೆಯ ಬಹುಮತದಿಂದ ತನ್ನದೇ ಆದ ವಾಮಮಾರ್ಗೀಯ ರಾಜಕೀಯ ತಂತ್ರದಿಂದ ಆಡಳಿತ ನಡೆಸುತ್ತಿದೆ. ಅಶುದ್ಧ ಮತ್ತು ಪ್ರಶ್ನಾರ್ಹ ಸಂಖ್ಯೆಯ ಬಹುಮತದ ಆಡಳಿತ ಕರ್ನಾಟಕದಲ್ಲಿಯ ಪ್ರಜಾಪ್ರಭುತ್ವಕ್ಕೆ ಮಾರಕವಾಗಿದೆ. ಯಾವ ರೀತಿ ವ್ಯಕ್ತಿಯ ಪ್ರಾಣ ಉಳಿಸಲು ವೈದ್ಯ ಕಡ್ಡಾಯವಾಗಿ ಎಂಥದೇ ದುರ್ಭರವಾದ ಶಸ್ತ್ರಚಿಕಿತ್ಸೆಯನ್ನು ನಡೆಸುತ್ತಾನೋ ಅದೇ ರೀತಿ ಹರಾಜಿಗೆ ಬಂದಿರುವ ಕರ್ನಾಟಕದ ರಾಜಕಾರಣವನ್ನು ಮೇಲೆತ್ತಲು, ಕರ್ನಾಟಕದ ಗೌರವವನ್ನು ಕಾಪಾಡಲು ವಿಧಾನಸಭೆಯನ್ನು ತುರ್ತಾಗಿ ವಿಸರ್ಜಿಸುವುದೊಂದೇ ಉಪಾಯವಾಗಿದೆ. ಇದಕ್ಕೂ ಕಡಿಮೆ ತೀಕ್ಷ್ಣ ಉಪಾಯ ಬೇರೊಂದಿಲ್ಲ. ಕಳೆದ ನಾಲ್ಕೈದು ತಿಂಗಳುಗಳಿಂದ ಕರ್ನಾಟಕದ ವಿಧಾನಸಭಾ ಸದಸ್ಯರು ನಡೆಸಿದ ಅಪ್ರಜಾತಾಂತ್ರಿಕ ರಾಜಕಾರಣ ಆರು ಕೋಟಿ ಕನ್ನಡಿಗರೆಲ್ಲ ನಾಚಿಕೆಯಿಂದ ತಲೆತಗ್ಗಿಸುವಂತಾಗಿದೆ. ಎಲ್ಲ ಮಾಧ್ಯಮಗಳು ಜನಪ್ರತಿನಿಧಿಗಳ ಕೀಳುಮಟ್ಟದ ರಾಜಕೀಯ ಕ್ರೀಡೆಗಳನ್ನು ಮನಮುಟ್ಟುವಂತೆ ಅಹರ್ನಿಶಿ ಬಿಂಬಿಸಿವೆ. ರಾಜ್ಯದ ಎಲ್ಲ ಪ್ರಮುಖ ಪತ್ರಿಕೆಗಳ ಅಂಕಣಗಳಲ್ಲಿ ರಾಜಕೀಯ ಜಿಜ್ಞಾಸುಗಳು, ವಿಮರ್ಶಕರು, ಬುದ್ಧಿಜೀವಿಗಳು, ಜನಸಾಮಾನ್ಯರು ತಮ್ಮೆಲ್ಲ ಶಬ್ದ ಭಂಡಾರವನ್ನು ಉಪಯೋಗಿಸಿ ಖಂಡಿಸಿದ್ದಾರೆ, ನಿಂದಿಸಿದ್ದಾರೆ. ರಾಜಕೀಯ ಪಕ್ಷಗಳ ನಾಯಕರ

ಪರಸ್ಪರರ ಬಯ್ದಾಟ, ದೋಷಾರೋಪಣೆ ಇತ್ಯಾದಿಗಳು ತಾರಕಕ್ಕೆ ಮುಟ್ಟಿವೆ. ನಾಲ್ಕು ಜನ ಸೇರುವ ಎಲ್ಲ ಸ್ಥಳಗಳಲ್ಲಿ ರಾಜ್ಯದ ರಾಜಕಾರಣಿಗಳ ಕೀಳುಮಟ್ಟದ ವರ್ತನೆಯನ್ನು ಕುರಿತು ಮಾತನಾಡಲಾಗುತ್ತಿದೆ. ಕೆಲವರಂತೂ ಆ ಬಗ್ಗೆ ಮಾತನಾಡದಿರುವುದೇ ಸರಿ ಎಂಬ ತೀರ್ಮಾನಕ್ಕೆ ಬರುತ್ತಾರೆ. ಕರ್ನಾಟಕದ ರಾಜಕಾರಣ ರಾಜಕಾರಣವೇ ಅಲ್ಲ, ಅದೊಂದು ದೊಂಬರಾಟ, ಹುಚ್ಚು ಪ್ರತಿನಿಧಿಗಳ 'ನಂಗಾನಾಚ್' ಎಂದೂ ಜನಸಾಮಾನ್ಯರೆಲ್ಲ ಬಣ್ಣಿಸುತ್ತಾರೆ. ಇಂದಿನಂಥ ದರಿದ್ರ ರಾಜಕಾರಣ, ದರಿದ್ರ ರಾಜಕೀಯ ನಾಯಕರನ್ನು ಕರ್ನಾಟಕ ಈ ಹಿಂದೆ ಎಂದೂ ಕಂಡಿರಲಿಲ್ಲವೆಂಬ ಮಾತು ಸರ್ವೆಸಾಮಾನ್ಯವಾಗಿದೆ. ಎಲ್ಲರ ಮನಸ್ಸಿನಲ್ಲಿ ಕೋಪವೂ ಇದೆ. ವಿರೋಧ ಪಕ್ಷಗಳೂ ನಿಃಸಹಾಯಕವಾಗಿ ಕುಳಿತಿವೆ. ಬಡವನ ಸಿಟ್ಟು ದವಡೆಗೆ ಮೂಲ ಎಂಬಂತೆ ವಿರೋಧ ಪಕ್ಷಗಳ ನಾಯಕರು ಹಲ್ಲು ಕಡಿಯುತ್ತಿದ್ದಾರೆಯೇ ವಿನಃ ಪ್ರಸ್ತುತ ಕೆಟ್ಟ ರಾಜಕಾರಣದ ಜೇಡರಬಲೆಯಿಂದ ಹೇಗೆ ಹೊರಗೆ ಬರಬೇಕೆಂಬುದರ ಬಗ್ಗೆ ತಿಳಿಯದವರಾಗಿದ್ದಾರೆ. ಅಥವಾ ಧೀರ ರಾಜಕೀಯ ಇಚ್ಛಾಶಕ್ತಿಯನ್ನು ಕಾರ್ಯಗತಗೊಳಿಸಲು ಅಸಮರ್ಥರಾಗಿದ್ದಾರೆ. ವಿರೋಧ ಪಕ್ಷಗಳ ಎಲ್ಲ ನಾಯಕರು ಮಹಾಭಾರತದಲ್ಲಿಯ ಉತ್ತರಕುಮಾರರಾಗಿದ್ದಾರೆ. ಪ್ರಬಲವಾದ ರಾಜಕೀಯ ಇಚ್ಛಾಶಕ್ತಿ ಪ್ರದರ್ಶಿಸಿ ತಮ್ಮ ಇಂದಿನ ವಿಧಾನಸಭಾ ಸದಸ್ಯತ್ವ ಎಲ್ಲಿ ಹೋಗುತ್ತದೋ ಎಂಬ ಭೀತಿ ಅವರನ್ನು ಕಾಡುತ್ತಿದೆ. ಅವರಿಗೆ ರಾಜ್ಯ ಹಿತಕ್ಕಿಂತ ತಮ್ಮ ಸ್ವಾರ್ಥ ಮುಖ್ಯವಾಗಿದೆ.

ಇಂದು ರಾಜ್ಯದಲ್ಲಿ ರಾಜಕೀಯ ಅನಾಯಕತ್ವ ಉಂಟಾಗಿದೆ. ಜನಸಾಮಾನ್ಯರು ಅಸಮರ್ಥರಾಗಿದ್ದಾರೆ. ನಾಯಕರು ಸ್ವಾರ್ಥಿಗಳಾಗಿದ್ದಾರೆ. ಸಂವಿಧಾನ ಸಧ್ಯದ ಪರಿಸ್ಥಿತಿಯಲ್ಲಿ ನಿರುಪಯುಕ್ತವಾಗಿದೆ. ರಾಜ್ಯದಲ್ಲಿ ರಾಜಕೀಯ ನಿರ್ವಾತ ಉಂಟಾಗಿದೆ. ಇಂಥ ಬಿಕ್ಕಟ್ಟಿನ ಪರಿಸ್ಥಿತಿಯನ್ನು ನಿರ್ಣಾಯಕವಾಗಿ ಎದುರಿಸಿ ರಾಜ್ಯದ ರಾಜಕಾರಣವನ್ನು ಸುಸ್ಥಿತಿಗೆ ತರಬಹುದಾದ ಏಕೈಕ ಕಾರಣಪುರುಷ ಮತದಾರ. ಪ್ರಜಾತಂತ್ರ ವ್ಯವಸ್ಥೆಗೆ ಪ್ರಾಣ ತುಂಬುವವ ಮತದಾರ, ಅವನಿಂದಲೇ ರಾಜ್ಯಶಕ್ತಿಯ ಉಗಮವಾಗುತ್ತದೆ, ಅವನ ಸಮ್ಮತಿಂದಲೇ ಆಡಳಿತ ನಡೆಯುತ್ತದೆ. ರಾಜ್ಯಶಕ್ತಿ ಲೀನವಾಗುವುದಾದರೂ ಅದು ಮತದಾರನಲ್ಲಿಯೇ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮತದಾರನೇ ಸಾರ್ವಭೌಮ ಅಧಿಕಾರಸ್ಥ. ಆದ್ದರಿಂದ ರಾಜ್ಯ ರಾಜಕಾರಣಿಗಳು ದಿಕ್ಕೆಟ್ಟಂತೆ ಆಡುತ್ತಿರುವಾಗ, ಭ್ರಷ್ಟಾಚಾರ ತುಂಬಿ ತುಳುಕಾಡುತ್ತಿರುವಾಗ, ಅಧಿಕಾರಿಗಳು ನಿರಂಕುಶರಾಗಿರುವಾಗ, ರಾಜ್ಯ ನಾಯಕತವಿಹೀನವಾಗಿರುವಾಗ ಮತದಾರ ತನ್ನ ಸಂವೈಧಾನಿಕ ಜವಾಬ್ದಾರಿಯನ್ನು ನಿರ್ವಹಿಸಲು ಮೈ ಕೊಡವಿಕೊಂಡು ಎದ್ದೇಳಬೇಕು. ರಾಜಕಾರಣವೆಂಬ ಧರ್ಮಕ್ಷೇತ್ರವನ್ನು ಕುರುಕ್ಷೇತ್ರವನ್ನಾಗಿಸಿರುವ ವಿಧಾನಸಭೆಯ ೨೨೪ ಸದಸ್ಯರನ್ನೂ ಸಾರಾಸಗಟಾಗಿ ಸದಸ್ಯತ್ವಹೀನರನ್ನಾಗಿ ಮಾಡಬೇಕು. ಇಲ್ಲವೇ ಅವರೇ ಸ್ವತಃ ಗೌರವದಿಂದ ರಾಜೀನಾಮೆ ಕೊಡುವಂತೆ ಮಾಡಬೇಕು. ರಾಜ್ಯದ ಮತದಾರರು ತಮ್ಮಲ್ಲಿ ಅಡಗಿರುವ, ನಿಹಿತವಾಗಿರುವ ರಾಜಕೀಯ ಇಚ್ಛಾಶಕ್ತಿಯನ್ನು ಕ್ರೋಢೀಕರಿಸಿ ವಿಧಾನಸಭಾ ವಿಸರ್ಜನಕ್ಕಾಗಿಯೇ ರಾಜ್ಯಾದ್ಯಂತ ಜನತಾ ಆಂದೋಲನವನ್ನು ಹೂಡಬೇಕು. ಮುಂದೆ ಆರು ತಿಂಗಳೊಳಗಾಗಿ

ಸಾರ್ವತ್ರಿಕ ಚುನಾವಣೆ ನಡೆಯುವಂತೆ ಮಾಡಬೇಕು. ಆ ಚುನಾವಣೆ ಇದುವರೆಗೆ ನೊಂದ ಬೆಂದ ಮತದಾರರು ಹಚ್ಚಿದ ಶುದ್ಧತಾ ಪರೀಕ್ಷೆಯ ಅಗ್ನಿಯಾಗಬೇಕು. ಈ ರಾಜಕೀಯ ಶುದ್ಧತಾ ಪರೀಕ್ಷೆಯಲ್ಲಿ ಈಗಿನ ಎಲ್ಲ ವಿಧಾನಸಭಾ ಸದಸ್ಯರೂ ತಮ್ಮ ಸಾಚಾತನವನ್ನು ಪರೀಕ್ಷೆಗೆ ಒಡ್ಡಬೇಕು, ಇವರೊಂದಿಗೆ ಪ್ರತಿಸ್ಪರ್ಧಿಯಾಗಿ ರಾಜ್ಯದ ವಿಚಾರವಂತ, ಪ್ರಜ್ಞಾವಂತ, ಸೇವಾಮತಿಯ ತರುಣರು ಸ್ಪರ್ಧಿಸಬೇಕು. ಅಗ್ನಿ ಪರೀಕ್ಷೆಯ ಚುನಾವಣೆಯ ಕಾರಣದಿಂದ ಕರ್ನಾಟಕ ವಿಧಾನಸಭೆ ಪರಿಶುದ್ಧ ರಾಜಕಾರಣಿಗಳಿಂದ ಕಂಗೊಳಿಸುವಂತಾಗಬೇಕು. ಅಚ್ಚ ಹೊಸ ಮಂತ್ರಿ ಮಂಡಲ ರಚನೆಯಾಗಬೇಕು. ಈ ಪ್ರಕಾರದ ಸದ್‌ಫಲಿತಾಂಶ ಸಿಗಬೇಕಾದರೆ ಮತದಾರರು ತಮ್ಮಲ್ಲಿ ಅಧಿಷ್ಠಾಪಿತವಾಗಿರುವ ಪ್ರಜಾತಂತ್ರದ ಮೌಲ್ಯಗಳಿಗೆ ಸಾಣೆಹಿಡಿಯಬೇಕು. ಚುನಾವಣಾ ಸಮಯದಲ್ಲಿ ತಾನು ಹಣ–ಹೆಂಡ–ಜಾತಿ–ಸೀರೆ–ತಾಳಿ–ಟಿವಿ–ಅಕ್ಕಿ ಮುಂತಾದ ತಾತ್ಕಾಲಿಕ ಮೌಲ್ಯದ ವಸ್ತುಗಳ ಆಮಿಷಕ್ಕೆ ಒಳಗಾಗದಂತೆ ಜಾಗೃತವಾಗಿರಬೇಕು. ಉಮೇದುವಾರರಲ್ಲಿ ಯಾರು ಹೆಚ್ಚು ಯೋಗ್ಯರು, ನೀತಿವಂತರು ಎಂದು ತನಗನಿಸುವುದೋ ಅಂಥವರಿಗೇ ತನ್ನ ಆತ್ಮಸಾಕ್ಷಿಯಿಂದ ಮತನೀಡಬೇಕು. ಇತ್ತೀಚಿನ ರಾಜಕಾರಣದಲ್ಲಿ ಯಾರು ನೀತಿಗೆಟ್ಟವರಾಗಿ ವರ್ತಿಸಿದ್ದಾರೋ ಅಂಥವರಿಗೆ ಮತವನ್ನು ಕೊಡಲೇ ಕೂಡದು.

ರಾಜ್ಯದ ವಿದ್ಯಾವಂತರು, ಬುದ್ಧಿಜೀವಿಗಳು, ಸಾಹಿತಿಗಳು, ಕಲಾಕಾರರು, ರೈತರು ಎಲ್ಲರೂ ಒಳ್ಳೆಯ ಉಮೇದುವಾರರ ಪರವಾಗಿ ಪ್ರಚಾರ ಮಾಡಬೇಕು. ಮತದಾನ ನೂರಕ್ಕೆ ಎಂಭತ್ತಕ್ಕಿಂತ ಕಡಿಮೆ ಆಗದಂತೆ ನೋಡಿಕೊಳ್ಳಬೇಕು.
ಚುನಾವಣೆ ನೀತಿಸಂಹಿತವಾಗಿ ನಡೆಯುವಂತೆ ಚುನಾವಣಾ ಆಯೋಗ ಕಣ್ಗಾವಲಿನಂತೆ ಕೆಲಸಮಾಡುತ್ತದೆ. ಜಾಗೃತ ಮತದಾರರು ಚುನಾವಣಾ ಆಯೋಗದ ಜೊತೆಗೆ ಸಂಪೂರ್ಣವಾಗಿ ಸಹಕರಿಸಬೇಕು. ಕಾನೂನು ಮೀರಿ ತೆರೆಮರೆಯಲ್ಲಿ ನಡೆಯುವ ಕೃತ್ಯಗಳನ್ನು, ನಡೆಸುವ ಉಮೇದುವಾರರನ್ನು ಚುನಾವಣಾ ಆಯೋಗಕ್ಕೆ ತಿಳಿಸಬೇಕು. ಶಾಸನಬದ್ಧವಾದ ಚುನಾವಣಾ ಆಯೋಗ ಮತ್ತು ಎಚ್ಚೆತ್ತ ಮತದಾರ ಸಮೂಹಗಳ ಪ್ರಖರ ಬೆಳಕಿನಲ್ಲಿ ಚುನಾವಣೆ ಬಹುಮಟ್ಟಿಗೆ ಪ್ರಜಾತಂತ್ರಾಧಾರಿತವಾಗಿ ನಡೆಯುವುದು. ಕರ್ನಾಟಕದ ರಾಜಕಾರಣದ ಕಾವೇರಿ, ತಿಳಿಯಾಗಿ, ಸಿಹಿಯಾಗಿ ಹರಿಯುವುದು.

* * *

ವೇದದಲ್ಲಿಯ ಮುತ್ತುಗಳು

– ವಿನೋಬಾ

ದುಡಿಮೆಯ ಕ್ಷೇತ್ರದಲ್ಲಿ ಬ್ರಹ್ಮವಿದ್ಯೆ ಸಿದ್ಧವಾಗಬೇಕು; ಧರ್ಮದಲ್ಲಿ ಕೇವಲ ಪರೋಪಕಾರವಿಲ್ಲ, ಸೋಪಕಾರ ಕೂಡ ಇದೆ. -ವಿನೋಬಾ

ಪಶ್ಯಂತೊ ಅಂಧಂ ದುರಿತಾದರಕ್ಷನ್

ಕಣ್ಣಿರಿರುವವರು ಕುರುಡನನ್ನು ತಪ್ಪು ದಾರಿಯಿಂದ ರಕ್ಷಿಸುತ್ತಾರೆ.

ಅಸ್ಮಾಕಂ ಬ್ರಹ್ಮ ಪೃತನಾಸು ಸಹ್ಯಾಃ

ನಮ್ಮ ಬ್ರಹ್ಮ ಸೈನಿಕರ ಮಧ್ಯೆ ಗೆಲ್ಲಲಿ. ಉಪನಿಷತ್‌ಗಳ ಬ್ರಹ್ಮವಿದ್ಯೆ ಅರಣ್ಯದಲ್ಲಿ ರಚನೆಯಾಯಿತು. ನಂತರ ರಣಾಂಗಣದಲ್ಲಿ ಗೀತೆಯ ರಚನೆಯಾಯಿತು. ಯುದ್ಧದಲ್ಲಿ ಕೂಡ ಸಮತ್ವ ಎಂಬುದು ಗೀತೆಯಲ್ಲಿದೆ. ಈಗ ನನ್ನ ಹೊಸ ವಿಚಾರವೇನೆಂದರೆ ಶ್ರಮಿಕನ ಕ್ಷೇತ್ರದಲ್ಲಿ ಬ್ರಹ್ಮವಿದ್ಯೆ ಸಿದ್ಧವಾಗಬೇಕೆಂಬುದು.

* * *

ಯೇ ಅರ್ವಾಂಚಸ್ತಾ ಉ ಪರಾಚ ಆಹುಃ
ಯೇ ಪರಾಂಚಸ್ತಾ ಊ ಅರ್ವಾಚ ಆಹುಃ

ಸೃಷ್ಟಿ ಚಕ್ರದಲ್ಲಿ ಯಾವ ಗೋಲ ಮೇಲೆ ಮತ್ತು ಯಾವುದು ಕೆಳಗೆ ಎಂದು ಹೇಳಲು ಸಾಧ್ಯ? ಮಂಗಳ ಮೇಲಿದೆ ಎಂದು ಹೇಳುತ್ತೇವೆ. ಮಂಗಳದಲ್ಲಿಯ ಜನ ಪ್ರಥ್ವಿ ಮೇಲೆ ಇದೆ ಎಂದು ಹೇಳುತ್ತಾರೆ. ಯಾವುದು ಶ್ರೇಷ್ಠವೋ ಅದೇ ಕನಿಷ್ಠ ಮತ್ತು ಯಾವುದು ಕನಿಷ್ಠವೋ ಅದೇ ಶ್ರೇಷ್ಠ.

ದ್ವಾ ಸುಪರ್ಣಾ ಸಯುಜಾ ಸಖಾಯಾ ಸಮಾನಂ ವೃಕ್ಷಂ ಪರಿ ಷಸ್ವಜಾತೆ
ತಯೋರನ್ಯಾಃ ಪಿಪಲಂ ಸ್ವಾಧತ್ತಿ ಅನಶ್ನನ್ಯೊ ಅಭಿ ಚಾಕಶೀತಿ

ಯಾವಾಗಲೂ ಹತ್ತಿರವಿರುವ ಎರಡು ಪಕ್ಷಿ ಮಿತ್ರರು ಒಂದೇ ಮರದ ಆಶ್ರಯದಲ್ಲಿ ಇರುತ್ತವೆ. ಆ ಎರಡರಲ್ಲಿ ಒಂದು ಪಕ್ಷಿ ಮಧುರವಾದ ಹಣ್ಣನ್ನು ತಿನ್ನುತ್ತದೆ. ಮತ್ತು ಎರಡನೆಯದು ಏನನ್ನೂ ತಿನ್ನದೇ ತಟಸ್ಥ ಭಾವದಿಂದ ನೋಡುತ್ತಾಯಿರುತ್ತದೆ.

ಬಹು ಪ್ರಜಾ ನಿಕೃರ್ತಿಮಾ ವಿವೇಶ

ಯಾರಿಗೆ ಬಹು ಪ್ರಜೆಗಳಿದ್ದಾರೊ ಅವನು ನರಕಕ್ಕೆ ಹೋಗುತ್ತಾನೆ. ಬಹು ಎಂದರೇನು? ವ್ಯಾಕರಣದಲ್ಲಿ ದ್ವಿವಚನದ ನಂತರ ಬಹುವಚನ ಬರುತ್ತದೆ. ಅರ್ಥಾತ್ ಬಹು ಎಂದರೆ ಮೂರು ಅಂದರೆ ವೇದವು ಎರಡೂ ಸಂತಾನಗಳನ್ನು ಮಂಜೂರು

ಮಾಡಿತು. ಮರ್ಯಾದಾ ಪುರುಷೋತ್ತಮ ರಾಮಚಂದ್ರ ಈ ವೇದಾಯಜ್ಞೆಯ ಪಾಲನೆ ಮಾಡಿದ್ದ.

ಯಜ್ಞನೇನ ಯಜ್ಞ ಮಯ ಜಂತ ದೇವಾಃ ತಾನಿ ಧರ್ಮಾಣಿ ಪ್ರಥಮಾನ್ಯಾಸನ್

ದೇವತೆಗಳು ಯಜ್ಞವನ್ನು ನಿರ್ಮಿಸಿದರು ಮತ್ತು ಜನರಿಗೆ ಪ್ರಥಮ ಧರ್ಮವನ್ನು ಕಲಿಸಿದರು. ಒಬ್ಬನಿಗೋಸ್ಕರ ಕರ್ತವ್ಯ ಎರಡನೆಯವನಿಗೋಸ್ಕರ ತ್ಯಾಗವನ್ನು ಕಲಿಸಿತು. ಇದರ ಹೆಸರೇ 'ಯಜ್ಞ'. ಎಳ್ಳು-ಅಕ್ಕಿ ಮತ್ತು ತುಪ್ಪ ಇವುಗಳನ್ನು ಉರಿಸುವುದು ಯಜ್ಞವಲ್ಲ. ಬದಲಿಗೆ ಪರೋಪಕಾರವೇ ಯಜ್ಞ, ಜ್ಞಾನದೇವನ ಪ್ರಕಾರ ತನ್ನ ವಿಷಯದಲ್ಲಿ ಮತ್ತು ಎರಡನೆಯವರ ವಿಷಯದಲ್ಲಿ ಯಾವೊಂದೂ ಉಪಕಾರ ಮಾಡಬೇಕಾಗಿದೆಯೋ ಅದೇ ಯಜ್ಞ. ಧರ್ಮದಲ್ಲಿ ಕೇವಲ ಪರೋಪಕಾರವಿಲ್ಲ. ಸೋಪಕಾರ ಕೂಡ ಇದೆ. ಅಂದರೆ ತನ್ನ ಹಾಗೂ ಎರಡನೆಯವರ ಒಳಿತು ಮಾಡಬೇಕು. ಈ ರೀತಿ ಇಬ್ಬರ ಒಳ್ಳೆಯದಕ್ಕಾಗಿ ತನ್ನನ್ನು ತೇಯುವುದೇ ಯಜ್ಞ, ಈ ಯಜ್ಞ ಪ್ರಥಮ ಧರ್ಮವೆಂದು ವೇದ ಹೇಳಿದೆ.

* * *

ಅಗ್ನೆ ನಯ ಸುಪಥಾರಾಯೆ ಅಸ್ಮಾನ್ ವಿಶ್ವಾನಿ ದೇವ ವಯುನಾನಿ ವಿದ್ವಾನ್
ಯುಯೋಧ್ಯಾಸ್ಮಜುಃ ರಾಣಮೇನಃ ಭೂಯಿಷ್ಠಾಂ ತೆ ನಮ ಉಕ್ತಿಂ ವಿಧೇಮ

ಹೇ ಮಾರ್ಗದರ್ಶಕ ದೇದೀಪ್ಯಮಾನ್ ಪ್ರಭೊ ವಿಶ್ವದಲ್ಲಿ ರಚಿತವಾಗಿರುವ ಎಲ್ಲ ತತ್ವಗಳನ್ನು ನೀನು ತಿಳಿದಿದ್ದೀಯೆ. ನನ್ನನ್ನು ಸರಳ ಮಾರ್ಗದಿಂದ ಆ ಪರಮ ಆನಂದದೆಡೆಗೆ ಕರೆದುಕೊಂಡು ಹೋಗು. ವಕ್ರವಾಗಿ ಕರೆದುಕೊಂಡು ಹೋಗುವ ಪಾಪವನ್ನು ನೀನು ನನ್ನಿಂದ ದೂರ ಮಾಡು. ಈ ಕುರಿತಾಗಿ ನಾನು ನಿನ್ನನ್ನು ಪುನಃ ಪುನಃ ನಮ್ರವಾಣಿಯಿಂದ ವಿನಂತಿಸುತ್ತೇನೆ.

* * *

ಪ್ರುಶನ್ಯಾಃ ಪತರಂ ಚಿತಯೆಂತ ಮಕ್ಷಿಭಿಃ ಪಾಥೊ ನ
ಪಾಯುಂ ಜನಸೀ ಉಭೆ ಅನು

ವರ್ಡ್ಸ್‌ವರ್ತ್ ಕವಿ ಎರಡು ಪ್ರಕಾರದ ಮಹಾಪುರುಷರ ವರ್ಣನೆ ಮಾಡಿದ್ದಾನೆ. ಒಂದು ಪ್ರಕಾರದವರು ಆಕಾಶದಲ್ಲಿ ಸಂತೋಷವಾಗಿ ಹಾರುತ್ತಿರುತ್ತಾರೆ. ಇನ್ನು ಎರಡನೇ ಪ್ರಕಾರದವರು ಆಕಾಶದಲ್ಲಿ ಹಾರುತ್ತಿದ್ದಾಗ್ಯೂ ಗೂಡಿನ ಚಿಂತೆಯನ್ನು ಬಿಡುವುದಿಲ್ಲ. ಇದರಲ್ಲಿ ಎರಡನೇ ಪ್ರಕಾರದ ಮಹಾ ಪುರುಷರ ವರ್ಣನೆ ಬಂದಿದೆ. ಪತರ್ ಎಂದರೆ ಪಕ್ಷಿ. ಮೇಘ ಮಾಲೆಯಲ್ಲಿ ವಿಹರಿಸುವ ಪಕ್ಷಿ ಸ್ವರ್ಗ ಮತ್ತು ಪ್ರಥ್ವಿ ಈ ಎರಡು ಲೋಕಗಳ ಕಡೆಗೆ ಗಮನ ಹರಿಸುತ್ತದೆ. ಏಕೆಂದರೆ ಪೃಥ್ವಿಯಲ್ಲಿ ಪರಿವಾರವಿದೆ ಮತ್ತು ಸ್ವರ್ಗದಲ್ಲಿ ಪರಮಾತ್ಮನಿದ್ದಾನೆ ಅದರ ವೃತ್ತಿ ಸೇತುವೆಯಂತಿರುತ್ತದೆ. ಸೇತುವೆ ಎರಡೂ ತೀರಗಳೊಂದಿಗೆ ಅಂಟಿಕೊಂಡಿರುತ್ತದೆ. ಕೆಲ ಜ್ಞಾನಿಗಳು ಒಂದೇ ತೀರದ ಮೇಲೆ ಇರುತ್ತಾ ಸಂಪೂರ್ಣವಾಗಿ ಅನಾಸಕ್ತ, ಸಂಸಾರಾಸಪ್ರಷ್ಠ! ಆದರೆ ಸೇತುವೆಯ ಒಂದು ಕಾಲು ಒಂದು ಕಡೆಗೆ ಇದ್ದರೆ ಇನ್ನೊಂದು ಕಾಲು ಎರಡನೆಯ ಕಡೆಗೆ ಇರುತ್ತದೆ. ಸೇತುವೆ ಎರಡು ತೀರಗಳ ಧ್ಯಾನ ಮಾಡುತ್ತಾ ಎರಡು ತುದಿಗಳನ್ನು ಸ್ಪರ್ಶಿಸುತ್ತದೆ.

ಸ ನೊ ವೃಷ್ಟಿಂ ದಿವಸ್ಪರಿ ಸನೊ ವಾಜಮನರ್ವಾಣಮ್ ಸ ನಃ ಸಸ್ತ್ರೀ ನೀ ರಿಷಃ

ನಮ್ಮ ಮೇಲೆ ಆಕಾಶದಿಂದ ಬಹಳಷ್ಟು ಮಳೆಯಾಗಲೀ, ಅದು ನಮ್ಮ ಮೇಲಿನ ಭಗವಂತನ ಕೃಪೆ. ನಮ್ಮ ಗತಿಯಲ್ಲಿ ಯಾವುದೇ ಅಡ್ಡಿ ಬರದಿರಲಿ. ನಮ್ಮ ಗತಿ, ನಮ್ಮ ವೇಗ ಅಕುಂಠಿತವಾಗದಿರಲೆಂಬುದು ಋಷಿಗಳು ಹೇಳುವ ಎರಡನೆಯ ವಿಷಯ. ಮೂರನೆ ಪ್ರಾರ್ಥನೆ ಏನೆಂದರೆ ಮಳೆಯಲ್ಲಿ ಸಾವಿರಾರು ಹನಿಗಳಿವೆ. ಅವುಗಳಿಂದ ಪರಮೇಶ್ವರನ ಕೈಗಳ ಸ್ಪರ್ಶವೆಂದೇ ತಿಳಿ. ಆದ್ದರಿಂದ ನಮ್ಮ ಇಚ್ಛಾಶಕ್ತಿ ಸಹಸ್ರಗುಣಿತವಾಗಿರಬೇಕು.

ತ್ವಂ ನೊ ಅಸಿ ಭಾರತ

ಅಗ್ನಿಯ ಸಂಶೋಧನೆ ಭಾರತದಲ್ಲೇ ಆಗಿತ್ತು. ಅಗ್ನಿಗೆ ಹೇ ಭಾರತ! ಎಂಬುದಾಗಿ ಇಲ್ಲಿ ಹೇಳಲಾಗಿದೆ. ವೇದದಲ್ಲಿ ಭಾರತ ಶಬ್ದ ಬರುತ್ತದೆ. ಆದರೆ ಅದು ದೇಶವಾಚಕವಲ್ಲ, ಅಗ್ನಿವಾಚಕ.

ಯಂಸ್ಮಾ ಪೃಛಂತಿ ಕುಹ ಸೇತಿ ಘೋರಂ ಉತೇಮಾಹುರ್ ನೈಷೊ ಅಸ್ತೀ ತ್ಯೇನಂ
ಸೊ ಅರ್ಯಃ ಪುಷ್ಟ್ಯಾರ್ವಿಜ ಇವಾ ಮಿನಾತಿ ಶ್ರವಸ್ಮೈ ದತ್ತ ಸ ಜನಾಸ ಇಂದ್ರಃ

ಈ ಘೋರ ಪರಮಾತ್ಮ ಎಲ್ಲಿದ್ದಾನೆ ಎಂದು ಕೆಲವರು ಕೇಳುತ್ತಾರೆ. ಅವರು ಸಂಶಯವಾದೀ ಜನ. ಕೆಲವರು ಅವನಿಲ್ಲವೆಂದೇ ಹೇಳುತ್ತಾರೆ. ಅಂದರೆ ಅವರು ನಾಸ್ತಿಕರು. ಆ ಘೋರ ಪರಮೇಶ್ವರನ ವಿಷಯದಲ್ಲಿ ಕೆಲವರು ಸಂಶಯ ಪಡುತ್ತಾರೆ. ಅವನೆಲ್ಲಿದ್ದಾನೆ ಎಂದು ಏಕೆ ಕೇಳುತ್ತೀರೆಂಬುದಾಗಿ ಕೆಲವರು ಹೇಳುತ್ತಾರೆ. ಈ ಎರಡೂ ಪಂಥಗಳು ವೇದದಲ್ಲಿ ನೋಡಲು ಸಿಗುತ್ತವೆ. ಉಪನಿಷತ್ತಿನಲ್ಲಿ ಕೂಡ ಅದರ ಚರ್ಚೆ ಇದೆ. ಈಶ್ವರ ಇದ್ದಾನೆಂದು ಕೆಲವರು ಹೇಳುತ್ತಾರೆ. ಇನ್ನೂ ಕೆಲವರು ಇಲ್ಲವೆಂದು ಹೇಳುತ್ತಾರೆ. ***ಅಸ್ತಿತೇಕೇ ನಾಯ ಮಸ್ತೀತಿ ಚೈಕೆ (ಕಠ)*** ಅದು ದೊಡ್ಡ ದೊಡ್ಡವರ ಸಮರ್ಥನೆಯನ್ನು ಸಮಾಪ್ತ ಮಾಡುತ್ತದೆ. ಆದ್ದರಿಂದ ಶ್ರದ್ಧೆಯನ್ನಿಡು. ಅವನಿದ್ದಾನೆ. ಅವನು ಇಂದ್ರ, ಆದ್ದರಿಂದ ಅವನಿದ್ದಾನೊ ಇಲ್ಲವೊ ಎಂಬ ಬಗ್ಗೆ ಚಿಂತಿಸುವ ಅಗತ್ಯವಿಲ್ಲ. ಅವನೇ ತನ್ನ ಅಸ್ತಿತ್ವವನ್ನು ಸಿದ್ಧಮಾಡುತ್ತಾನೆ.

* * *

ಆಧ್ಯಾತ್ಮದ ಮೇಲೆ ಕ್ಷ-ಕಿರಣ

– ಯು.ಆರ್. ಅನಂತಮೂರ್ತಿ

ವಿವೇಕಾನಂದರ ಒಂದು ಮಾತು ನೆನಪಾಗುತ್ತಿದೆ. ಅವರು ಕಾಶ್ಮೀರದಲ್ಲಿ 'ಪರಕೀಯರ ಆಕ್ರಮಣದಲ್ಲಿ ನಿನ್ನನ್ನು ನಾನು ಕಾಪಾಡಲಾರದೆ ಹೋದೆನಲ್ಲಾ..?' ಎಂದು ಭಗವತಿಯೆದುರು ಆರ್ತವಾಗಿ ದುಃಖಿಸಿದಾಗ ಭಗವತಿ ಅವರಿಗೆ ಹೀಗೆ ಹೇಳಿದಂತೆ ಕೇಳಿಸಿತಂತೆ 'ನೀನು ನನ್ನನ್ನು ಪೊರೆಯಬೇಕಾದ್ದೋ... ಅಥವಾ ನಾನು ನಿನ್ನನ್ನು ಪೊರೆಯಬೇಕಾದ್ದೋ..?'

ಇಂಗ್ಲಿಷ್‌ನಲ್ಲಿ ನಾವು ಉಪಯೋಗಿಸುವ 'ರಿಲಿಜನ್' ಎಂಬ ಶಬ್ದಕ್ಕೆ ಸರಿಯಾದ ಪರ್ಯಾಯ ಪದ ನಮ್ಮ ಭಾಷೆಯಲ್ಲಿ ಇಲ್ಲ. ಇಸ್ಲಾಂ ಮತ್ತು ಕ್ರೈಸ್ತ ಮತಗಳ ವರ್ಣನೆಗೆ ರಿಲಿಜನ್ ಶಬ್ದ ಸಲ್ಲುವಷ್ಟು ಭಾರತದ ಮತೀಯ ಆಚರಣೆಗಳಿಗೆ ಸಲ್ಲುವುದಿಲ್ಲ. ಧರ್ಮ ಎನ್ನುವುದು ಬಹಳ ವಿಶಾಲವಾದ ಅರ್ಥವುಳ್ಳದ್ದು. ಅದನ್ನು 'ಇರುವ ಸ್ಥಿತಿ'ಯನ್ನು ವಿವರಿಸಲು ಬಳಸಬಹುದು. ಸ್ವಧರ್ಮ, ಪರಧರ್ಮ, ರಾಜಧರ್ಮ ಇಂಥ ಪದಗಳು ಧ್ವನಿಸುವುದು ಇರುವ ಸ್ಥಿತಿಯನ್ನು. ರಿಲಿಜನ್ ಹಾಗಲ್ಲ. ಇದು ಪ್ರಯತ್ನಪೂರ್ವಕವಾಗಿ ತಲುಪಬೇಕಾದ ಸ್ಥಿತಿ. ಪ್ರಾಯಶಃ ಅಧ್ಯಾತ್ಮ ಎನ್ನುವ ಶಬ್ದವನ್ನು ಭಾರತದಲ್ಲಿ ಆಗಬೇಕಾದ್ದಕ್ಕೆ ಹಂಬಲಿಸುವ ಸ್ಥಿತಿಯನ್ನು ವಿವರಿಸಲು ಬಳಸಿದ್ದಾರೆ. ಈ ಶಬ್ದ ಕೂಡಾ ರಿಲಿಜನ್‌ನ ಅರ್ಥವನ್ನು ಧ್ವನಿಸುವುದಿಲ್ಲ.

ಮುಖ್ಯವಾಗಿ ನನಗೆ ಹೇಳಬೇಕಾದ್ದು ಇದು: ಭಾರತದಲ್ಲಿ ಅಧ್ಯಾತ್ಮವನ್ನು ಬಹಳ ಗಾಢವಾಗಿ ವಿಮರ್ಶಿಸುವ ಒಂದು ಸಂಪ್ರದಾಯವಿತ್ತು. ಮೂವರು ಆಚಾರ್ಯರೂ ಒಬ್ಬರು ಹೇಳಿದ್ದನ್ನು ಇನ್ನೊಬ್ಬರು ಒಪ್ಪಲಿಲ್ಲ. ಬುದ್ಧನಂತೂ ವೇದಗಳನ್ನೇ ಒಪ್ಪಲಿಲ್ಲ. ಜೈನರೂ ಹಾಗೆಯೇ. ಅಲ್ಲದೆ ನಾವು ಆಧ್ಯಾತ್ಮಿಕ ಎಂದು ತಿಳಿದಿರುವ ಅವಸ್ಥೆಯನ್ನು ವಿಮರ್ಶಾತ್ಮಕವಾಗಿ ಸಂಶಯದಿಂದ ನೋಡುವುದರ ಒಂದು ದೊಡ್ಡ ಚರಿತ್ರೆಯೇ ಭಾರತದಲ್ಲಿತ್ತು.

ಕನ್ನಡದಲ್ಲಿ ಈ ಬಗೆಯ ವಿಮರ್ಶೆಗೆ ಪ್ರಸಿದ್ಧನಾದವನು ಅಲ್ಲಮ. ಬಸವಣ್ಣನ ಆಧ್ಯಾತ್ಮಿಕ ಗರ್ವವನ್ನು ಟೀಕಿಸಲು ಅವನ ಹಿತ್ತಿಲಲ್ಲೇ ಎಂಜಲು ಹುಡುಕುತ್ತಿದ್ದವನ ಜೊತೆ ಕುಳಿತು ಬಸವಣ್ಣನಿಗಿಂತ ಎಂಜಲು ಹುಡುಕುವವನೇ ಶ್ರೇಷ್ಠ ಎನ್ನುವ ಮೂಲಕ ಬಸವಣ್ಣನನ್ನು 'ನಿನ್ನ ಭಕ್ತಿ ತೋರಿಕೆಯದು' ಎಂದು ಅಣಕಿಸಿದ. ಅಜಗಣ್ಣ ಎಂಬ ಸೋದರನನ್ನು ಕಳೆದುಕೊಂಡ ಮುಕ್ತಾಯಕ್ಕನ ದುಃಖವನ್ನು ಅಣಕಿಸಿದ. ಮುಕ್ತಾಯಕ್ಕ ಅಲ್ಲಮನನ್ನು ಅಷ್ಟೇ ಕಟುವಾಗಿ ವಿಮರ್ಶಿಸಿದಳು. ಅಲ್ಲಮ ತನ್ನ ಮಾತಿಗೆ ತನ್ನ ಶಬ್ದ ಸೂತಕ ಇಲ್ಲವೆಂದು ವಾದಿಸಿದ.

ಈ ಶಬ್ದ ಸೂತಕ ಎನ್ನುವುದು ಗಾಢವಾದ ಅರ್ಥಗಳನ್ನು ಪಡೆದ ಶಬ್ದ.

ಇಂಗ್ಲಿಷ್‌ನ ಸಂದರ್ಭವನ್ನು ಉಲ್ಲೇಖಿಸುವುದಾದರೆ 'ನಮ್ಮ ಕಾಲದಲ್ಲಿ ಸಿನ್ಸಿರಿಟಿ ಎನ್ನುವುದು ಸುಳ್ಳಾಗಿ ನಂಬಿದ್ದು ಆಗಿರಬಹುದು. ಆದರೆ ಅಥೆಂಟಿಸಿಟಿ ಎನ್ನುವುದೇ ಬೇರೆ' ಎನ್ನುವ ವಾದವಿದೆ. ಇದು ಪಾಶ್ಚಿಮಾತ್ಯರಲ್ಲಿ ಬೆಳೆದದ್ದು ರೆನೆಸಾನ್ಸ್‌ನ ನಂತರ. ಆದರೆ ಭಾರತದಲ್ಲಿ ಎಂಟುನೂರು ವರ್ಷಗಳ ಹಿಂದೆಯೇ 'ಅಂದುಕೊಂಡಿರುವುದು ಸಾಲದು, ಆಗಿರುವುದು ಅಗತ್ಯ' ಎನ್ನುವ ಕಲ್ಪನೆ ಹುಟ್ಟಿಕೊಂಡಿತ್ತು. ಅಲ್ಲಮನಿಗಿಂತಲೂ ಹಿಂದೆ ಬುದ್ಧ ಮಹಾಗುರು ಎಲ್ಲ ಶ್ರುತಿಗಳನ್ನೂ ಪ್ರಶ್ನಿಸಿದ್ದ. ಜೊತೆಗೆ ಪೂರ್ವಿಕರು ಸ್ಮೃತಿ ಎಂದು ತಿಳಿದಿದ್ದನ್ನು ಬದಲಾಯಿಸಿದ.

ನಾವು ಅಧ್ಯಾತ್ಮ ಎಂದು ಏನನ್ನು ತಿಳಿಯುತ್ತೇವೆಯೋ ಅದು ಯಾವತ್ತೂ ಸರ್ವ ಸಮ್ಮತವಾಗಿ ಇದ್ದುದಿಲ್ಲ ಎಂಬುದೇ ಅದರ ಆಕರ್ಷಣೆ. ರಾಮಕೃಷ್ಣ ಪರಮಹಂಸರು ನೀರಿನ ಮೇಲೆ ನಡೆಯಬಲ್ಲ ಯೋಗನಿರತ ತಾನೆಂದು ಜಂಬ ಕೊಚ್ಚಿಕೊಂಡವನನ್ನು ಎದುರಾಗಿ 'ನಾನು ಒಂದೆರಡು ಆಣೆ ಕೊಟ್ಟು ದೋಣಿಯಲ್ಲಿ ಸಾಗಬಹುದಾದ ನದಿಯನ್ನು ಯೋಗಾಭ್ಯಾಸದಿಂದ ನಡೆದು ದಾಟುವ ನಿನ್ನ ಮೂರ್ಖತನಕ್ಕೆ ನಗುಬರುತ್ತದೆ' ಎಂದು ಸುಲಭವಾಗಿ ದೋಣಿಯಲ್ಲಿ ದಾಟಿ ಹೋಗಿ ಅವನನ್ನು ಅಣಕಿಸುತ್ತಾರೆ.

ಆರ್ಯ ಸಮಾಜದ ಮಹರ್ಷಿ ದಯಾನಂದ ಸರಸ್ವತಿಯವರನ್ನು ಕಂಡು ಮಾತನಾಡಿ ಬಂದ ಪರಮಹಂಸರು 'ಈತನ ಅಧ್ಯಾತ್ಮ ಗರ್ವ ಮೂಲವಾದ್ದು' ಎನ್ನುತ್ತಾರೆ. ಆ ಕಾಲದ ಬಹುಶ್ರೇಷ್ಠ ಸಂಸ್ಕೃತ ಪಂಡಿತರಾದ ಈಶ್ವರಚಂದ್ರ ವಿದ್ಯಾಸಾಗರರನ್ನು ನೋಡಲು ಹೋದ ಪರಮಹಂಸರು ಗೇಟು ದಾಟುವ ಹೊತ್ತಿಗೆ 'ನನ್ನ ಅಂಗಿಗೆ ಗುಂಡಿಯಿಲ್ಲ...ಇಷ್ಟು ದೊಡ್ಡ ಮನುಷ್ಯರನ್ನು ಹೀಗೆ ನೋಡುವುದು ಸರಿಯೇ...?' ಎಂದು ಅಳುಕುತ್ತಾರೆ. ಮನೆಯ ಒಳಗೆ ಬೆಂಚಿನ ಮೇಲೆ ವಿನೀತನಾಗಿ ಕಾದು ಕುಳಿತು ವಿದ್ಯಾಸಾಗರರನ್ನು ಭೇಟಿಯಾಗುತ್ತಾರೆ. ಬಹುವಚನದಲ್ಲಿ ಮಾತಿಗೆ ತೊಡಗಿ ತಾನೇ ಪರವಶರಾಗಿ ಏಕವಚನದಲ್ಲಿ 'ನೀನೊಂದು ಉಪ್ಪಿನ ಬೊಂಬೆ. ಸಮುದ್ರದ ಆಳವನ್ನು ತಿಳಿಯಲು ನೀನು ಮುಳುಗಿದ್ದೀಯ. ಬಹಳ ತಿಳಿಯುವವರೆಗೆ ನೀನು ಉಳಿದಿರುತ್ತೀಯಾ...? ದೇವರನ್ನೇ ಪಡೆದು ಪರಮಸುಖ ಅನುಭವಿಸುವುದರ ಬದಲು ಶಾಲೆಗಳನ್ನು ಕಟ್ಟಿಸುತ್ತಾ ಸಮಾಜ ಸೇವೆಯಲ್ಲಿ ತೊಡಗಿರುವ ನೀನು ಮೂರ್ಖನಲ್ಲವೇ' ಎಂದು ಹಂಗಿಸುತ್ತಾರೆ. ಇದನ್ನು ಕೇಳಿಸಿಕೊಂಡು ರಾಮಕೃಷ್ಣರ ಮೂರ್ಖ ಶಿಷ್ಯರು ಆಮೇಲಿನಿಂದ ತಮ್ಮ ಗುರುಗಳ ಎದುರು ವಿದ್ಯಾಸಾಗರರೇನು ಮಹಾ ವ್ಯಕ್ತಿಯೇ? ಎಂದು ಟೀಕಿಸಿದಾಗ 'ಹಾಗೆಲ್ಲಾ ಹೇಳಕೂಡದು. ಕಷ್ಟದಲ್ಲಿ ನೆರವಾಗುವ ಈ ಕರ್ಮ ಜೀವಿ ಬಹುದೊಡ್ಡ ವ್ಯಕ್ತಿ' ಎಂದು ರಾಮಕೃಷ್ಣರು ತಾನು ಹೇಳಿದ್ದಕ್ಕೆ ವಿರುದ್ಧವಾದ ನಿಲುವು ತಳೆಯುತ್ತಾರೆ.

ಅಲ್ಲಮ ಮತ್ತು ಸಿದ್ಧರಾಮ ಭೇಟಿಯಾದಾಗಲೂ ಈ ಬಗೆಯದೇ ಒಂದು ವಾಗ್ವಾದ ನಡೆಯುತ್ತದೆ. ಕೆರೆ-ಸೇತುವೆಗಳನ್ನು ಕಟ್ಟಿಸುವ ಸಿದ್ಧರಾಮನನ್ನು ಅಲ್ಲಮ 'ವಡ್ಡ ಸಿದ್ದರಾಮ' ಎಂದು ಹಳಿದು 'ದೈವಾನುಭವಕ್ಕೆ ಪ್ರಯತ್ನಿಸದೆ ನೀನು

ಲೌಕಿಕನಾಗಿಬಿಟ್ಟೆಯಲ್ಲಾ' ಎಂದು ಮರುಗುತ್ತಾನೆ. ಆದರೆ ಲಿಂಗಧಾರಣೆ ಮಾಡದೆಯೂ ನೀನು ದೊಡ್ಡ ಸಂತ ಎಂದು ಅವನನ್ನು ಹೊಗಳಿ ನಿರ್ಗಮಿಸುತ್ತಾನೆ. ಇಂಥ ಎಲ್ಲ ಕಡೆಯಲ್ಲೂ ನಾವು ಕಾಣುವುದು ಅಧ್ಯಾತ್ಮ ಎನ್ನುವುದು ಸದಾ ಪರಿಶೋಧನೆಗೆ ಗುರಿಯಾಗಬೇಕೆಂಬ ನಮ್ಮ ಪರಂಪರೆ.

ತ್ರಿಕರಣಪೂರ್ವಕವಾಗಿ– ಅಂದರೆ ಕಾಯಾ ವಾಚಾ ಮನಸಾ ಮೂರರಲ್ಲೂ ಶುದ್ಧವಾಗಿರಬೇಕೆಂಬ ಹುಡುಕಾಟವೇ ಅಧ್ಯಾತ್ಮದ ಇಂಥ ನಿಷ್ಠುರ ವಿಮರ್ಶೆಗೆ ಹಿನ್ನೆಲೆ. ಈ ನಿಷ್ಠುರ ವಿಮರ್ಶೆಯಲ್ಲೇ ತನ್ನ ಸತ್ಯವನ್ನು ಹುಡುಕಿಕೊಳ್ಳುವುದು ಕ್ರಿಸ್ತನಲ್ಲೂ ಇದೆ. ಶಿಲುಬೆಯ ಮೇಲಿನ ಯಾತನೆಯಲ್ಲಿ ಕ್ರಿಸ್ತ ದೇವರ ಕರುಣೆಯನ್ನೇ ಪ್ರಶ್ನಿಸುತ್ತಾನೆ. 'ಓ ದೇವರೇ ನೀನು ನನ್ನ ಕೈಬಿಟ್ಟೆಯಾ...?' ಎಂದು ಬೆರಗಿನ ದುಃಖದಲ್ಲಿ ಕೇಳುತ್ತಾನೆ. ಪೈಗಂಬರರು ತಾನು ದೇವದೂತ ಗೇಬ್ರಿಯಲ್‌ನಿಂದ ಕೇಳಿಸಿಕೊಂಡ ಮಾತು ದೇವದೂತನದ್ದೋ ಸೈತಾನನದ್ದೋ ಎಂದು ಮತ್ತೆ ದೇವರನ್ನು ಮೊರೆಯಿಡುತ್ತಾರೆ.

ಅಧ್ಯಾತ್ಮದಲ್ಲಿ ಮಾತ್ರವಲ್ಲ, ಉಳಿದ ಹಲವು ಮಾನವಿಕ ಸೃಜನಕ್ರಿಯೆಗಳಲ್ಲೂ ಈ ತ್ರಿಕರಣ ಶುದ್ಧಿಯ ಕಲ್ಪನೆ ನಮಗೆ ಎದುರಾಗುತ್ತಲೇ ಇರುತ್ತದೆ. ಸಾಹಿತ್ಯ ಕೃತಿಯ ವಿಮರ್ಶೆಯಲ್ಲಿ ಇವತ್ತಿಗೂ ಇದು ಉಳಿದು ಬಂದಿದೆ. ವಿಜ್ಞಾನದಲ್ಲಂತೂ ತಾನು ತಿಳಿದಿದ್ದು ನಿಜವಲ್ಲ ಎಂದು ಹೇಳುವುದಕ್ಕೆ ಅವಕಾಶವಿರುವಂತೆಯೇ ತಾವು ಕಂಡುಕೊಂಡಿದ್ದನ್ನು ವಿಜ್ಞಾನಿಗಳು ಮಂಡಿಸುತ್ತಾರೆ.

ತೋರುವುದು ನಿಜವೇ ಅಥವಾ ಅದರ ಹಿಂದೆ ತೋರದೇ ಇರುವುದೂ ಇದೆಯೋ ಎಂಬ ಸತತವಾದ ಶೋಧನೆಯಲ್ಲಿಯೇ ಮನುಷ್ಯನ ಎಲ್ಲ ವ್ಯಾಪಾರಗಳೂ ನಡೆಯುತ್ತವೆ. ಭಾರತದಲ್ಲಿ ಅಗಾಧವಾಗಿ ಬೆಳೆದ ಅಧ್ಯಾತ್ಮದ ಪರಿಶೋಧನೆಯಲ್ಲಿ ತರ್ಕವೂ ಕೆಲಸ ಮಾಡಿದೆ. ತರ್ಕಾತೀತವಾದ ಹೊಳಹುಗಳೂ ಕೆಲಸ ಮಾಡಿವೆ. ನಮ್ಮ ಹಿಂದಿನ ಶತಮಾನದ ರಮಣ, ಪರಮಹಂಸ, ಗಾಂಧಿ, ಜಿಡ್ಡು ಕೃಷ್ಣಮೂರ್ತಿ ಈ ಎಲ್ಲರೂ 'ಇದಮಿತ್ಥಂ' ಎಂದು ಹೇಳಲು ಬಯಸುತ್ತಲೇ ಅಂಜಿದವರು. ಹುಡುಕುತ್ತಲೇ ಇದ್ದು ಮನುಷ್ಯ ಸಹಜವಾಗಿ ಸತ್ತವರು. ಪರಮಹಂಸರಂತೂ ಗಂಟಲಿನ ಕ್ಯಾನ್ಸರ್‌ನಿಂದ ಬಳಲುವಾಗ ತಾನು ನಂಬಿದ ಕಾಳಿಯನ್ನು 'ನಿನಗೆ ಪರಮಪ್ರಿಯನಾದ ನನ್ನ ಗಂಟಲಿನಲ್ಲೇ ಆಹಾರ ಇಳಿಯದಂತೆ ಮಾಡಿದೆಯಲ್ಲಾ, ಇದು ಸರಿಯೇ ತಾಯಿ?' ಎಂದು ಪ್ರಶ್ನಿಸುತ್ತಾರಂತೆ. ಅದಕ್ಕೆ ಕಾಳಿ 'ನಾನು ಜೀವಿಗಳ ಸಹಸ್ರಾರು ಕಂಠಗಳಿಂದ ನನ್ನ ಆಹಾರವನ್ನು ಪಡೆಯುತ್ತಿರುವಾಗ ನಿನ್ನ ಗಂಟಲೇ ಏನೋ ಒಂದು ಮಹಾ ವಿಶೇಷ ಎಂದು ಯಾಕೆ ತಿಳಿಯುತ್ತೀಯ?' ಎಂದು ಉತ್ತರಿಸುತ್ತಾಳೆ. ಇದರಿಂದ ಪರಮಹಂಸರು ಆನಂದಪರವಶರಾಗಿ ಸಮಾಧಾನಪಟ್ಟರೆಂಬ ಕಥೆಯಿದೆ.

ಇಂಥ ದೊಡ್ಡ ಪರಂಪರೆಯಿಂದ ಬಂದ ಭಾರತದಲ್ಲಿ ಈಗ ಅಧ್ಯಾತ್ಮದ ಗತಿ ಏನಾಗಿದೆ? ನಮ್ಮ ಮಠಾಧೀಶರಲ್ಲಿ ಹಲವರು ಎಂಜಿನಿಯರಿಂಗನ್ನೋ ಮ್ಯಾನೇಜ್‌ಮೆಂಟನ್ನೋ ವೈದ್ಯಶಾಸ್ತ್ರವನ್ನೋ ಮಾರುವ ಅಂಗಡಿಗಳನ್ನು ತೆರೆದಿದ್ದಾರೆ. ಇನ್ನೂ ತೆರೆಯದವರು ಅಂಗಡಿಗಳನ್ನು ತೆರೆಯುವ ಸಿದ್ಧತೆಯಲ್ಲಿದ್ದಾರೆ.

ರಾಜಕಾರಣಿಯೊಬ್ಬ ಚುನಾವಣೆಯಲ್ಲಿ ಗೆಲ್ಲುವುದಕ್ಕಾಗಿಯೇ ಹೋಮ ಹವನಾದಿಗಳನ್ನು ಮಾಡಿಸುವ ಪುರೋಹಿತರೇ ಈಗ ಎಲ್ಲೆಲ್ಲೂ ಕಾಣಿಸುತ್ತಿದ್ದಾರೆ. ಲಂಚ ಸ್ವೀಕರಿಸುವುದು ಲೋಕಾಯುಕ್ತರ ಕಣ್ಣಿಗೆ ಬೀಳದ ಅರ್ಹವಾದ ಜಾಗಗಳನ್ನಾಗಿ ಪರಿವರ್ತಿಸುವ ಉದ್ದೇಶದಿಂದ ತಮ್ಮ ಆಫೀಸುಗಳನ್ನು ಗಣ ಹೋಮದ ಕುಂಡವಾಗಿಸುವವರ ಸಂಖ್ಯೆ ಹೆಚ್ಚಿದೆ. ಇದಕ್ಕೆಲ್ಲಾ ಜೊತೆಯಾಗುವ 'ಗುರು'ಗಳೇ ಬಣ್ಣ ಬಣ್ಣದ ವಸ್ತ್ರಗಳನ್ನು ಧರಿಸಿ ಟೆಲಿವಿಷನ್‌ಗಳಲ್ಲಿ ಮಿಂಚುತ್ತಾ ಹೊಸ ಯಾತ್ರೆಗಳನ್ನು ಪ್ರಾರಂಭಿಸುತ್ತಾರೆ.

ಸಹಸ್ರಾರು ವರ್ಷಗಳ ಕಾಲ ಅಧ್ಯಾತ್ಮ ಸಾಧನೆಯನ್ನೇ ಜೀವದ ಮುಖ್ಯ ಗುರಿಯಾಗಿ ಪಡೆದಿದ್ದ ಭಾರತದಲ್ಲಿ ಅಧ್ಯಾತ್ಮ ಎಂಬುದು ಆಸೆಬುರುಕ ಲೌಕಿಕತೆ, ಅಲ್ಪ ಯಶಸ್ಸಿನ ಸಾಧನೆಗಳ ತಾಂತ್ರಿಕ ಮೇಲಾಟವಾಗಿ ಬಿಟ್ಟಿದೆ. ಮಾಯಮಾಟಗಳ ತಾಮಸ ಕ್ರಿಯೆಗಳಾಗಿವೆ. ಇವತ್ತು ಎಲ್ಲಿ ನೋಡಿದರೂ ನಮ್ಮ ಅಧ್ಯಾತ್ಮಿಕತೆಗೆ ತ್ರಿಕರಣ ಶುದ್ಧಿ ಪ್ರಾಪ್ತವಾಗಿದೆಯೇ ಎಂದು ಪರೀಕ್ಷಿಸುವ ಯಾರನ್ನೂ ನಾವು ಕಾಣುತ್ತಿಲ್ಲ. ಮತೀಯವಾದ ವಿಜೃಂಭಿಸುವ ಕಾಲದಲ್ಲಿ ಮತಧರ್ಮಗಳನ್ನು ಗಂಭೀರವಾಗಿ ಕಂಡು ಚರ್ಚಿಸುವವರೇ ಇಲ್ಲವಾಗಿದ್ದಾರೆ. ಇದು ರಾಜಕೀಯ ಅಧಃಪತನ ಮಾತ್ರವಲ್ಲ, ಆಧ್ಯಾತ್ಮಿಕತೆಯ ಅಧಃಪತನವೂ ಆಗಿದೆ.

ವಿವೇಕಾನಂದರ ಒಂದು ಮಾತು ನೆನಪಾಗುತ್ತಿದೆ. ಅವರು ಕಾಶ್ಮೀರದಲ್ಲಿ 'ಪರಕೀಯರ ಆಕ್ರಮಣದಲ್ಲಿ ನಿನ್ನನ್ನು ನಾನು ಕಾಪಾಡಲಾರದೆ ಹೋದೆನಲ್ಲಾ..?' ಎಂದು ಭಗವತಿಯೆದುರು ಆರ್ತವಾಗಿ ದುಃಖಿಸಿದಾಗ ಭಗವತಿ ಅವರಿಗೆ ಹೀಗೆ ಹೇಳಿದಂತೆ ಕೇಳಿಸಿತಂತೆ 'ನೀನು ನನ್ನನ್ನು ಪೊರೆಯಬೇಕಾದ್ದೋ... ಅಥವಾ ನಾನು ನಿನ್ನನ್ನು ಪೊರೆಯಬೇಕಾದ್ದೋ..?'

ಇವತ್ತು ಹಿಂದೂ ಧರ್ಮವನ್ನು ಕಾಪಾಡಲೆಂದು ಹೊರಟಿರುವ, ವೈಯಕ್ತಿಕವಾಗಿ ನಾನು ಗೌರವಿಸುವ ಪೇಜಾವರ ಶ್ರೀಗಳನ್ನು ವಿವೇಕಾನಂದರ ಮಾತುಗಳನ್ನು ಗಮನಿಸುವಂತೆ ಪ್ರಾರ್ಥಿಸುತ್ತೇನೆ. ಮಾಧ್ವ ಯತಿಗಳಿಗೆ ಇದು ತಿಳಿದದ್ದೇ. ಜಗತ್ತು ಸತ್ಯವಾದದ್ದು. ಮುಕ್ತಿಯೊಂದೇ ನಿಜವಾದ ಸುಖಾನುಭೂತಿ. ಅಮಲವಾದ ಭಕ್ತಿಯೇ ಅದಕ್ಕೆ ಸಾಧನ. ಹೀಗೆ ನಂಬಿದವರು ಅನ್ಯ ಮತ ದ್ವೇಷದ ಮೇಲೆ ಕಟ್ಟುವ ರಾಜಕಾರಣವನ್ನು ಹೇಗೆ ಬೆಂಬಲಿಸಿಯಾರು? ಆಧ್ಯಾತ್ಮಿಕತೆಗೆ ಅತ್ಯಂತ ಅಗತ್ಯವಾದ್ದು ಅನಾಸಕ್ತಿ. ಫಲಾಪೇಕ್ಷೆಗೆ ಅಂಟಿಕೊಂಡ ರಾಜಕಾರಣವಲ್ಲ, ನಿರಾಸಕ್ತಿಯೂ ಅಲ್ಲ. ಇದು ಗೀತೋಪದೇಶದ ಮೂಲ ತತ್ವ.

(ಸಾಭಾರ : ಪ್ರಜಾವಾಣಿ)

* * *

ಸಾವು ಮತ್ತು ನಾವು

– ಚಂದ್ರಶೇಖರ ಸುಬ್ರಮಣ್ಯ; ಅನು: ಕೆ.ಆರ್.ಮೋಹನ್

ಭವಿಷ್ಯದಲ್ಲಿ ಒಂದು ದಿನ ನಮ್ಮ ಇಹ ಜೀವನ ಪರಿಸಮಾಪ್ತಿಯಾಗುತ್ತದೆಂದು ಎಲ್ಲರಿಗೂ ಖಂಡಿತವಾಗಿ ತಿಳಿದ ವಿಷಯ. ಆದರೂ ಆತ್ಮೀಯರು ಸತ್ತಾಗ ಮೊದಲು ಅಪನಂಬಿಕೆಯಿಂದ ಸ್ವೀಕರಿಸಿ ಆನಂತರ ಅವರ ಅಗಲುವಿಕೆಯಿಂದ ನಾವು ದುಃಖಪಡುತ್ತೇವೆ. ಸಾವು ಒಂದು ನಿಶ್ಚಯವಾಗಿ ನಡೆಯುವ ಘಟನೆಯೆಂದು ನಮಗೆ ಗೊತ್ತು ಮತ್ತು ಸದಾ ಅದರ ನೆನಪು ಇರುತ್ತದೆ. ಆದರೆ ಸಾವಿನ ಬಗ್ಗೆ ಪರೋಕ್ಷವಾಗಿ ಮಾತನಾಡಲೂ ಕೂಡ ನಾವು ಹಿಂಜರಿಯುತ್ತೇವೆ. ಸಾವನ್ನು ಎದುರಿಸಲು ನಮಗೆ ಪ್ರಾಣಾಂತಿಕ ಭಯ.

ಆಶ್ಚರ್ಯದ ಸಂಗತಿಯೆಂದರೆ ಸಾವಿನ ದುಃಖವನ್ನು ಅತ್ಯಲ್ಪ ಕಾಲದಲ್ಲಿ ಮರೆತು ಪ್ರಸ್ತುತ ಪರಿಸ್ಥಿತಿಗೆ ಹೊಂದಿಕೊಂಡು ಏನೂ ಆಗದ ರೀತಿಯಲ್ಲಿ ನಮ್ಮ ಜೀವನ ನಿರ್ವಹಿಸುತ್ತೇವೆ. ಒಂದು ವೇಳೆ ನಮಗೆ ಛಾಯಾಚಿತ್ರದಂತಹ ನೆನಪಿನ ಶಕ್ತಿಯನ್ನು ಕೊಟ್ಟಿದ್ದರೆ ನಮ್ಮ ಅವಸ್ಥೆ ಏನಾಗಬಹುದು. ಆಗ ಜೀವನ ನರಕಮಯವಾಗುತ್ತಿತ್ತು. ಕಾಲ ಒಂದು ದೊಡ್ಡ ಗುಣಪಡಿಸುವ ವೈದ್ಯ. ಅದು ನೋವನ್ನು ಕಾಲ ಕ್ರಮೇಣ ಉಪಶಮನ ಮಾಡುತ್ತದೆ. ಸಾವಿನಿಂದ ಉಂಟಾದ ನಷ್ಟ ಮರೆಯದಿದ್ದರೂ ಸಾವಿನ ದುಃಖವನ್ನು ಭರಿಸುತ್ತದೆ. ನಮ್ಮ ಹುಟ್ಟು ಸಾವು ಮತ್ತು ಅವು ನಮ್ಮ ಇಷ್ಟದಂತೆ ನಡೆಯುವ ನಿಯಂತ್ರಣದ ಹಕ್ಕನ್ನು ನಮಗೆ ಯಾರಿಗೂ ಕೊಟ್ಟಿಲ್ಲ.

ವಯಸ್ಸಾದವರಿಗಿಂತ ಕಿರಿಯರು ಮುಂಚೆ ಸಾಯುವುದನ್ನು ನೋಡುತ್ತಿದ್ದೇವೆ. ಅದರಲ್ಲಿಯೂ ನನ್ನ ಸ್ನೇಹಿತರ ತಾಯಿ ಎಳನೇ ವಯಸ್ಸಿನಲ್ಲಿ ಸತ್ತರು. ಆದರೆ ಅವರ ತಾಯಿ ಅಂದರೆ ನಮ್ಮ ಸ್ನೇಹಿತರ ಅಜ್ಜಿ ಶತಾಯುಶಿಗಳಾಗಿದ್ದರು. ಯಾರು ತಮ್ಮ ಸಾವಿನ ಬಗ್ಗೆ ವಿಚಲಿತವಾಗದೆ ಮತ್ತು ಸಾವಿನ ಭಯವನ್ನು ಜಯಿಸಿರುತ್ತಾರೆ, ಅಂತಹವರು ನಿರ್ವಾಣವನ್ನು ಪಡೆಯುತ್ತಾರೆ ಎಂದು ಉಪನಿಷತ್ತುಗಳು ಸಾರುತ್ತವೆ. ನಾವು ಹುಟ್ಟುವಾಗಲೇ ನಮ್ಮ ಸಾವಿನ ದಿನವನ್ನು ಜಗನ್ನಿಯಾಮಕನು ನಿಶ್ಚಯ ಮಾಡಿರುತ್ತಾನಂತೆ! ಸಾವು ನಿರ್ದಿಷ್ಟ ವಿಧಾನವನ್ನು ಅನುಸರಿಸುವುದಿಲ್ಲ. ಹಾಗಾಗಿ ಸಾವಿನ ಬಗ್ಗೆ ನಿಖರವಾಗಿ ಭವಿಷ್ಯ ಹೇಳಲು ಸಾಧ್ಯವಿಲ್ಲ. ಸಾವು ಒಂದು ಚಿದಂಬರ ರಹಸ್ಯ. ಮರಣಾಂತಿಕ ರೋಗದಿಂದ ಸತ್ತವರನ್ನು ನೋಡುತ್ತೇವೆ. ಇನ್ನೊಂದು ಕಡೆ ಒಳ್ಳೆಯ ಆರೋಗ್ಯವಾಗಿ ಇದ್ದು ಅನಿರೀಕ್ಷಿತ ರೀತಿ ಸಾಯುವವರನ್ನೂ ನೋಡುತ್ತೇವೆ. ನಡೆದ ಸಾವಿನ ಕಾರಣದ ಬಗ್ಗೆ ಬಹಳಷ್ಟು ಸಮಯ ವಿವರ ಸಿಗುವುದಿಲ್ಲ. ಏಕೆಂದರೆ ಸಾವು ತರ್ಕ ಮತ್ತು ವೈದ್ಯಕೀಯ ವಿಶ್ಲೇಷಣೆಗೆ ಒಳಪಡುವುದಿಲ್ಲ. ಬಹುಶಃ ಸಾವಿನ ಅನಿಶ್ಚತತೆ ಕಾರಣದಿಂದ ಜೀವನ ಅಮೂಲ್ಯವೆನಿಸುವುದು. ಹಾಗಾಗಿ ವರ್ತಮಾನದಲ್ಲಿ ಜೀವಿಸುತ್ತಾ ಉತ್ಸಾಹದಿಂದ ಬಾಳೋಣ.

* * *

ಜನಪದ ವ್ಯಕ್ತಿ

ಐರೋಮ್ ಶರ್ಮಿಳಾ

ಐರೋಮ್ ಶರ್ಮಿಳಾ ಉಪವಾಸ ಆರಂಭಿಸಿ ಹತ್ತು ವರ್ಷಗಳಾದವು. ಇದೊಂದು ಐತಿಹಾಸಿಕ ಆಮರಣಾಂತ ಉಪವಾಸ. ಇದು ಮಣಿಪುರ್‌ನಲ್ಲಿಯ ದೈತ್ಯ ಸದೃಶ ಕಾನೂನಿನ ವಿರುದ್ಧವಾಗಿದೆ. ೨೦೦೦ನೇ ಇಸವಿ ನವೆಂಬರ್‌ನಲ್ಲಿ ಇಂಫಾಲ್ ಬಳಿ ಒಂದು ಬಸ್ ನಿಲ್ದಾಣದಲ್ಲಿ ಅಸ್ಸಾಂ ಪೋಲೀಸರು ಹತ್ತು ಮುಗ್ಧ ಜನರನ್ನು ಗುಂಡಿಟ್ಟು ಕೊಂದರು. ಶರ್ಮಿಳಾ ಆಗ ಕೇವಲ ೨೮ ವರ್ಷದ ಯುವತಿ. ಪೋಲೀಸರ ವಿಶೇಷ ಅಧಿಕಾರಗಳ ಕಾನೂನನ್ನು ಹಿಂತೆಗೆದುಕೊಳ್ಳಬೇಕೆಂಬ ಒತ್ತಾಯಕ್ಕೆ ಈ ಉಪವಾಸ ಪ್ರಾರಂಭಿಸಿದಳು. ಆ ಕಾನೂನಿನ ಬಲದಿಂದಾಗಿಯೇ ಭದ್ರತಾ ಪಡೆಗಳು ನರಹತ್ಯೆ ಮಾಡಲು ಸಾಧ್ಯವಾಯಿತು. ಒಂದೇ ಒಂದು ತುತ್ತು ಅನ್ನ ಅವಳ ಗಂಟಲಿನಿಂದಿಳಿದಿಲ್ಲ, ಒಂದೇ ಒಂದು ಹನಿ ನೀರು ಅವಳ ತುಟಿಗಳಿಂದ ಹೋಗಿಲ್ಲ. ಇದು ಕಳೆದ ಹತ್ತು ವರ್ಷದ ಸ್ಥಿತಿ. ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾಳೆ ಎಂಬ ಕಾರಣದಿಂದ ಅವಳನ್ನು ಬಂಧಿಸಲಾಗಿದೆ. ಮೂಗಿನ ಮೂಲಕ ಡ್ರಿಪ್ ಹಾಕಿ ಅವಳನ್ನು ಸಜೀವವಾಗಿ ಇಡಲಾಗಿದೆ. ಐರೋಮ್‌ನ ಉಪವಾಸ ನಿಜವಾಗಿ ಅಭೂತಪೂರ್ವವಾದುದು. ಅವಳ ಉಪವಾಸ ಪ್ರಬಲ ತತ್ವಾಧಾರಿತ ಮತ್ತು ಶಾಂತಿಯುತವಾಗಿದೆ. ಬೆಳಿಗ್ಗೆ ಹೊಟ್ಟೆ ತುಂಬ ತಿಂದು ಸಂಜೆಯವರೆಗೆ ಉಪವಾಸ ಮಾಡುವ ನಮ್ಮ ರಾಜಕಾರಣಿಗಳ ಉಪವಾಸಕ್ಕಿಂತ ಇದು ಭಿನ್ನವಾಗಿದೆ. ಐರೋಮ್‌ನ ಉಪವಾಸ ಪ್ರಾಮಾಣಿಕವಾದುದ್ದಾಗಿದೆ. ಕ್ಯಾಮರಾದ ಕಣ್ಣಿಗಾಗಿ ನಡೆಯುವಂಥದ್ದಾಗಿಲ್ಲ. ಅವಳ ಉಪವಾಸ ನಿಜವಾಗಿ ಗಾಂಧೀ ತತ್ವಾಧಾರಿತವಾಗಿದ್ದಾಗಿದೆ. ಸತ್ಯ, ನ್ಯಾಯ ಮತ್ತು ಶಾಂತಿಗಾಗಿ ಇರುವ ಅವಳ ತೀವ್ರ ಬದ್ಧತೆ ಇಂಥ ಉಪವಾಸ ಕೈಗೊಳ್ಳಲು ಕಾರಣವಾಗಿದೆ. ಕಳೆದ ಹತ್ತು ವರ್ಷಗಳಲ್ಲಿ ಒಂದು ಸಲವೂ ತನ್ನ ಸೂಕ್ಷ್ಮ ಆರೋಗ್ಯವನ್ನು ತನ್ನ ಬೆಂಬಲಿಗರು ಹಿಂಸಾಚಾರದಲ್ಲಿ ತೊಡಗುವಂತೆ ಪ್ರೇರೇಪಿಸುವುದಕ್ಕೆ ಅವಕಾಶ ಕೊಟ್ಟಿಲ್ಲ. ತತ್ವಾಧಾರಿತ ಐರೋಮ್‌ನ ಪ್ರತಿಭಟನೆ ಅವಳ ಬೇಡಿಕೆಗಳ ಬಗ್ಗೆ ಸರ್ಕಾರ ಏನನ್ನೂ ಕ್ರಮ ತೆಗೆದುಕೊಳ್ಳದಿರುವುದು ದುಃಖದ ಸಂಗತಿ. ಸಶಸ್ತ್ರ ಪೋಲೀಸರ ದೈತ್ಯ ಸದೃಶ ಕಾನೂನನ್ನು ಹಿಂತೆಗೆದುಕೊಳ್ಳಬೇಕೆಂದು ಕರೆಕೊಡುತ್ತಿರುವವರಲ್ಲಿ ಶರ್ಮಿಳಾ ಒಬ್ಬಳೇ ಅಲ್ಲ. ಈಶಾನ್ಯ ರಾಜ್ಯದಲ್ಲಿಯ ಮತ್ತು ಕಾಶ್ಮೀರದಲ್ಲಿಯ ಮತ್ತು ಭಾರತದ ಇತರೆಡೆಯಲ್ಲಿಯ ಲಕ್ಷಾಂತರ ಜನರು ಐರೋಮ್ ಶರ್ಮಿಳಾರೊಂದಿಗೆ ತಮ್ಮ ಒಗ್ಗಟ್ಟನ್ನು ವ್ಯಕ್ತಪಡಿಸುತ್ತಿದ್ದಾರೆ. ಬಹಳಷ್ಟು ಸಲ ಸಶಸ್ತ್ರ ಪೋಲೀಸರು ದುರುಪಯೋಗಪಡಿಸಿಕೊಳ್ಳುವ ಕಾನೂನನ್ನು ಹಿಂತೆಗೆದುಕೊಳ್ಳಬೇಕೆಂದು ಅವರೆಲ್ಲರೂ ಒತ್ತಾಯಿಸುತ್ತಿದ್ದಾರೆ. ಸರ್ಕಾರ ನೇಮಿಸಿದ ಅನೇಕ ಸಮಿತಿಗಳು ದೈತ್ಯರೂಪದ ಆ ಕಾನೂನು ತಿರುಗೇಟು ಕೊಡುವಂಥದ್ದಾಗಿದೆ ಎಂದು ತಿಳಿಸಿವೆ. ಈಶಾನ್ಯ ರಾಜ್ಯಗಳಲ್ಲಿ ಆ ಕಾನೂನನ್ನು ಜಾರಿ ಮಾಡಿದಾಗಿನಿಂದ ಬಂಡಾಯ ಗುಂಪುಗಳ ಸಂಖ್ಯೆ ಹೆಚ್ಚಾಗಿದೆ. ಐರೋಮ್ ಹತ್ತು ವರ್ಷಗಳಿಂದ ಉಪವಾಸ ಇರಬೇಕಾದದ್ದು ಮತ್ತು ದಿನಗಳು ಉರುಳುತ್ತಿರುವುದು ಒಂದರ್ಥದಲ್ಲಿ ಗಾಂಧೀಮಾರ್ಗದ ಹೋರಾಟಗಳ ಬಗ್ಗೆ ಭಾರತ ಸರ್ಕಾರ ಎಷ್ಟೊಂದು ಕಠಿಣ ಹೃದಯಿಯಾಗಿದೆ ಮತ್ತು ಸ್ಪಂದನ ರಹಿತವಾಗಿದೆ ಎಂಬುದರ ಬಗ್ಗೆ ಕಠೋರ ತೀರ್ಮಾನವೇ ಆಗಿದೆ. ಯಾರು ಹಿಂಸೆಯಲ್ಲಿ ಮತ್ತು ಲೂಟಿಮಾಡುವುದರಲ್ಲಿ ತೊಡಗಿದ್ದಾರೋ ಅಂಥವರ ಬೇಡಿಕೆಗಳನ್ನು ಭಾರತ ಸರ್ಕಾರ ಈಡೇರಿಸುತ್ತದೆ. ಆದರೆ ಐರೋಮ್ ಶರ್ಮಿಳಾರ ಉಪವಾಸ ಆತ್ಮಾಹುತಿಯ ಇಚ್ಛೆಯೆಂದು ಅದನ್ನು ತಳ್ಳಿ ಹಾಕುತ್ತಿದೆ. ಐರೋಮ್ ಶರ್ಮಿಳಾ ಅಥವಾ ಮೇಧಾ ಪಾಟ್ಕರ್, ಹಿಮಾಂಶುಕುಮಾರ್ ಅಥವಾ ಸಾವಿರಾರು ಅನಾಮಧೇಯ ಭಾರತೀಯರು ಅನ್ಯಾಯ ಮತ್ತು ತುಳಿತದ

ವಿರುದ್ಧ ಶಾಂತಿಯುತ ಬಂಡಾಯಗಳ ಬಗ್ಗೆ ಭಾರತ ಸರ್ಕಾರವು ಸ್ಪಂದಿಸದೇ ಇರುವುದರ ಅರ್ಥವೇನೆಂದರೆ ಸರ್ಕಾರ ಕೇವಲ ತುಪಾಕಿಗಳ ಗುಂಡನ್ನು ಮತ್ತು ಕೈ ಬಾಂಬ್‌ಗಳನ್ನು ಅರ್ಥಮಾಡಿಕೊಳ್ಳುತ್ತದೆ ಎಂಬ ನಿಲುವು ಬಹಿರಂಗವಾಗಿ ಬಿಡುತ್ತದೆ. ಇದು ಅಪಾಯಕಾರಿ ಇದು ಸ್ಪಷ್ಟವಾಗಿ ನೈತಿಕ ಶಕ್ತಿಯ ಅಭಾವವೇ ಆಗಿದೆ.

(ಸಾಭಾರ – ಡೆಕ್ಕನ್ ಹೆರಾಲ್ಡ್ : ಅನು–ಸುಕೌ)

* * *

ಕಸಾಬನ ನೆಪದಲ್ಲಿ

ಕಸಾಬನಿಗೆ ಗಲ್ಲಿಗೇರಿಸಿ!
ಕಸಾಬನಿಗೆ ಗಲ್ಲಿಗೇರಿಸಿ!
ಕೂಡಲೇ ಕಸಾಬನಿಗೆ ಗಲ್ಲಿಗೇರಿಸಿ !!
ಎಷ್ಟು ಕಸಾಬರಿಗೆ?
ನಿಮ್ಮ ಕೈದಿಗೊ?
ಹೊರಗಡೆಗೆ ಸಾವಿರಾರು ಇದ್ದಾರೆ
ನಿಮ್ಮ ಬಂಧನಕ್ಕಾಗಿ!
ಪಾಕಿಸ್ತಾನದಲ್ಲಿ, ಹಿಂದೂಸ್ತಾನದಲ್ಲಿ
ಅಮೇರಿಕಾ ಮತ್ತು ಚೀನಾದಲ್ಲಿ
ತೆಲಂಗಾಣಾ ಮತ್ತು ಛತ್ತಿಸ್‌ಗಢ್‌ನಲ್ಲಿ!
ಮತ್ತೆಲ್ಲಿ ಅವರನ್ನೇನು ಮಾಡುವೆ?
ಹೀಗೆಯೇ ಅವನನ್ನು ಹುಟ್ಟಿಸುತ್ತ
ಹೋಗುವೆಯಾ?
ವರ್ಣಾಧಾರದ ಮೇಲೆ ಕೀಳಾಗಿ
ನೋಡಿ
ನಿಮ್ಮ ಧರ್ಮಗಳ ಸೈತಾನಿ
ವ್ಯಾಖ್ಯೆಗಳನು
ತಲೆಯಲ್ಲಿ ತುಂಬಿಕೊಂಡು
ಶ್ರಮದಬದಲಿಗೆ ಹಣ ದೇವರನ್ನಾಗಿಸಿ
ಲೋಕ ತಂತ್ರದ ಹೆಸರಲ್ಲಿ ಬಲೆ ಬೀಸಿ
ಧಾರ್ಮಿಕ ವ್ಯವಸ್ಥೆಯ ಹೆಸರಿನಲ್ಲಿ
ದಮನ;
ಟ್ಯಾಂಕ್ ಕ್ಷಿಪಣಿಗಳ ಮೇಲೆ ಕುಳಿತು
ಹೀಗೆಯೇ ಕುವಿಖ್ಯಾತಗಳಲ್ಲಿ ನಡೆದು
ನೀನು ಕಸಾಬನನ್ನು ಹುಟ್ಟಿಸಿದ್ದೆಯೇ
ಒಬ್ಬನಲ್ಲ ಸಾವಿರ ಕಸಾಬ್ ಒಬ್ಬನನ್ನು
ಸಾಯಿಸಿದರೆ
ನಿನಗೇನು ಸಿಗುವುದು?
ಸಂತೋಷವೆ?
ಸತ್ಕರ್ಮದ್ದಲ್ಲ ಸೇಡಿನದು ಅದು
ಸಂರಕ್ಷಣೆಯೇ ಅದು ಸ್ವಾತಂತ್ರ್ಯದ್ದಲ್ಲ
ಕೋವಿಯ ಗುರಿ
ಏನುತಮಾಷೆ! ಏನು ವಿಡಂಬನೇ!
ಆಲೋಚಿಸು, ನೀನೋರ್ವ ಮನುಷ್ಯ
ಯೋಚಿಸಬಲ್ಲೆ ಅದಕ್ಕಾಗಿಯೋಚಿಸು
ಒಬ್ಬ ಕಸಾಬನನ್ನು
ಗಲ್ಲಿಗೇರಿಸುವುದರಿಂದ ನಿನ್ನ
ಕೆಲಸವಾಗುವುದಿಲ್ಲ.
ಮಾನವೀಯತೆಯೊಂದಿಗಿನ ಬಲಾತ್ಕಾರ
ನಿಲ್ಲಿಸು
ಎಲ್ಲ ಸರಿ ಹೋಗುವುದು

– *ಶುಭಾಮೂರ್ತಿ*
ಅನುವಾದ–ಸುಕೌ

ಜನಪದ ಧ್ವನಿ

ಸ್ವಾತಂತ್ರ್ಯ ಪೂರ್ವದಲ್ಲಿ ಇದ್ದ ರಾಜಕಾರಣಕ್ಕೂ ಸ್ವಾತಂತ್ರ್ಯದ ಹಲವು ವರ್ಷಗಳು ಕಳೆದ ನಂತರ ಆಗಿರುವ ರಾಜಕಾರಣಕ್ಕೂ ಬಹಳ ಬಹಳ ವ್ಯತ್ಯಾಸಗಳನ್ನು ಕಾಣುತ್ತೇವೆ. ಸ್ವಾತಂತ್ರ್ಯ ಪೂರ್ವದಲ್ಲಿದ್ದ ಕೆಲವು ಹಿರಿಯರನ್ನು ಕೇಳಿದರೆ ಅಂದು ಮತ್ತು ಇಂದಿನ ರಾಜಕಾರಣದ ವ್ಯತ್ಯಾಸವನ್ನು ತಿಳಿಯಬಹುದು. ಸ್ವಾತಂತ್ರ್ಯದ ನಂತರ ಕೆಲವು ವರ್ಷಗಳು ಆಡಳಿತವು ಕೂಡ ಪ್ರಾಮಾಣಿಕವಾಗಿ ನಡೆಯಿತೆಂದು ಹೇಳಬಹುದು. ಈಗಿರುವಂತೆ ಭ್ರಷ್ಟಾಚಾರ, ಸ್ವಜನಪಕ್ಷಪಾತ, ಲಂಚಗುಳಿತನ, ಅನ್ಯಾಯ, ಮೋಸ ಇತ್ಯಾದಿಗಳು ಇರಲಿಲ್ಲ. ರಾಜಕಾರಣವೂ ಕೂಡ ಸ್ವಚ್ಛವಾಗಿ ಪ್ರಾಮಾಣಿಕವಾಗಿ ನಡೆಯಿತು. ರಾಜಕೀಯದಲ್ಲಿದ್ದವರೂ ಕೂಡ ಪ್ರಾಮಾಣಿಕವಾಗಿ ಸೇವಾ ಮನೋಭಾವನೆಯಿಂದ ನಡೆದುಕೊಂಡು ತಮ್ಮನ್ನು ನಂಬಿದ್ದ ಪ್ರಜೆಗಳಿಗೆ ಅನ್ಯಾಯವನ್ನು ಮಾಡದೆ ತಾವೂ ಜನರ ಸೇವಕರೆಂದು ದೇಶದ ಆಡಳಿತವನ್ನು ನಡೆಸಿದರು. ಚುನಾವಣೆಗಳೂ ಕೂಡ ಪ್ರಾಮಾಣಿಕವಾಗಿ ಮತ್ತು ಮುಕ್ತವಾಗಿ ನಡೆಯುತ್ತಿದ್ದವು. ಚುನಾವಣೆಗಳಲ್ಲಿ ಗೆದ್ದಂತಹ ನಾಯಕರು ತಮ್ಮ ಮೇಲೆ ನಂಬಿಕೆಯಿಟ್ಟಂತಹ ಜನರಿಗೆ ಅವರ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡು ದೇಶಸೇವೆ ಪ್ರಜಾಸೇವೆಯನ್ನು ಪ್ರಾಮಾಣಿಕವಾಗಿ ಮಾಡಿಕೊಂಡು ಏನನ್ನೂ ಸಂಪಾದಿಸದೆ ಕೊನೆಗೆ ವಾಸಿಸಲು ಸ್ವಂತ ಮನೆಗಳಿಲ್ಲದೆ ತಮ್ಮ ಪ್ರಾಣವನ್ನೇ ಕಳೆದುಕೊಂಡವರು ಇದ್ದಾರೆ. ಇದಕ್ಕೆ ಸಾಕ್ಷಿಗಳೆಂದರೆ ಲಾಲ್ ಬಹದ್ದೂರ್ ಶಾಸ್ತ್ರಿ, ಜಯಪ್ರಕಾಶ್ ನಾರಾಯಣ್ ಮತ್ತು ಗುಲ್ಜಾರಿಲಾಲ್ ನಂದಾ ಎಂದು ಕೆಲವರನ್ನು ಮಾತ್ರ ಹೆಸರಿಸಬಹುದು. ಭ್ರಷ್ಟ ರಾಜಕಾರಣಿಗಳು ಅಧಿಕಾರಕ್ಕೆ ಬಂದಾಗ ಹೇರಳವಾಗಿ ಹಣವನ್ನು ಹೇಗೋ ಸಂಪಾದಿಸುತ್ತಾರೆ. ಅದನ್ನು ಮತ್ತೆ ಚುನಾವಣೆಗಳು ಬಂದಾಗ ನೀರಿನಂತೆ ಚೆಲ್ಲಿ ಖರ್ಚು ಮಾಡುತ್ತಾರೆ. ಇಂತಹವರು ಚುನಾವಣೆಗಳಲ್ಲಿ ಗೆದ್ದು ಬಂದು ದೇಶದ ಅಧಿಕಾರದ ಚುಕ್ಕಾಣಿಯನ್ನು ಹಿಡಿದು ಎಂತಹ ಆಡಳಿತವನ್ನು ಜನತೆಗೆ ಕೊಟ್ಟಾರು? ಎಂಬುದನ್ನು ನೀವೇ ಯೋಚನೆ ಮಾಡಿ.

– ***ಬಿಸಪ್ಪಗೌಡ,*** ವಕೀಲರು, ಕೋಲಾರ

ಸ್ಮರಣೆ

ಮಂಡ್ಯ ಜಿಲ್ಲೆಯ ಪುಟ್ಟ ಗ್ರಾಮವಾದ ಶಿವಳ್ಳಿಯಲ್ಲಿ ೬-೧೨-೧೯೪೪ ರಂದು ಜನಿಸಿದ ಕೆಂಪೇಗೌಡು ಎಲೆಮರೆಯ ಸಾಹಿತಿಯಾಗಿದ್ದರು. ಜಿಲ್ಲೆಯ ಧಾರ್ಮಿಕ-ಐತಿಹಾಸಿಕ ಸ್ಥಳಗಳಿಗೆ ಭೇಟಿಕೊಟ್ಟು ಅವುಗಳ ಬಗ್ಗೆ ವಿವಿರವಾದ ಮಾಹಿತಿ ಸಂಗ್ರಹಿಸಿ ಲೇಖನ ಬರೆಯುತ್ತಿದ್ದರು. ಜಿಲ್ಲೆಯ ಪ್ರಮುಖ ವ್ಯಕ್ತಿಗಳ ಬಗ್ಗೆ ಲೇಖನ ಬರೆಯುತ್ತಿದ್ದರು. ಇವರು ತಮ್ಮ ಪ್ರಯಾಣಕ್ಕಾಗಿ ಸೈಕಲ್ ಉಪಯೋಗಿಸುತಿದ್ದರು. ಇವರು ತಮ್ಮ ೬೨ನೇ ವಯಸ್ಸಿನಲ್ಲಿ ತೀರಿಕೊಂಡರು. ಅವರ ನಿಧನವಾರ್ತೆ ಕೇಳಿ ಇಡೀ ಮಂಡ್ಯ ಜಿಲ್ಲೆ ಕಣ್ಣೀರು ಸುರಿಸಿತು. ಶಿವಳ್ಳಿ ಕೆಂಪೇಗೌಡರನ್ನು ನೆನೆದು ಮಂಡ್ಯ ಗಾಂಧೀಭವನದ ಶ್ರೀ ಲಿಂಗಣ್ಣ ಬಂಧೂಕಾರ್ ಅವರು ಬರೆದ ಕವನ ಇಂತಿದೆ.

ಚಿರಸ್ಮರಣೆ

ಶಿವಳ್ಳಿ ಎಂಬುದು ಕೆಂಪೇಗೌಡರ ಊರು
ಬದುಕಿಗಾಗಿ ಇತ್ತು ಊರಿನಲ್ಲೊಂದು ಸೂರು
ಮಲಗಲಷ್ಟೇ ಮನೆ; ಸುತ್ತುವುದೇ ಊರೂರು
ಸ್ಥಳ ಪುರಾಣಗಳ ಬಿಚ್ಚಿ, ರಮ್ಯ ತಾಣಗಳ ನೆಚ್ಚಿ
ಶೋಧನೆಗೆ ತೊಡಗಿದಿರಿ ಓ ಆಪತ್ಬಂಧು.

ಹಾಸಿಗೆಯ ಬಯಸದೆಯೆ ನೆಲದ ಮೇಲೆಯ ಮಲಗಿ
ಊಟ ಸಿಕ್ಕರೆ ಉಂಡು ಹಸಿವೆಯನೆ ತಿಂದಿರಿ
ನಿಮಗಿದ್ದ ಹಸಿವೆ-ದಾಹಗಳೆ ಬೇರೆ ಇತ್ತು
ಜ್ಞಾನದಾಹದ ಜತೆಗೆ ದಾಖಲೆಯೆಡೆಗೆ ನಿಮ್ಮ ಚಿತ್ತ.

ನೀವು ಬರೆದಿದ್ದೆಷ್ಟು? ಬ್ರಹ್ಮನಿಗೂ ಲೆಕ್ಕ ಸಿಗದಷ್ಟು!
ಕೇಳಿದವರಿಗೆಲ್ಲಾ ಬರೆದು ಕೊಟ್ಟ ಕಲ್ಪವೃಕ್ಷ
ಮನೆಗೆ ಮಾತ್ರ ಮಾರಿ ಪರರಿಗುಪಕಾರಿ
ನೀವೇನೋ ನೋಡಿಕೊಂಡಿರಿ ನಿಮ್ಮ ಬದುಕಿನ ದಾರಿ.

ಮಡದಿ ಮಕ್ಕಳು, ಅಳಿಯಂದಿರನು ಅಗಲಿ
ಬಂಧು ಬಳಗಕೆ ನೀವು ಸಿಗದಂತೆ ಲೋಕ ಬಿಟ್ಟಿರಿ
ನೀವು ಸತ್ತಿರಬಹುದು ನೀವು ಬರೆದ ಸಾಹಿತ್ಯ ಸತ್ತಿಲ್ಲ
ನಿಮ್ಮಂಥ ಸಾಹಿತಿಯ ನೆನೆದಷ್ಟೂ ಪಾಪವಿಲ್ಲ.

ವಿಶ್ವವಿದ್ಯಾಲಯದ ಮೆಟ್ಟಿಲನು ಏರಿಲ್ಲ
ಮಣ್ಣಿನ ಮಗನಾಗಿ ಬೇಸಾಯ ಬಿಟ್ಟಿಲ್ಲ
ಪ್ರಚಾರವನು ಬಯಸಿಲ್ಲ, ಸಂಕೋಚ ಬಿಟ್ಟಿಲ್ಲ
ಪುಣ್ಯ ಪುರುಷ ನಮ್ಮ ಸಾಹಿತಿ ಶಿವಳ್ಳಿ ಕೆಂಪೇಗೌಡ್ರು!

* * *

ಜನಪದ ಸೇವಾ ಟ್ರಸ್ಟ್ ಸಮಾಚಾರ

ಅನಪೇಕ್ಷಿತ ಮಕ್ಕಳ ಸೇವಾ ಕಾರ್ಯದಲ್ಲಿ ಕ್ರಮೇಣ ಸುಧಾರಣೆಯಾಗುತ್ತಿದೆ. ಮತ್ತು ಆ ಕಾರ್ಯದ ಬೆಳವಣಿಗೆಯು ಆಗುತ್ತಿದೆ. ಈ ಸೇವಾಕಾರ್ಯ ಪ್ರಾರಂಭವಾದ ತರುಣದಲ್ಲಿ ಒಂದು ಗಂಡು ಮಗುವಿನ ಸೇವೆಯಿಂದ ಪ್ರಾರಂಭವಾಯಿತು. ಈಗ ಅಂಥ ಮಕ್ಕಳ ಸಂಖ್ಯೆ ಮೂರಕ್ಕೇರಿದೆ. ಅವರಲ್ಲಿ ಒಂದು ವರ್ಷದ ಹೆಣ್ಣುಮಗು ಮತ್ತು ನಾಲ್ಕು ವರ್ಷದ ಬಾಲಕಿ ಇದ್ದಾರೆ. ಮೊದಲಿನ ಗಂಡು ಮಗು ಸೇರಿ ಈ ಎಲ್ಲಾ ಮಕ್ಕಳು ಆರೋಗ್ಯವಾಗಿದ್ದಾರೆ. ದಿನೇ ದಿನೇ ಪ್ರವರ್ಧಮಾನರಾಗುತ್ತಿದ್ದಾರೆ. ಈ ಮಕ್ಕಳನ್ನು ದತ್ತು ಕೊಡುವ ಪ್ರಯತ್ನವೂ ಮರದ ಕಿರು ಮಂಚಗಳನ್ನು ಮಾಡಿಸಲಾಗಿದೆ. ಇಷ್ಟರಲ್ಲಿಯೇ ಇನ್ನೊಂದೆರಡು ಮಕ್ಕಳು ಬರುವ ನಿರೀಕ್ಷೆಯಿದೆ.

ಟ್ರಸ್ಟಿನಲ್ಲಿ ಖಾದಿ ಉದ್ಯಮವೂ ನಿಧಾನವಾಗಿ ತನ್ನ ಉತ್ಪಾದನೆಯನ್ನು ಹೆಚ್ಚಿಸುವುದರ ಮೂಲಕ ಬೆಳೆಯುತ್ತಿದೆ. ಹೊಸ ಜೀವನ ದಾರಿ ಕೇಂದ್ರದಲ್ಲಿನ ಖಾದಿ ಉದ್ಯಮದಲ್ಲಿ ಏಳು ಜನ ಮಹಿಳೆಯರು ತೊಡಗಿದ್ದಾರೆ. ಅದರಲ್ಲಿ ಮೂವರು ದೊಡ್ಡ ಮಗ್ಗಗಳ ಮೇಲೆ ಕುಳಿತು ಬಟ್ಟೆ ನೇಯುವುದನ್ನು ಕಲಿತಿದ್ದಾರೆ. ಖಾದಿ ದಾರಕ್ಕೆ ನೈಸರ್ಗಿಕ ಬಣ್ಣವನ್ನು ಹಾಕಿ ಬಟ್ಟೆಯನ್ನು ಸಹ ನೇಯ್ಗೆ ಮಾಡಲಾಗುತ್ತಿದೆ. ಅಲ್ಲದೆ ಕರವಸ್ತ್ರಗಳನ್ನು ನೇಯಲಾಗುತ್ತಿದೆ. ಟ್ರಸ್ಟ್‌ನಲ್ಲಿ ತಯಾರಾದ ಬಟ್ಟೆಗೆ ಬೇಡಿಕೆ ಬರುತ್ತಿದೆ. ಖಾದಿ ಸಿದ್ಧ ಉಡುಪು ಘಟಕದಲ್ಲಿ ಆರು ಜನ ಮಹಿಳೆಯರು ಕೆಲಸ ಮಾಡುತ್ತಿದ್ದಾರೆ. ಅವರು ಕುರ್ತಾ, ಟಿ-ಶರ್ಟ್, ಓಪನ್‌ಶರ್ಟ್, ಚೂಡಿದಾರ್, ಕೌದಿ, ಬನಿಯನ್ ಇತ್ಯಾದಿಗಳನ್ನು ಸಿದ್ಧ ಮಾಡುತ್ತಿದ್ದಾರೆ. ಬೇರೆ ಕೆಲ ಖಾದಿ ಸಂಸ್ಥೆಗಳು ಕೂಡ ತಮಗೆ ಬೇಕಾದ ಸಿದ್ಧ ಉಡುಪುಗಳನ್ನು ಟ್ರಸ್ಟಿನ ಘಟಕದಲ್ಲಿ ತಯಾರಿಸಿಕೊಂಡು ಹೋಗುತ್ತಿವೆ. ಇತ್ತೀಚಿಗೆ ಖಾದಿ ಮಂಡಲಿಯು ಏರ್ಪಡಿಸಿದ್ದ ೨೦೦೯-೧೦ ನೇ ಸಾಲಿನ ಖಾದಿ ಬಜೆಟ್‌ನ ಕಾರ್ಯಕ್ರಮದಲ್ಲಿ ಟ್ರಸ್ಟಿನ ಅಧ್ಯಕ್ಷರು ಭಾಗವಹಿಸಿ ಟ್ರಸ್ಟಿಗೆ ಸಂಬಂಧಿಸಿದ ಖಾದಿ ಬಜೆಟ್ ಮಂಡಿಸಿ ಒಪ್ಪಿಗೆ ಪಡೆದರು. ಟ್ರಸ್ಟಿನ ಅಧ್ಯಕ್ಷರು ಕರ್ನಾಟಕ ಸರ್ವೋದಯ ಮಂಡಲದ ಅಧ್ಯಕ್ಷರಾಗಿಯೂ ಸಹ ಕೆಲಸ ಮಾಡುತ್ತಿದ್ದಾರೆ. ತನ್ನಿಮಿತ್ತ ಡಿಸೆಂಬರ್ ಮಧ್ಯ ಭಾಗದಲ್ಲಿ ವಾರಣಾಸಿಯಲ್ಲಿ ನಡೆದ ಅಖಿಲ ಭಾರತ ಸರ್ವೋದಯ ಮಂಡಲದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗವಹಿಸಿ ಬಂದರು. ಟ್ರಸ್ಟ್‌ನ ಈ ಎಲ್ಲ ಕಾರ್ಯಕ್ರಮಗಳ ವಿಷಯವನ್ನು ಟ್ರಸ್ಟಿನ ಜಾಲತಾಣ janapada.net ನಲ್ಲಿ ಪ್ರಕಟಿಸಲಾಗಿದೆ.

೨೦೧೦ ಡಿಸೆಂಬರ್ ಮಾಹೆಯ ದಾನಿಗಳು

ಶ್ರೀ ಸಿ.ಪಿ.ಶೇಷಾದ್ರಿ, ಶ್ರೀ ಡಿ.ಎಸ್.ನಾಡಿಗ್, ಶ್ರೀ ಆರ್.ಆರ್.ಅನವಟ್ಟಿ,
ಶ್ರೀಮತಿ ಪ್ರೇಮಲೀಲಾ – ಬೆಂಗಳೂರು
ಶ್ರೀ ಕೆ.ಬಿ.ಸದಾನಂದ – ಮೈಸೂರು
ಶ್ರೀ ಭೀಮಸಿಂಗ್ ಗೌಗಿ – ತುಮಕೂರು
ಶ್ರೀ ಸಿ.ಕೃಷ್ಣ – ಹಾಸನ
ಶ್ರೀ ಟಿ.ನಾರಾಯಣಗೌಡ – ಕೋಲಾರ ಇವರಿಗೆ ಮತ್ತು ಸಂಸ್ಥೆಯ ಎಲ್ಲ ಮಾಹೆಯಾನ ದಾನಿಗಳಿಗೆ ಟ್ರಸ್ಟ್‌ತನ್ನ ಕೃತಜ್ಞತೆಯನ್ನು ಸಮರ್ಪಿಸುತ್ತದೆ.

ಜನಪದ ನಿಲಯದ ಅಂತರಂಗದಲ್ಲಿ .. ೮೬

– ಸುರೇಂದ್ರ ಕೌಲಗಿ



ಸಾಮಾನ್ಯವಾಗಿ ಪ್ರತಿಯೊಂದು ಸಾರ್ವಜನಿಕ ಸಂಸ್ಥೆಯಲ್ಲಿ 'ಸಂದರ್ಶಕರ ಪುಸ್ತಕ' ಎಂಬ ಮಹತ್ವದ ಮತ್ತು ಪ್ರತಿಷ್ಠೆಯ ದಾಖಲಾತಿ ಪುಸ್ತಕ ಇರುತ್ತದೆ. ಶಿಕ್ಷಣ ಸಂಸ್ಥೆಯಲ್ಲಂತೂ ಈ ಪ್ರಕಾರದ ಪುಸ್ತಕ ಇದ್ದೇ ಇರುತ್ತದೆ. ಇನ್ನಿತರ ಸೇವಾ ಸಂಸ್ಥೆಗಳಲ್ಲಿಯೂ ಈ ರೀತಿಯ ಪುಸ್ತಕ ಇರುವುದು ಸಾಮಾನ್ಯ. ಸರ್ಕಾರದ ಅನುದಾನ ಪಡೆಯುವ ಸಂಸ್ಥೆಯಲ್ಲಂತೂ ಈ ಪುಸ್ತಕ ಕಡ್ಡಾಯವಾಗಿ ಇರಲೇಬೇಕು. ಜನಪದ ಸೇವಾ ಟ್ರಸ್ಟ್ ಪ್ರಾರಂಭವಾದ ಮೇಲೆ ಸಂದರ್ಶಕರ ಪುಸ್ತಕ ಇಡುವುದು ಅಗತ್ಯವೆಂದು ಅನಿಸಿತು. ಅಂಥ ಪುಸ್ತಕವನ್ನೂ ಇಡಲಾಯಿತು. ಸಂಸ್ಥೆ ಒಳ್ಳೆಯ ಕೆಲಸ ಮಾಡುತ್ತಿದೆ ಎಂಬ ಅಭಿಪ್ರಾಯ ಸಂಸ್ಥೆಯ ಸಂಚಾಲಕರ ಮನಸ್ಸಿನಲ್ಲಿ ಇದ್ದುದರಿಂದ ಸಂದರ್ಶನಕ್ಕೆ ಬರುವವರ ಕೈಗೆ ಸಂದರ್ಶನದ ಪುಸ್ತಕ ಕೊಡಲು ಸಹಜವಾಗಿಯೇ ಯಾವ ಸಂಕೋಚವಿರಲಿಲ್ಲ. ಸಂಸ್ಥೆಗೆ ಭೇಟಿ ಕೊಡುವ ಸಂದರ್ಶಕರು ಸಂಸ್ಥೆಯ ಕಾರ್ಯಕಲಾಪಗಳನ್ನು ಹೊಗಳಿ ಬರೆದರೆ ಪರವಾಗಿಲ್ಲ. ಹೊಗಳಿಕೆ ಕೇವಲ ಸಂಸ್ಥೆಗೆ ಸಂಬಧಿಸಿದ ಚಟುವಟಿಕೆಗೆ ಸೀಮಿತವಾಗಿದ್ದಲ್ಲಿ ಸಹ್ಯವಾಗಿರುತ್ತದೆ. ಸಂಸ್ಥೆಯ ಪ್ರಶಂಸೆಯ ಮಾತುಗಳ ಜತೆಗೆ ಸಂಸ್ಥೆಯನ್ನು ನಡೆಸುವ ವ್ಯಕ್ತಿಯನ್ನೂ ಹೊಗಳಲಾರಂಭಿಸಿದಾಗ ಆ ಹೊಗಳಿಕೆ ಅತಿಶಯೋಕ್ತಿ ಎನ್ನುವಷ್ಟರ ಮಟ್ಟಿಗೆ ಇರುತ್ತದೆ. ಆಗ ಸಂದರ್ಶಕರ ಮಾತುಗಳು ಅಸಹ್ಯವಾಗಿ ಪರಿಣಮಿಸುತ್ತದೆ. ಇಂಥ ಅನುಭವ ಟ್ರಸ್ಟಿನಲ್ಲಿ ಆಯಿತು. ಟ್ರಸ್ಟಿನ ಮುಖ್ಯ ಕಾರ್ಯಕಲಾಪವಾಗಿದ್ದ ಕರುಣಾಗೃಹದ ಚಟುವಟಿಕೆಗಳನ್ನು ಮತ್ತು ಅಲ್ಲಿಯ ಬಾಲಕರನ್ನು ನೋಡಿ ಪ್ರಭಾವಿತರಾಗಿ ಸಂದರ್ಶನದ ಪುಸ್ತಕದಲ್ಲಿ ತಮ್ಮ ಮೆಚ್ಚುಗೆಯ ಮಾತುಗಳನ್ನು ಬರೆಯುತ್ತಿದ್ದರು. ಅಷ್ಟಕ್ಕೇ ಸೀಮಿತವಾಗಿದ್ದಲ್ಲಿ ಆ ಮೆಚ್ಚುಗೆಯ ಮಾತುಗಳಿಗೆ ಅರ್ಥ ಬರುತ್ತಿತ್ತು. ಆದರೆ ಸಂದರ್ಶಕರು ಕಾರ್ಯಕ್ರಮ ನಡೆಸುವ ಕಾರ್ಯಕರ್ತರನ್ನೂ ಹೊಗಳಿ ಬರೆಯಲಾರಂಭಿಸಿದ ಮೇಲೆ ಸಂದರ್ಶಕರ ಪುಸ್ತಕ ಸೇವಾಕಾರ್ಯಕ್ಕೆ ಪ್ರೇರಣೆ ಕೊಡುವ ಪುಸ್ತಕಕ್ಕಿಂತಲೂ ಅದು ಹೊನ್ನಶೂಲವಾಗುತ್ತಾ ಬಂತು. ಹೊಸ ಸಂದರ್ಶಕರ ಕೈಗೆ ಆ ಪುಸ್ತಕ ಕೊಡುವುದೆಂದರೆ ಈ ಮೊದಲಿನ ಸಂದರ್ಶಕರ ಹೊಗಳಿಕೆಯ ಮಾತುಗಳನ್ನು ಓದಿ ನೀವು ಸಹ ಅದೇ ರೀತಿ ಹೊಗಳಿಕೆಯ ಮಾತುಗಳನ್ನು ಬರೆಯಿರಿ ಎಂದೇ ಸೂಚ್ಯವಾಗಿ ತಿಳಿಸಿದಂತಾಗುತ್ತಿತ್ತು. ಆದ್ದರಿಂದ ಕಾಲ ಕ್ರಮೇಣ ಸಂದರ್ಶಕರ ಪುಸ್ತಕವನ್ನು ಚಾಲ್ತಿಯಲ್ಲಿರಿಸದೆ ಇರಲು ತೀರ್ಮಾನಿಸಲಾಯಿತು. ಈ ಮಾತಿಗೆ ಆಗಲೇ ನಲವತ್ತು ವರ್ಷಗಳಾಗಿ ಹೋಗಿರಬಹುದು. ಆ ಪುಸ್ತಕವನ್ನು

ನಿಷೇಧಿಸಿದ ಮೇಲೂ ನಲವತ್ತು ವರ್ಷಗಳ ಅವಧಿಯಲ್ಲಿ ಅನೇಕ ಮಹನೀಯರು ಸಂಸ್ಥೆಗೆ ಭೇಟಿಕೊಟ್ಟು ಹೋಗಿದ್ದಾರೆ. ಅವರೆಲ್ಲರೂ ಕೆಲಸದ ಬಗ್ಗೆ ತಮ್ಮ ಸಂತೋಷ ವ್ಯಕ್ತಿಪಡಿಸಿದ್ದಾರೆ. ತಮ್ಮ ಮಾತಿನಲ್ಲಿಯ ಮೆಚ್ಚುಗೆಯನ್ನು ಧನಸಹಾಯ ರೂಪದಲ್ಲಿ ತೋರಿಸಿದ್ದಾರೆ. ಸರ್ಕಾರದ ಸಹಾಯವಿಲ್ಲದ ಸಂಸ್ಥೆಗೆ ಸಂದರ್ಶಕರ ಪುಸ್ತಕ ಅಗತ್ಯವಿಲ್ಲ. ಆ ಸಂಸ್ಥೆಯ ಕಾರ್ಯ ಚಟುವಟಿಕೆಗಳು ನಡೆಯುತ್ತಿದ್ದರೆ, ಬೆಳೆಯುತ್ತಿದ್ದರೆ, ಮೆಚ್ಚುಗೆ ಪಡೆಯುತ್ತಿದ್ದರೆ, ಹಾಗೂ ಜನರಿಂದ ಹನಿಹನಿಯಾಗಿ ಸಹಾಯ ದೊರೆಯುತ್ತಿದ್ದರೆ ಆ ಸಂಸ್ಥೆಯ ಸೇವೆ ಸಮಾಜಕ್ಕೆ ಅಗತ್ಯವಿದೆಯೆಂದು ಮತ್ತು ಆ ಸೇವೆ ಮಾಡುವ ಸಂಸ್ಥೆಯ ಅಗತ್ಯವೂ ಇದೆ ಎಂದು ಸ್ವಯಂ ಸಿದ್ಧವಾಗುತ್ತದೆ. ಐವತ್ತು ವರ್ಷಗಳಿಂದ ಮೇಲುಕೋಟೆಯಂಥ ಪುಟ್ಟ ಗ್ರಾಮದಲ್ಲಿ ನಿರಂತರವಾಗಿ ಕೆಲಸಮಾಡಿಕೊಂಡು ಉಳಿದುಕೊಂಡು ಬಂದಿರುವ ಹಾಗೂ ಸೇವಾ ಕಾರ್ಯದ ಹೊಸ ದಿಗಂತದತ್ತ ದೃಷ್ಟಿ ಹಾಯಿಸಿರುವ ಹಾಗೂ ಆ ದಿಕ್ಕಿನತ್ತ ಹೆಜ್ಜೆ ಹಾಕುತ್ತಿರುವುದಕ್ಕೆ ಟ್ರಸ್ಟ್ ಒಮದು ಚಿಕ್ಕ ಉದಾಹರಣೆ ಮಾತ್ರ. ಸಂದರ್ಶಕರ ಪುಸ್ತಕ ಇಲ್ಲದೇ ಇರುವುದರಿಂದ ತಕ್ಕ ಮಟ್ಟಿಗೆ ನಷ್ಟವೂ ಉಂಟಾಗಿದೆ. ಅ ನಷ್ಟ ದ್ರವ್ಯದ್ದಾಗಿರದೆ ಭಾವದ್ದಾಗಿದೆ. ಒಂದು ವೇಳೆ ಆ ಪುಸ್ತಕವನ್ನು ಚಾಲ್ತಿಯಲ್ಲಿ ಇಟ್ಟಿದ್ದರೆ ಒಳ್ಳೆಯ ಮಹನೀಯರ, ಸಹೃದಯಿಗಳ ಭಾವನೆಗಳ ದಾಖಲೆ ಆಗುತ್ತಿತ್ತು ಮತ್ತು ಅವರ ಹಸ್ತಾಕ್ಷರ ದೊರೆಯುತ್ತಿದ್ದವು. ಗಾಂಧೀಜಿಯವರ ವಿಚಾರದ ಪ್ರಕಾರ ಸೇವಾ ಸಂಸ್ಥೆ ನಿಧಿಯಾಧಾರಿತವಾಗಿರದೆ ಜನಾಧಾರಿತವಾಗಿರಬೇಕು. ಆಯಾ ಕಾರ್ಯಕ್ರಮಕ್ಕೆ ಮಾತ್ರ ಸಮಾಜದಿಂದ ಹಣ ಪಡೆದು ಅಲ್ಲಿಗೆ ಹಣದ ಸಂಪರ್ಕವನ್ನು ನಿಲ್ಲಿಸಿ ಮುಂದುವರಿಯಬೇಕೆಂಬುದು ಅವರ ವಿಚಾರವಾಗಿತ್ತು. ಈ ವಿಚಾರದಲ್ಲಿ ಅದ್ಭುತ ಶಕ್ತಿಯಿದೆ. ಸಂಸ್ಥೆ ಸಜೀವವಾಗಿರಲು, ಪಾರದರ್ಶಕವಾಗಿರಲು, ಸಮಾಜದ ನಂಬಿಕೆ ಪಡೆಯಲು ಅರ್ಹವಾಗುತ್ತಾ ಇರುತ್ತದೆ. ಅಂಥ ಸಂಸ್ಥೆಯಲ್ಲಿ ಕೆಲಸಮಾಡುವ ಕಾರ್ಯಕರ್ತರು ನಿಷ್ಠಾವಂತರೂ, ಪ್ರಾಮಾಣಿಕರೂ, ಶ್ರಮಜೀವಿಗಳಾಗಿಯೂ ಇರುತ್ತಾರೆ. ಸಂಸ್ಥೆಯೂ ಸಹ ಸಮಾಜದ ಮೇಲೆ ಪ್ರಭಾವ ಬೀರಲು ಶಕ್ತವಾಗುತ್ತದೆ. ಇದೆಲ್ಲದರ ಜತೆಗೆ ಸಂಸ್ಥೆಯು ಯಾವುದೇ ಮತಮಾನ್ಯ, ರಾಜಕೀಯ ಪಕ್ಷಗಳ ಕೃಪಾಕಟಾಕ್ಷದಿಂದ ದೂರವಿದ್ದಲ್ಲಿ ಇನ್ನೂ ಹೆಚ್ಚಿನ ಪ್ರಯೋಜನ ಸಂಸ್ಥೆಯ ಆತ್ಮವಿಶ್ವಾಸ ಬೆಳೆಯಲು ಆಗುತ್ತದೆ. ಈ ವಿಚಾರಗಳ ಬೆಳಕಿನಲ್ಲಿ ಟ್ರಸ್ಟ್ ಕಳೆದ ಐವತ್ತು ವರ್ಷಗಳಿಂದ ನಡೆದುಕೊಂಡು ಬರಲು ಪ್ರಯತ್ನಿಸಿದೆ. ನೂರಕ್ಕೆ ನೂರು ಸಿದ್ಧಿಸಿಲ್ಲ. ಪ್ರಯತ್ನವಂತೂ ನಡೆದಿದೆ.

(ಮುಂದುವರಿಯುವುದು...)

ಸರ್ವೋದಯ ಆಂದೋಲನದ ಮುನ್ನಡೆ

ಸರ್ವೋದಯ ಆಂದೋಲನದ ಮುಂಚೂಣಿ ಸಂಸ್ಥೆಯಾದ ಕರ್ನಾಟಕ ಸರ್ವೋದಯ ಮಂಡಲಕ್ಕೆ ಶ್ರೀ ಪಿ.ಟಿ.ಕೃಷ್ಣಯ್ಯಂಗಾರ್, ಮೇಲುಕೋಟೆ; ಶ್ರೀ ಪಂಚಲಿಂಗೇಗೌಡ, ಎರೆಗೌಡನಹಳ್ಳಿ; ಶ್ರೀ ಸಿ.ಆರ್.ಮಂಜುನಾಥ, ಮಂಡ್ಯ ಈ ಮಹನಿಯರು ತಲಾ ಒಂದು ಸಾವಿರ ರೂಪಾಯಿ ಕೊಟ್ಟು ಸರ್ವೋದಯ ಆಂದೋಲನದ ಪೋಷಕರಾಗಿದ್ದಾರೆ. ಅಲ್ಲದೇ ಪ್ರತಿ ವರ್ಷ ತಮ್ಮ ಹಿರಿಯರ ಹೆಸರಿನಲ್ಲಿ ಆಂದೋಲನದ ಪೋಷಕತ್ವ ಮುಂದುವರೆಸಿಕೊಂಡು ಹೋಗುವ ಭರವಸೆ ನೀಡಿದ್ದಾರೆ. ಇವರೆಲ್ಲರಿಗೆ ಕರ್ನಾಟಕ ಸರ್ವೋದಯ ಮಂಡಲ ತುಂಬಾ ಆಭಾರಿಯಾಗಿದೆ. ೨೦೧೦ ಡಿಸಂಬರ್ ೧೪, ೧೫ ಈ ದಿನಾಂಕಗಳಲ್ಲಿ ಸರ್ವಸೇವಾಸಂಘ (ಅಖಿಲ ಭಾರತ ಸರ್ವೋದಯ ಮಂಡಲದ) ಕಾರ್ಯಕಾರಿ ಸಮಿತಿಯ ಸಭೆ ವಾರಣಾಸಿಯಲ್ಲಿ ನಡೆಯಿತು. ಈ ಸಭೆಯಲ್ಲಿ ಐವತ್ತು ಜನ ಸದಸ್ಯರು ಭಾಗವಹಿಸಿದ್ದರು. ಈ ಮೊದಲು ೨೦೧೦ ಸೆಪ್ಟೆಂಬರ್ ೨೮, ೨೯, ೩೦ ಈ ದಿನಾಂಕಗಳಲ್ಲಿ ಶ್ರೀ ಆದಿಚುಂಚನಗಿರಿ ಕ್ಷೇತ್ರದಲ್ಲಿ ನಡೆದಿದ್ದ ಕಾರ್ಯಕಾರಿ ಸಮಿತಿಯ ಕಾರ್ಯನ್ವಯದ ಬಗ್ಗೆ ಚರ್ಚೆ ನಡೆಯಿತು. ಸಭೆಗೆ ಆಗಮಿಸಿದ್ದ ವಿವಿಧ ರಾಜ್ಯಗಳ ಸರ್ವೋದಯ ಮಂಡಲಿಯ ಅಧ್ಯಕ್ಷರು ತಮ್ಮ ತಮ್ಮ ರಾಜ್ಯದ ಸರ್ವೋದಯ ಆಂದೋಲನದ ಪ್ರಗತಿಯನ್ನು ಮಂಡಿಸಿದರು. ಸರ್ವ ಸೇವಾ ಸಂಘದ ಮುಂದಿನ ಅರ್ಧವಾರ್ಷಿಕ ಅಧಿವೇಶನವನ್ನು ಒರಿಸ್ಸಾ ರಾಜ್ಯದ ಮಯೋರ್‌ಭಂಜ್ ಜಿಲ್ಲೆಯ ರಾಸಗೋವಿಂದಪುರ ಎಂಬಲ್ಲಿ ಏರ್ಪಡಿಸಲು ತೀರ್ಮಾನಿಸಲಾಯಿತು. ಮುಂಬಯಿ ಬಳಿ ಇರುವ ಬಹು ದೊಡ್ಡ ಕಸಾಯಿಖಾನೆಯಾದ ದೇವನಾರ್ ಎಂಬಲ್ಲಿ ಕಳೆದ ೧೯೮೫ ಜನವರಿ ೧೧ ರಿಂದ ಗೋಹತ್ಯೆ ವಿರುದ್ಧ ಸತ್ಯಾಗ್ರಹ ನಡೆಯುತ್ತಿದೆ. ಇಂದಿಗೆ ಸತ್ಯಾಗ್ರಹ ಪ್ರಾರಂಭವಾಗಿ ಇಪ್ಪತ್ತೈದು ವರ್ಷಗಳಾದವು. ಇದುವರೆಗೆ ದೇಶದಾದ್ಯಂತ ಬಂದ ಮೂರುವರೆ ಲಕ್ಷ ಸತ್ಯಾಗ್ರಹಿಗಳು ದೇವನಾರ್‌ನ ಸತ್ಯಾಗ್ರಹದಲ್ಲಿ ಭಾಗವಹಿಸಿದ್ದಾರೆ. ಇದು ಸರ್ವೋದಯ ಆಂದೋಲನದ ಭದ್ಧತೆ ಹಾಗೂ ಹೆಮ್ಮೆಯ ವಿಷಯವಾಗಿದೆ. ಈ ಸತ್ಯಾಗ್ರಹದಿಂದಾಗಿರುವ ಪ್ರತ್ಯಕ್ಷ ಮತ್ತು ಪರೋಕ್ಷ ಪರಿಣಾಮಗಳ ಬಗ್ಗೆ ಬಹಳಷ್ಟು ವಿಷಯ ಬರೆಯ ಬಹುದಾಗಿದೆ. ಮತ್ತು ಹೇಳ ಬಹುದಾಗಿದೆ. ಇದೇ ೨೦೧೦ ಡಿಸೆಂಬರ್ ಒಂದರಿಂದ ವಿನೋಬಾರವರ ಆಶ್ರಮ ಪವನಾರ್ ನಿಂದ ಯಾತ್ರೆಯನ್ನು ಹೊರಡಿಸಲಾಗುವುದು. ಅದು ಜನವರಿ ನಾಲ್ಕರಂದು ವಿನೋಬಾರವರ ಜನ್ಮಸ್ಥಳವಾದ ಗಾಗೋಡೆ ಎಂಬ ಸ್ಥಳವನ್ನು ತಲುಪುವುದು. ಅಲ್ಲಿಂದ ಯಾತ್ರೆಯು ಒಂಭತ್ತು ಹಳ್ಳಿಗಳು ನಗರಗಳ ಮೂಲಕ ಹಾಯ್ದು ಪವನಾರ್ ತಲುಪುವುದು. ಪಾದಯಾತ್ರೆ ಯಾವ ಪ್ರದೇಶದಿಂದ ಹೆಚ್ಚಾಗಿ ಗೋವುಗಳು ದೇವನಾರ ಕಸಾಯಿಖಾನೆಗೆ ಹೋಗುವುದೋ ಆ ಪ್ರದೇಶದ ಮೂಲಕವೇ ಹೋಗುವುದು. ಗಾಗೋಡೆಯಿಂದ ಪವನಾರ್ ವರೆಗಿನ ದೂರ ೭೦

ಕಿ.ಮೀ. ಈ ದೂರವನ್ನು ಕಾಲ್ನಡಿಗೆಯಿಂದಲೇ ಕ್ರಮಿಸಲಾಗುವುದು. ಈ ಯಾತ್ರೆಯು ಜನವರಿ ೧೧ರಂದು ದೇವನಾರ ತಲುಪುವುದು. ಆ ದಿನ ದೇವನಾರ್‌ನಲ್ಲಿ ಪ್ರಾರ್ಥನೆಯ ಮೂಲಕ ಸತ್ಯಾಗ್ರಹ ನಡೆಯುವುದು. ನಂತರ ದೇಶದಾದ್ಯಂತ ಬರುವ ಸತ್ಯಾಗ್ರಹಿಗಳೆಲ್ಲರೂ ಅಜಾದ್ ಮೈದಾನದಲ್ಲಿ ಸೇರುವರು. ಅದೇ ಸಮಯಕ್ಕೆ "ಗೋವು ಉಳಿಸಿ" ಆಂದೋಲನದ ಸದಸ್ಯರು ಬಂದು ಸೇರಿ ಕೊಳ್ಳುವರು. ನಂತರ ಮೂರು ಗಂಟೆ ಅವಧಿಯ ಧರಣಿಯನ್ನು ನಡೆಸಲಾಗುವುದು. ಅಲ್ಲಿಂದ ಕೆಲವು ಪ್ರತಿನಿಧಿಗಳು ಮಹಾರಾಷ್ಟ್ರದ ಮುಖ್ಯಮಂತ್ರಿಯವರಿಗೆ ವಿಜ್ಞಾಪನಪತ್ರ ಸಲ್ಲಿಸಲು ಹೋಗುವರು. ಜನವರಿ ಹನ್ನೆರಡರಿಂದ ಹದಿನಾರನೆ ತಾರೀಖಿನವರೆಗೆ ದೇವನಾರ್ ಸತ್ಯಾಗ್ರಹ ಶಿಬಿರದಲ್ಲಿ ಜಾಗೃತಿ ಕಾರ್ಯಕ್ರಮ ನಡೆಸಲಾಗುವುದು. ಪ್ರಸಿದ್ಧ ಸರ್ವೋದಯ ಚಿಂತಕರು ಉಪನ್ಯಾಸ ನೀಡುವರು. ಯಾರಿಗೆ ಪಾದಯಾತ್ರೆಯಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲವೋ ಅಂಥವರು ನೇರವಾಗಿ ದೇವನಾರ್ ಸತ್ಯಾಗ್ರಹ ಶಿಬಿರ ಸರ್ವೋದಯ ಆಸ್ಪತ್ರೆ (ಘಾಟ್‌ಕೂಪರ್, ಪಶ್ಚಿಮ)ಮುಂಬಯಿ ಅಲ್ಲಿಗೆ ರೈಲಿನಲ್ಲಿ ಬಂದು ಭಾಗವಹಿಸಬಹುದು. ಇಲ್ಲವಾದಲ್ಲಿ ಸರ್ವೋದಯ ಕಾರ್ಯಕರ್ತರು, ಸಾವಯುವ ಕೃಷಿಕರು, ಬಳಕೆದಾರರು ತಮ್ಮ ತಮ್ಮ ಪ್ರದೇಶದಲ್ಲಿ ಒಂದು ದಿನದ ಸತ್ಯಾಗ್ರಹ ನಡೆಸಬಹುದು. ತನ್ಮೂಲಕ ಗೋ ರಕ್ಷಣೆಗಾಗಿ ಜಗತ್ತಿನಲ್ಲಿಯೇ ಅತ್ಯಂತ ದೀರ್ಘಕಾಲದ ೨೫ ವರ್ಷದ ಸತ್ಯಾಗ್ರಹಕ್ಕೆ ತಮ್ಮ ಬೆಂಬಲ ಸೂಚಿಸಬಹುದು.

* * * *

ಮಂಕುತಿಮ್ಮನ ಕಗ್ಗವನ್ನಾಧರಿಸಿದ ನಾಟಕ:
ಪರಕಿಸು ಜೀವನಾರ್ಥ

ಡಿ.ವಿ.ಜಿಯವರ ಮಂಕುತಿಮ್ಮನ ಕಗ್ಗ ಕಾವ್ಯ ಕನ್ನಡ ಸಾಹಿತ್ಯ ಲೋಕದಲ್ಲಿ ಧ್ರುವತಾರೆ. ಈ ಕಗ್ಗವನ್ನು ಓದಿ ಆನಂದಿಸದ ಕನ್ನಡಿಗನಿಲ್ಲ. ಒಂದು ವೇಳೆ ಆ ರೀತಿ ಮಾಡದೆ ಇದ್ದರೆ ಅಂತಹ ಕನ್ನಡಿಗನ ಜೀವನ ವ್ಯರ್ಥ. ಈ ಶ್ರೇಷ್ಠ ಕಾವ್ಯವನ್ನು ಜನಪ್ರಿಯಗೊಳಿಸಬೇಕಾದುದು ಅಗತ್ಯ. ಈಗಾಗಲೇ ಕೆಲವರು ಕಗ್ಗದಲ್ಲಿಯ ನುಡಿಗಳನ್ನು ಕಂಠಪಾಠಮಾಡಿ ಪ್ರವಚನ ಕೊಡುವುದುಂಟು ಅಲ್ಲದೆ ವಿದ್ಯಾರ್ಥಿಗಳಿಗೆ ವಿವಿಧ ಬಗೆಯ ಸ್ಪರ್ಧೆಗಳನ್ನು ಏರ್ಪಡಿಸುವುದುಂಟು. ಕಗ್ಗವನ್ನು ಜನಪ್ರಿಯಗೊಳಿಸುವುರತ್ತ ರಂಗಭೂಮಿ ಕೂಡ ಒಂದು ಪರಿಣಾಮಕಾರಿ ಮಾಧ್ಯಮವಾಗಬಲ್ಲದು.

ಈಗಾಗಲೇ ತಮ್ಮ ಬಭ್ರುವಾಹು, ಮೋಕ್ಷಸಂಗೀತ ಮುಂತಾದ ರಂಗಕೃತಿಗಳಿಂದ ಹೆಸರುವಾಸಿಯಾಗಿರುವ ಮತ್ತು ಹಲವಾರು ನಾಟಕಗಳನ್ನು ನಿರ್ದೇಶನ ಮಾಡಿರುವ ಹಾಗೂ ಅನೇಕ ನಾಟಕಗಳಿಗೆ ಸಂಗೀತ ನೀಡಿರುವ ರಂಗಕರ್ಮಿ ಮುರಳಿ ಶೃಂಗೇರಿಯವರು ಮಂಕುತಿಮ್ಮನ ಕಗ್ಗವನ್ನಾಧರಿಸಿ ಶಾಲಾಮಕ್ಕಳು ಅಭಿನಯಿಸುವಂತೆ ಸರಳ ರೀತಿಯಲ್ಲಿ "ಪರಕಿಸು ಜೀವನಾರ್ಥ" ಎಂಬ ಪುಟ್ಟ ನಾಟಕವನ್ನು ರಚಿಸಿದ್ದಾರೆ. ಈ ನಾಟಕಕ್ಕೆ ಅಗತ್ಯವಾದ ಸಂಗೀತವನ್ನು ಸ್ವತಃ ಮುರಳಿ ಶೃಂಗೇರಿಯವರೇ ಒದಗಿಸಿದ್ದಾರೆ. ವಿನ್ಯಾಸ ಮತ್ತು ನಿರ್ದೇಶನವನ್ನು ಚ.ನಾರಾಯಣಸ್ವಾಮಿ ನಿರ್ವಹಿಸಿದ್ದಾರೆ. ನಾಗಮಂಗಲ ತಾಲ್ಲೂಕು ಕೋಟೆ ಬೆಟ್ಟದಲ್ಲಿರುವ ಮುರಾರ್ಜಿ ದೇಸಾಯಿ ವಸತಿ ಶಾಲೆಯ ಮಕ್ಕಳು ಈ ನಾಟಕ ಅಭಿನಯಿಸಿ ಸಹೃದಯರ ಅಭಿನಯಕ್ಕೆ ಪಾತ್ರರಾಗಿದ್ದಾರೆ. ಹೆಚ್ಚಿನ ವಿವರಗಳಿಗೆ ಮುರಳಿ ಶೃಂಗೇರಿಯವರನ್ನು ದೂರವಾಣಿ : ೯೧೬೪೮೪೪೫೦೬ ಮೂಲಕ ಸಂಪರ್ಕಿಸಬಹುದು.

ಖಾದಿ ವಿಚಾರ

ಬನಾರಸ್‌ನಲ್ಲಿ ನೂಲುಗಾರಿಕೆ

ಪ್ರೋ॥ ರಾಮದಾಸ್‌ಗೌರ್ ಎಂಬುವವರು ಒಂದು ಮನೋರಂಜಕ ವರದಿಯನ್ನು ಕಳುಹಿಸಿದ್ದಾರೆ. ಅದರಲ್ಲಿ ಅವರು ಯಾವ ಪ್ರಕಾರ ಬನಾರಸ್ ಪುರಸಭೆಯ ಶಾಲೆಗಳ ವಿದ್ಯಾರ್ಥಿಗಳ ಮಧ್ಯೆ ಚರಖಾವನ್ನು ಪ್ರವೇಶ ಮಾಡಿಸಿದರು ಎಂಬುದನ್ನು ತಿಳಿಸಿದ್ದಾರೆ. ಅವರು ನಲವತ್ತು ಹಳೆಯ ಚರಖಾಗಳನ್ನು ಮತ್ತು ಹಂಜಿ ಮಾಡುವ ಉಪಕರಣಾದಿಗಳನ್ನು ಖರೀದಿಸಿದರು. ನಂತರ ಅವರು ತಮ್ಮ ಜೊತೆಯಲ್ಲಿಯ ಹದಿಮೂರು ಶಿಕ್ಷಕರಿಗೆ ನೂಲು ತೆಗೆಯುವುದನ್ನು ಕಲಿಸಿದರು. ಆ ಶಿಕ್ಷಕರು ತಮ್ಮ ಬೇರೆ ಸಹ ಶಿಕ್ಷಕರಿಗೆ ಕಲಿಸಿದರು. ಈ ರೀತಿ ಒಂದು ತಿಂಗಳಿಗಿಂತ ಹೆಚ್ಚು ಸಮಯದಲ್ಲಿ ೧೭೪ ಶಿಕ್ಷಕರು ನೂಲು ತೆಗೆಯುವುದರಲ್ಲಿ ಪ್ರವೀಣರಾದರು. ದಾಮದಾಸರ ಪತ್ನಿ ಮತ್ತು ಪುತ್ರಿ ಇದರಲ್ಲಿ ನೆರವಾದರು. ಈಗ ಗೌರ್ ಅವರು ಅಭಿಮಾನದೊಂದಿಗೆ ಹೀಗೆ ಹೇಳುತ್ತಾರೆ:– ಪ್ರತಿ ಪಾಠಶಾಲೆಯಲ್ಲಿ ಚರಖಾ–ಶಿಕ್ಷಕರನ್ನು ಇಟ್ಟಿದ್ದರೆ ಕಡಿಮೆ ಎಂದರೂ ವರ್ಷಕ್ಕೆ ಹತ್ತು ಸಾವಿರ ರೂಪಾಯಿ ಖರ್ಚಾಗುತ್ತಿತ್ತು. ಸುಮಾರು ೫–೬ ವಾರಗಳ ವರೆಗೆ ನಾನು ನನ್ನ ಕೇವಲ ನಾಲ್ಕು ಗಂಟೆ ಸಮಯವನ್ನು ಹಾಲಿ ಶಿಕ್ಷಕರಿಗೆ ನೂಲುವುದನ್ನು ಕಲಿಸಲು ಉಪಯೋಗಿಸಿದೆ. ಈಗ ಹಣದ ಸಮಸ್ಯೆ ಬಗೆಹರಿಯಿತು.

ಮುಂದುವರಿದು ಅವರು ಹೀಗೆ ಹೇಳುತ್ತಾರೆ ಈಗ ನೂಲುವುದನ್ನು ಅಥವಾ ಹಂಜಿ ಮಾಡುವುದನ್ನು ತಿಳಿಯದೆ ಇರುವ ಯಾವುದೇ ಶಿಕ್ಷಕ ಉಳಿದಿಲ್ಲ. ಅಷ್ಟೇ ಅಲ್ಲ, ಇನ್ನು ಮುಂದೆ ನೂಲುವ, ಹಂಜಿಮಾಡುವ ಕ್ರಿಯೆ ಗೊತ್ತಿಲ್ಲದಂಥ ಯಾವುದೇ ಸ್ತ್ರೀ ಅಥವಾ ಪುರುಷನನ್ನು ಶಿಕ್ಷಕರನ್ನಾಗಿ ತೆಗೆದುಕೊಳ್ಳುವುದಿಲ್ಲ.

ಗೌರ್ ಅವರು ತಮ್ಮ ಮುಂದಿನ ಯೋಜನೆಯನ್ನು ಈ ರೀತಿ ಘೋಷಿಸುತ್ತಾರೆ:– ಈ ಕಷ್ಟದ ಪರಿಸ್ಥಿತಿ ಪರಿಹಾರಗೊಂಡ ಮೇಲೆ ನಾನು ಪುರಸಭೆಯ ವಿಭಾಗವಾರು ವಿವರಗಳನ್ನು ತಯಾರಿಸಿದ್ದೇನೆ. ೨೬ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೩೫೦ ಚರಖಾಗಳನ್ನು ಸ್ಥಾಪಿಸಬೇಕು, ಕಡಿಮೆಯೆಂದರೂ ೭೦೦ ಹುಡುಗರಿಗೆ ಹತ್ತಿ ಹಿಂಜುವುದು ಮತ್ತು ನೂಲು ತೆಗೆಯುವುದನ್ನು ಕಲಿಸುವುದು ಹಾಗೂ ಖಾದಿಯ ನೇಯ್ಗೆಗಾಗಿ ನೇಯ್ಗೆ ವಿಭಾಗದಲ್ಲಿ ಆರು ಮಗ್ಗಗಳಿರಬೇಕು. ಓರ್ವ ನೇಯ್ಗೆ–ಶಿಕ್ಷಕ ಓರ್ವ–ನಿರೀಕ್ಷಕ ಓರ್ವ–ಬಡಗಿ ಇರಬೇಕು. ಇವರೆಲ್ಲರಿಗೆ ಪ್ರತಿಯೊಬ್ಬ ವಿದ್ಯಾರ್ಥಿ ಅರ್ಧಗಂಟೆಕಾಲ ದಿನಾಲೂ ಕೆಲಸ ಮಾಡುವುದಕ್ಕೆ ಸಾಕಾಗುವಷ್ಟು ಹತ್ತಿ ಕೊಡಬೇಕು ಇದಕ್ಕಾಗಿ ಪ್ರತಿವರ್ಷ ಆರುಸಾವಿರ ರೂಪಾಯಿ ಬೇಕು, ಆದರೆ ಪುರಸಭೆಯು ಈ ವಿಷಯದ ಬಗ್ಗೆ ಚಿಂತೆಯಲ್ಲಿ ಬಿತ್ತು. ಅದು ತನ್ನ ಸಭೆಯಲ್ಲಿ ಎರಡು ತಿಂಗಳವರೆಗೆ ಈ ಪ್ರಶ್ನೆಯನ್ನು ಮುಂದಕ್ಕೆ ಹಾಕುತ್ತ ಹೋಯಿತು. ಕೊನೆಗೆ ಕಳೆದ

ಜುಲೈ ೨೬ರಂದು ಪುರಸಭೆಯು ಒಂದು ವರ್ಷಕ್ಕಾಗಿ ಕೇವಲ ಮೂರು ಸಾವಿರ ರೂಪಾಯಿ ಮಂಜೂರುಮಾಡಿತು. ಇಂಥ ಪರಿಸ್ಥಿತಿಯಲ್ಲಿ ಹತ್ತಿಗೆ ಸಂಬಂಧಿಸಿದ ಹಣವನ್ನು ಕೈ ಬಿಡಬೇಕಾಗಿ ಬಂತು. ಎರಡನೆಯ ವಿಭಾಗದಲ್ಲಿಯೂ ಇದೇ ರೀತಿ ಕತ್ತರಿ ಪ್ರಯೋಗ ಮಾಡಬೇಕಾಯಿತು. ಈಗ ನಾನು ಪುರಸಭೆಯವರಿಂದ ಕೇವಲ ೩೦೦ ಚರಖಾ ಮತ್ತು ಸಾಬರಮತಿ ಆಶ್ರಮ ನಮೂನೆಯ ೬೦೦ ಚರಖಾಗಳನ್ನು ಕೇಳುತ್ತಿದ್ದೇನೆ. ಆಶ್ರಮದಲ್ಲಿ ನೋಡಿದ್ದರ ಅನುಭವದ ಮೇಲೆ ಸ್ವಲ್ಪ ಸುಧಾರಣೆ ಮಾಡುವುದರಿಂದ ಸಾವಿರಕ್ಕೂ ಹೆಚ್ಚು ಬಾಲಕ ಬಾಲಕಿಯರು ದಿನಾಲೂ ಚರಖಾ ನಡೆಸಿ ಒಳ್ಳೆಯ ನೂಲನ್ನು ತೆಗೆಯಲು ಸಮರ್ಥರಾಗುವರೆಂದು ನನ್ನ ನಿರೀಕ್ಷೆಯಿದೆ. ಇನ್ನು ಕೇವಲ ಚರಖಾಗಳನ್ನು ತಮ್ಮ ಮನೆಯಲ್ಲಿ ತಯಾರಿಸುವುದು ಬಾಕಿಯಿದೆ. ಅಗತ್ಯವಾದ ಮಾಹಿತಿ ಹೇಳಿಕೊಡುತ್ತೇನೆ. ತಂದೆ ತಾಯಿಯರು ಕೇವಲ ಅರಳೆ ವ್ಯವಸ್ಥೆ ಮಾಡುವರು. ನೂಲಿನ ಒಡೆಯರು ಅವರೆ ಆಗಿರುವರು ಒಂದು ವೇಳೆ ಅವರು ಬಯಸಿದರೆ ನಮಗೆ ನೇಯ್ಗೆಯ ಕೂಲಿಕೊಟ್ಟು ಖಾದಿ ನೇಯಿಸಿಕೊಳ್ಳುವರು ನಾನು ಹೊಲಿಗೆ ಕಲಿಸುವ ವ್ಯವಸ್ಥೆಯನ್ನೂ ಮಾಡುತ್ತಿದ್ದೇನೆ. ಅದರಿಂದಾಗಿ ಖಾದಿಯ ಹೊಲಿಗೆ ಅಗ್ಗವಾಗುವುದು.

ಜನರು ಈ ಪ್ರಯೋಗವನ್ನು ಕುತುಹಲದಿಂದ ಮತ್ತು ಉದಾರತೆಯಿಂದ ನೋಡುವರು. ಬೇರೆ ಶಿಕ್ಷಕರು ಕೂಡ ಪ್ರೊ॥ ರಾಮದಾಸ್‌ಗೌರ್‌ರ ಅನುಕರಣೆ ಮಾಡುವರೆಂದು ನಾನು ಆಶೀಸುತ್ತೇನೆ.

– ಗಾಂಧಿಯವರ ಪ್ರಶ್ನೋತ್ತರದಿಂದ

ಸಂತಾಪ

ಕಳೆದ ನವೆಂಬರ್ ೧೪ರಂದು ದೇಶದ ಹಿರಿಯ ಗಾಂಧೀ ವಿಚಾರದ ಕ್ರಿಯಾಶೀಲ ಚಿಂತಕ, ಪ್ರತಿಷ್ಠಿತ ಅರ್ಥಶಾಸ್ತ್ರಜ್ಞರಾಗಿದ್ದ ಎಲ್.ಸಿ.ಜೈನ್‌ರವರು ನಿಧನರಾದರು. ಅವರು ಭಾರತದ ಬಡತನ ಗ್ರಾಮ ಮಟ್ಟದಲ್ಲಿ ಇರಕೂಡದೆಂದು ನಿರಂತರವಾಗಿ ಹೋರಾಟ ಮಾಡಿದ್ದರು. ಜನತೆಯಿಂದ ವಿದೂರವಾದ ಸರ್ಕಾರದ ನೀತಿಗಳನ್ನು ನಿರಂತರ ಖಂಡಿಸುತ್ತಿದ್ದರು. ತಲೆಕೆಳಕಾದ ಅಭಿವೃದ್ಧಿ ನೀತಿಯ ಕಟು ವಿಮರ್ಶಕರಾಗಿದ್ದರು. ಹೀಗೆ ೮೫ ವರ್ಷಗಳ ತುಂಬು ಜೀವನ ನಡೆಸಿದ್ದ ಶ್ರೀ ಎಲ್.ಸಿ.ಜೈನ್‌ರವರ ನಿಧನಕ್ಕೆ 'ಜನಪದ ವಿಚಾರ'ವು ತನ್ನ ಸಂತಾಪ ವ್ಯಕ್ತಪಡಿಸುತ್ತದೆ.

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ

ತನ್ನ ಬಾಂಧವ್ಯವನ್ನು ಸದಾಸ್ಮರಿಸುತ್ತದೆ.

ಶ್ರೀಮತಿ ಭಾರತೀ ದೇಸಾಯಿ – ಬೆಂಗಳೂರು

ಶ್ರೀ ಕೆ.ಪ್ರಭಾಕರ್ – ಮಂಡ್ಯ

ಇವರು ಪತ್ರಿಕೆಯ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಹೊಸದಾಗಿ ಪತ್ರಿಕೆಗೆ ಚಂದಾದಾರರಾದ,

ಶ್ರೀ ಆರ್.ವೈ. ಹಲ್ಕಿ – ನಂಜನಗೂಡು

ಇವರಿಗೆ ಜನಪದ ವಿಚಾರದ ಕೃತಜ್ಞತೆಗಳು.

"ಜನಪದ ವಿಚಾರ" ವೈಚಾರಿಕ ಮಾಸ ಪತ್ರಿಕೆಯನ್ನು ನೀವು ನೋಡಿದ್ದೀರಿ.

ಸಧ್ಯಕ್ಕೆ ಕರ್ನಾಟಕದಲ್ಲಿ ಗಾಂಧೀ ವಿಚಾರವನ್ನು ಮುಖ್ಯವಾಗಿ, ಸರ್ವೋದಯ ವಿಚಾರವನ್ನು ಜನತೆಗೆ ತಿಳಿಸುತ್ತಿರುವಂಥ ಪತ್ರಿಕೆ 'ಜನಪದ ವಿಚಾರ' ಒಂದೇ. ಈಗ ಭಾರತದಲ್ಲಿ ಮತ್ತು ವಿಶ್ವದ ಬೇರೆಡೆಯಲ್ಲಿ ಸಂಭವಿಸುತ್ತಿರುವ ಸಮಾಜ ಹಿತವಿರೋಧಿ ಬೆಳವಣಿಗೆಗಳನ್ನು ಸರಿಯಾಗಿ ವಿಶ್ಲೇಷಿಸಿ ಸರ್ವೋದಯ ಸಮಾಜ ರಚನೆಯ ಅಗತ್ಯವಿದೆಯೆಂದು ಜನತೆಗೆ ಮುಖ್ಯವಾಗಿ ಯುವಜನತೆಗೆ ತಿಳಿಸುವ ಮಹದ್ಕಾರ್ಯವನ್ನು ಮಾಡುವುದು ಇಂದಿನ ಯುಗಧರ್ಮವಾಗಿದೆ.

ಈ ಅಭಿಪ್ರಾಯವನ್ನು ಗಮನದಲ್ಲಿರಿಸಿಕೊಂಡು ಜನಪದ ವಿಚಾರಕ್ಕೆ ಯೋಗ್ಯವಾದ ಲೇಖನಗಳನ್ನು ಬರೆಯಬಲ್ಲ ಸಮಾನಮನಸ್ಕರ ಬಳಗವೊಂದನ್ನು ರೂಪಿಸಲು ಉದ್ದೇಶಿಸಿದ್ದೇವೆ. ನೀವು ಸಮಾನಮನಸ್ಕರಲ್ಲಿ ಒಬ್ಬರಾಗಿರುವುದರಿಂದ ಜನಪದ ವಿಚಾರದ ಲೇಖಕರ ಬಳಗಕ್ಕೆ ನಿಮ್ಮನ್ನು ಗೌರವಾನ್ವಿತ ಲೇಖಕರನ್ನಾಗಿ ಆಯ್ಕೆಮಾಡಿಕೊಳ್ಳ ಬಯಸಿದ್ದೇವೆ.

ನೀವು ತಿಂಗಳಿಗೆ ಒಂದು ಲೇಖನವನ್ನು ಅಥವಾ ಪ್ರಚಲಿತ ವಿಷಯಗಳ ಬಗ್ಗೆ ನಿಮ್ಮ ಪ್ರತಿಕ್ರಿಯೆಗಳನ್ನು ಬರೆದು ಆಯಾ ತಿಂಗಳ ೧೫ ನೇ ತಾರೀಖಿನೊಳಗೆ ಕಳುಹಿಸಿಕೊಡಬೇಕೆಂದು ಕೋರುತ್ತೇವೆ.

–ಸಂಪಾದಕರು

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ

ತೆರೆದ-ಅಂಚೆ

KA / SK / MND / 470 / 2009-2011
Regd. no. KAR / KAN / 2000 / 3820

ಶ್ರೀಮತಿ/ ಶ್ರೀ..

....

....

jANAPADA VICHA...
Kannada Monthl... ...gest Edited Printed and Published by Surendra Koulagi at Janapada Seva Trust Melkote,
Dist- Mandya – 571431 Phone: 08236-316344 e-mail : janapada@yahoo.com web : janapada.net
Printed at Sanketh, Mudrana, Me...kote.